|| ಶ್ರೀಮಧ್ವೇಶಾಯ ನಮಃ ||

ಗದ್ಯಪದ್ಯಗಳ ಭಾಗವತ

ಶ್ರೀಭಾಗವತ ಪ್ರಾರಂಭ

ಆಕಾಶಕಭಿಮಾನಿ ಶ್ರೀಕಂಠವರಪುತ್ರ
ಏಕದಂತನೆ ವಿಘ್ನೇಶ ಶರಣು || ಪ ||
ಏಕದಂತನೆ ವಿಘ್ನೇಶ ನಿನ್ನಪದ ।
ಏಕ ಚಿತ್ತದಲಿ ಬಲಗೊಂಬೆ ।
ಗಣಪತಿಯೆ ಮತಿಯ ಕರುಣಿಸು ||೧||

ಮಚ್ಛಕೂರ್ಮವರಹ,ನರಸಿಂಹ,ವಾಮನ,
ಸ್ವಚ್ಛ ಭೃಗುರಾಮ, ರಘುರಾಮ, ಕೃಷ್ಣ, ಬೌದ್ಧ,
ಅಚ್ಚ ಕಲ್ಕಿಯ ಬಲಗೊಂಬೆ
ಭೀಮೇಶಕೃಷ್ಣವಲಿ ಎಂದು ||೨||

ನೈಮಿಷಾರಣ್ಯ ಎಂಬುದು ಆರ್ಯಾವರ್ತದ ಒಂದು ಪುಣ್ಯಕ್ಷೇತ್ರ. ಸೂತಪುರಾಣಿಕರು ಶೌನಕಾದಿಮುನಿಗಳಿಗೆ ಪುರಾಣಗಳನ್ನು ಉಪದೇಶಿಸಿದ ದಿವ್ಯಸ್ಥಳ. ಉಳಿದ ಪುರಾಣಗಳನ್ನು ವಿವರವಾಗಿ ಕೇಳಿದ ಮುನಿಗಳು, ಕಲಿಯುಗದಲ್ಲಿ ಮನುಜರ ಆಯುಷ್ಯ-ಭಾಗ್ಯ-ಬುದ್ಧಿಗಳು ಅಲ್ಪ. ಈ ಯುಗದಲ್ಲಿನ ಜನರನ್ನು ಉದ್ಧಾರ ಮಾಡುವ ಭಗವತ್ಕಥೆಯನ್ನು ಅರುಹಬೇಕೆಂದು ಪ್ರಾರ್ಥಿಸಿದರು. ಆಗ ಸೂತರು ಭಾಗವತಪುರಾಣವನ್ನು ಉಪದೇಶಿಸಲು ಆರಂಭಿಸಿದರು.

ಒಂದನೇ ಸ್ಕಂಧ

ನಾರಾಯಣನ ವ್ಯಾಖ್ಯಾನ, ಕುಂತೀದೇವಿ ಸ್ತೋತ್ರ, ಪರೀಕ್ಷಿತರಾಜನ ಉತ್ಪತ್ತಿ, ಶಾಪ, ಶುಕಾಚಾರ್ಯರ ಸಂದರುಶನ

ನಾರಾಯಣನ ವ್ಯಾಖ್ಯಾನ – ಪಾಂಡವರ, ಕೌರವರ ಯುದ್ಧಮುಗಿಸಿ ಪಾಂಡವರಿಗೆ ಪಟ್ಟ ಕಟ್ಟಿ ದ್ವಾರಕೆಗೆ ಪರಮಾತ್ಮ ಹೊರಡಲು, ಧರ್ಮರಾಜನು ಯುದ್ಧದಲ್ಲಿ

ಎಲ್ಲರನ್ನು ಕೊಂದದ್ದಕ್ಕೆ ನನಗೆ ಪಾಪ ಬಂದಿದೆ. ಏನು ಮಾಡಲಿ? ಎನ್ನಲು ನಾರಾಯಣನು ಎಷ್ಟು ಉಪದೇಶಮಾಡಿದರೂ ಮನಸ್ಸಿಗೆ ಬಾರದಿರಲು, ರಣರಂಗದಲ್ಲಿ ಶರಪಂಜರದಲ್ಲಿ ಮಲಗಿದ್ದ ಭೀಷ್ಮಾಚಾರ್ಯರಲ್ಲಿ ತಾನೇ ನಿಂತು ಉಪದೇಶಮಾಡಿದನು. ಅವನ ಮನಸ್ಸನ್ನು ಶುಚಿಗೊಳಿಸಿದನು.

ಕುಂತೀದೇವಿಯ ಸ್ತೋತ್ರ — ಕುಂತೀದೇವಿಯು 'ಪರಮಾತ್ಮ ನಮಗೆ ಸುಖವನ್ನು ಕೊಡಬೇಡ. ಸುಖವಿದ್ದರೆ ನಿನ್ನ ನೆನಪು ಆಗುವುದಿಲ್ಲ. ಆದ್ದರಿಂದ ನಮಗೆ ಸದಾ ಕಷ್ಟವನ್ನೇ ಕೊಡು. ಸದಾ ನಿನ್ನ ನಾಮಾಮೃತ ನನ್ನ ಬಾಯಲ್ಲಿ ಇರುವಂತೆ ಮಾಡು' ಅಂತ ಕುಂತಿಯು ಧ್ಯಾನಮಾಡುತ್ತಿರಲು ಅವಳನ್ನು ಸಂತೈಸಿ ದ್ವಾರಕೆಗೆ ಹೋಗಲು ರಥದಲ್ಲಿ ಕುಳ್ಳಿರಲು ಉತ್ತರೆಯು 'ಹಾ, ಪರಮಾತ್ಮ! ನನ್ನ ಹೊಟ್ಟೆಗೆ ಬ್ರಹ್ಮಾಸ್ತ್ರ ಬಂದಿದೆ. ಹೊಟ್ಟೆ ಉರಿಯುತ್ತಿದೆ. ಕಾಪಾಡು ಪಾಂಡವರ ವಂಶ ಉಳಿಸು' ಅಂತಾ ಅನ್ನಲು, ಅವಳ ಹೊಟ್ಟೆಯಲ್ಲಿ ಚಕ್ರವನ್ನು ಅಡ್ಡವಿಟ್ಟು ಉರಿಯನ್ನು ಶಾಂತ ಮಾಡಿದನು. ಪ್ರಸವದವರೆಗೆ ಗದಾಪಾಣಿಯಾಗಿ ಗರ್ಭಗತ ಶಿಶುವನ್ನು ಪೊರೆದ. ಕೂಸು ಹುಟ್ಟಲು ಸತ್ತು ಹೋಗಿತ್ತು. ಪರಮಾತ್ಮನು ಅದನ್ನು ಬದುಕಿಸಿದನು. 'ಬ್ರಾಹ್ಮಣರಾದ ಅಶ್ವತ್ಥಾಮರ ಶಾಪವು ಸುಳ್ಳಾಗಬಾರದು. ತನ್ನ ಮಾತು ನಿಜವಾಗಬೇಕು' ಅನ್ನುವುದನ್ನು ತೋರಿಸಿ, ದ್ವಾರಕೆಗೆ ಹೋದ ಮೇಲೆ ಬ್ರಾಹ್ಮಣರ ಶಾಪದಿಂದ ವಂಶ ನಾಶವಾಗಲು ತಾನು ಮೂಲರೂಪವನ್ನು ಸೇರಿದನು. ಪರಮಾತ್ಮನು ಪರಂಧಾಮಕ್ಕೆ ಹೋದುದ್ದನ್ನು ಕೇಳಿ ಪಾಂಡವರು ಪರೀಕ್ಷಿತಗೆ ಪಟ್ಟ ಕಟ್ಟಿ ತಾವು ತಮ್ಮ ಮೂಲರೂಪವನ್ನು ಸೇರಿದರು. ಪರೀಕ್ಷಿತನು ಅನೇಕವರ್ಷ ರಾಜ್ಯಪಾಳಿ ಒಮ್ಮೆ ಬೇಟೆಗೆ ಹೋದಾಗ ನೀರಡಿಸಿ ಶಮೀಕಋಷಿಗಳಲ್ಲಿ ನೀರು ಕೇಳಲು, ಅವರು ಧ್ಯಾನದಲ್ಲಿ ಮಗ್ನರಾಗಿದ್ದರಿಂದ ನೀರುಸಿಗಲಿಲ್ಲವೆಂದು ಸಿಟ್ಟು ಬಂದು, ಸತ್ತ ಹಾವನ್ನು ಅವರ ಕೊರಳಲ್ಲಿ ಹಾಕಿ ಹೋದನು. ಅವರ ಮಗ ಶೃಂಗಿಯು ನೋಡಿ ಸಿಟ್ಟಿನಿಂದ ರಾಜನಿಗೆ ಏಳು ದಿವಸದಲ್ಲಿ ತಕ್ಷಕನು ಕಚ್ಚಿ ಸಾಯಲೆಂದು ಶಾಪ ಕೊಟ್ಟನು. ತಂದೆ ಧ್ಯಾನದಿಂದ ಎದ್ದ ಮೇಲೆ ಸುದ್ದಿ ಕೇಳಿ ರಾಜರಿಗೆ ಹೀಗೆಲ್ಲಾ ಶಾಪ ಕೊಡಬಾರದು. ಯಾಕೆಂದರೆ ನಾನು ಧ್ಯಾನಕ್ಕೆ ಕೂಡ್ರುವಾಗ ಕುಟೀರದಲ್ಲಿ ಯಾರನ್ನಾದರೂ ಇಟ್ಟು ಬಂದವರಿಗೆ ಆತಿಥಿಸತ್ಕಾರ ಮಾಡಬೇಕಾಗಿತ್ತು. ಅದು ನಮ್ಮ ತಪ್ಪು ಅಂತಾ ಮಗನಿಗೆ ಹೇಳಿ, ರಾಜನಿಗೆ ಶಾಪದ ಸುದ್ದಿಯನ್ನು ಹೇಳಿಕಳಿಸಿದನು. ಅಷ್ಟರಲ್ಲಿ ರಾಜನು ನಾನು ಎಷ್ಟು ತಪ್ಪು

ಮಾಡಿದೆನಲ್ಲಾ ಅನ್ನುತ್ತಿರಲು ಋಷಿಗಳಿಂದ ಸುದ್ದಿ ಬರಲು, ತನ್ನ ಮಗನಾದ ಜನಮೇಜಯನಿಗೆ ಪಟ್ಟಗಟ್ಟಿ ಗಂಗಾತೀರಕ್ಕೆ ಹೋಗಿ ಪ್ರಾಯೋಪವೇಶಕ್ಕೆ ಕುಳಿತುಕೊಳ್ಳಬೇಕು ಎನ್ನುವುದರಲ್ಲಿಯೇ ಎಲ್ಲ ಋಷಿಮುನಿಗಳು ಬಂದರು.

ಪದ್ಯ

ವ್ಯಾಸ,ವಾಲ್ಮೀಕಿ,ಕಶ್ಯಪ, ನಾರದರು
ಶೌನಕ, ಪರಾಶರ,ವಸಿಷ್ಠ, ಕಣ್ವಋಷಿ।
ವಿಶ್ವಾಮಿತ್ರ, ಗೌತಮ,ಭರದ್ವಾಜ, ಸನಕ
ದುರ್ವಾಸ, ಗಾಲವ, ಮಾಂಡವ್ಯ, ವಿಭಾಂಡಕ।
ದಧೀಚಿ, ಜಮದಗ್ನಿ, ಋಷ್ಯಶೃಂಗ ಮೊದಲಾದ
ಋಷಿಗಳು ಬಂದರೋ ಗಂಗಾನದಿಯ ದಡಕೆ ॥೧॥

-ಪಾಂಡುರಂಗವಿಟ್ಠಲದಾಸರು

ಗದ್ಯ

ಬಂದವರಿಗೆಲ್ಲಾ ಆದರಿಸಿ ''ನನಗೆ ಏಳುದಿನಕ್ಕೆ ಮರಣವಿದೆ. ಏನು ಮಾಡಿ ವೈಕುಂಠಕ್ಕೆ ಪ್ರಯಾಣಮಾಡಬಹುದೆಂದು'' ಕೇಳಿದನು. ಅಷ್ಟರಲ್ಲಿ ಶುಕಮುನಿಗಳು ಬರುವುದನ್ನು ನೋಡಿ ಎಲ್ಲರೂ ಎದ್ದು ನಿಂತರು.

ಪದ್ಯ

ಶುಕಾಚಾರ್ಯರ ಸಂದರುಶನ

ಶುಭವಿದೆ ಪರೀಕ್ಷಿತನಿಗೆ ಇಂದು। ಭಯವಿಲ್ಲ ಎಂದೆಂದಿಗೂ ಇಂದು ॥ ಪ ॥
ಶುಕನೆಂಬ ಹಕ್ಕಿ ಬಂದಿಹುದು ಭಾಗವತ ಪುರಾಣವ ಹೇಳುವದು ॥ ೧ ॥
ಓಂದಕೆ ಅಶ್ವತ್ಥಾಮನು ಆಗಿಹನಂದು ಪಾಂಡವಕುಲನಾಶಿಸಲೆಂದು
ಬ್ರಹ್ಮಾಸ್ತ್ರವ ಬಿಡಲು ಅಂದು ಕೃಷ್ಣನು ಕಾದನು ಕುಲವನು ಅಂದು ॥ ೨ ॥
ವೇದವ್ಯಾಸರ ಮಗನಾಗಿ ಇಂದು ಪರೀಕ್ಷಿತನನು ಉದ್ಧರಿಸಲು ಬಂದು
ಭಾಗವತತಿರುಳನು ತಿಳಿಸುವೆನೆಂದು ರಾಜಗೋಪಾಲನ ಪ್ರೀತಿಗೆ ಪಾತ್ರನು ಇಂದು

ಎಲ್ಲರನ್ನು ಕೊಂದದ್ದಕ್ಕೆ ನನಗೆ ಪಾಪ ಬಂದಿದೆ. ಏನು ಮಾಡಲಿ? ಎನ್ನಲು ನಾರಾಯಣನು ಎಷ್ಟು ಉಪದೇಶಮಾಡಿದರೂ | ಮನಸ್ಸಿಗೆ ಬಾರದಿರಲು, ರಣರಂಗದಲ್ಲಿ ಶರಪಂಜರದಲ್ಲಿ ಮಲಗಿದ್ದ ಭೀಷ್ಮಾಚಾರ್ಯರಲ್ಲಿ ತಾನೇ ನಿಂತು ಉಪದೇಶಮಾಡಿದನು. ಅವನ ಮನಸ್ಸನ್ನು ಶುಚಿಗೊಳಿಸಿದನು.

ಕುಂತೀದೇವಿಯ ಸ್ತೋತ್ರ — ಕುಂತೀದೇವಿಯು 'ಪರಮಾತ್ಮ ನಮಗೆ ಸುಖವನ್ನು ಕೊಡಬೇಡ. ಸುಖವಿದ್ದರೆ ನಿನ್ನ ನೆನಪು ಆಗುವುದಿಲ್ಲ, ಆದ್ದರಿಂದ ನಮಗೆ ಸದಾ ಕಷ್ಟವನ್ನೇ ಕೊಡು. ಸದಾ ನಿನ್ನ ನಾಮಾಮೃತ ನನ್ನ ಬಾಯಲ್ಲಿ ಇರುವಂತೆ ಮಾಡು' ಅಂತ ಕುಂತಿಯು ಧ್ಯಾನಮಾಡುತ್ತಿರಲು ಅವಳನ್ನು ಸಂತೈಸಿ ದ್ವಾರಕೆಗೆ ಹೋಗಲು ರಥದಲ್ಲಿ ಕುಳ್ಳಿರಲು ಉತ್ತರೆಯು 'ಹಾ, ಪರಮಾತ್ಮ ! ನನ್ನ ಹೊಟ್ಟೆಗೆ ಬ್ರಹ್ಮಾಸ್ತ್ರ ಬಂದಿದೆ. ಹೊಟ್ಟೆ ಉರಿಯುತ್ತಿದೆ. ಕಾಪಾಡು ಪಾಂಡವರ ವಂಶ ಉಳಿಸು' ಅಂತಾ ಅನ್ನಲು, ಅವಳ ಹೊಟ್ಟೆಯಲ್ಲಿ ಚಕ್ರವನ್ನು ಅಡ್ಡವಿಟ್ಟು ಉರಿಯನ್ನು ಶಾಂತ ಮಾಡಿದನು. ಪ್ರಸವದವರೆಗೆ ಗದಾಪಾಣಿಯಾಗಿ ಗರ್ಭಗತ ಶಿಶುವನ್ನು ಪೊರೆದ. ಕೂಸು ಹುಟ್ಟಲು ಸತ್ತು ಹೋಗಿತ್ತು. ಪರಮಾತ್ಮನು ಅದನ್ನು ಬದುಕಿಸಿದನು. 'ಬ್ರಾಹ್ಮಣರಾದ ಅಶ್ವತ್ಥಾಮರ ಶಾಪವು ಸುಳ್ಳಾಗಬಾರದು. ತನ್ನ ಮಾತು ನಿಜವಾಗಬೇಕು' ಅನ್ನುವುದನ್ನು ತೋರಿಸಿ, ದ್ವಾರಕೆಗೆ ಹೋದ ಮೇಲೆ ಬ್ರಾಹ್ಮಣರ ಶಾಪದಿಂದ ವಂಶ ನಾಶವಾಗಲು ತಾನು ಮೂಲರೂಪವನ್ನು ಸೇರಿದನು. ಪರಮಾತ್ಮನು ಪರಂಧಾಮಕ್ಕೆ ಹೋದುದ್ದನ್ನು ಕೇಳಿ ಪಾಂಡವರು ಪರೀಕ್ಷಿತಗೆ ಪಟ್ಟ ಕಟ್ಟಿ ತಾವು ತಮ್ಮ ಮೂಲರೂಪವನ್ನು ಸೇರಿದರು. ಪರೀಕ್ಷಿತನು ಅನೇಕವರ್ಷ ರಾಜ್ಯವಾಳಿ ಒಮ್ಮೆ ಬೇಟೆಗೆ ಹೋದಾಗ ನೀರಡಿಸಿ ಶಮೀಕಋಷಿಗಳಲ್ಲಿ ನೀರು ಕೇಳಲು, ಅವರು ಧ್ಯಾನದಲ್ಲಿ ಮಗ್ನರಾಗಿದ್ದರಿಂದ ನೀರುಸಿಗಲಿಲ್ಲವೆಂದು ಸಿಟ್ಟು ಬಂದು, ಸತ್ತ ಹಾವನ್ನು ಅವರ ಕೊರಳಲ್ಲಿ ಹಾಕಿ ಹೋದನು. ಅವರ ಮಗ ಶೃಂಗಿಯು ನೋಡಿ ಸಿಟ್ಟಿನಿಂದ ರಾಜನಿಗೆ ಏಳು ದಿವಸದಲ್ಲಿ ತಕ್ಷಕನು ಕಚ್ಚಿ ಸಾಯುಲೆಂದು ಶಾಪ ಕೊಟ್ಟನು. ತಂದೆ ಧ್ಯಾನದಿಂದ ಎದ್ದ ಮೇಲೆ ಸುದ್ದಿ ಕೇಳಿ ರಾಜರಿಗೆ ಹೀಗೆಲ್ಲಾ ಶಾಪ ಕೊಡಬಾರದು. ಯಾಕೆಂದರೆ ನಾನು ಧ್ಯಾನಕ್ಕೆ ಕೂಡ್ರುವಾಗ ಕುಟೀರದಲ್ಲಿ ಯಾರನ್ನಾದರೂ ಇಟ್ಟು ಬಂದವರಿಗೆ ಅತಿಥಿಸತ್ಕಾರ ಮಾಡಬೇಕಾಗಿತ್ತು, ಅದು ನನ್ನ ತಪ್ಪು ಅಂತಾ ಮಗನಿಗೆ ಹೇಳಿ, ರಾಜನಿಗೆ ಶಾಪದ ಸುದ್ದಿಯನ್ನು ಹೇಳಿಕಳಿಸಿದನು. ಅಷ್ಟರಲ್ಲಿ ರಾಜನು ನಾನು ಎಷ್ಟು ತಪ್ಪು

ಮಾಡಿದೆನಲ್ಲಾ ಅನ್ನುತ್ತಿರಲು ಋಷಿಗಳಿಂದ ಸುದ್ದಿ ಬರಲು, ತನ್ನ ಮಗನಾದ ಜನಮೇಜಯನಿಗೆ ಪಟ್ಟಗಟ್ಟಿ ಗಂಗಾತೀರಕ್ಕೆ ಹೋಗಿ ಪ್ರಾಯೋಪವೇಶಕ್ಕೆ ಕುಳಿತುಕೊಳ್ಳಬೇಕು ಎನ್ನುವುದರಲ್ಲಿಯೇ ಎಲ್ಲ ಋಷಿಮುನಿಗಳು ಬಂದರು.

ಪದ್ಯ

ವ್ಯಾಸ,ವಾಲ್ಮೀಕಿ,ಕಶ್ಯಪ, ನಾರದರು
ಶೌನಕ, ಪರಾಶರ,ವಸಿಷ್ಠ, ಕಣ್ವಋಷಿ।
ವಿಶ್ವಾಮಿತ್ರ, ಗೌತಮ,ಭರದ್ವಾಜ, ಸನಕ
ದುರ್ವಾಸ, ಗಾಲವ, ಮಾಂಡವ್ಯ, ವಿಭಾಂಡಕ।
ದಧೀಚಿ, ಜಮದಗ್ನಿ, ಋಷ್ಯಶೃಂಗ ಮೊದಲಾದ
ಋಷಿಗಳು ಬಂದರೋ ಗಂಗಾನದಿಯ ದಡಕೆ ॥೧॥

-ಪಾಂಡುರಂಗವಿಟ್ಠಲದಾಸರು

ಗದ್ಯ

ಬಂದವರಿಗೆಲ್ಲಾ ಆದರಿಸಿ "ನನಗೆ ಏಳುದಿನಕ್ಕೆ ಮರಣವಿದೆ. ಏನು ಮಾಡಿ ವೈಕುಂಠಕ್ಕೆ ಪ್ರಯಾಣಮಾಡಬಹುದೆಂದು" ಕೇಳಿದನು. ಅಷ್ಟರಲ್ಲಿ ಶುಕಮುನಿಗಳು ಬರುವುದನ್ನು ನೋಡಿ ಎಲ್ಲರೂ ಎದ್ದು ನಿಂತರು.

ಪದ್ಯ

ಶುಕಾಚಾರ್ಯರ ಸಂದರುಶನ

ಶುಭವಿದೆ ಪರೀಕ್ಷಿತನಿಗೆ ಇಂದು। ಭಯವಿಲ್ಲ ಎಂದೆಂದಿಗೂ ಇಂದು ॥ ಪ ॥
ಶುಕನೆಂಬ ಹಕ್ಕಿ ಬಂದಿಹುದು ಭಾಗವತ ಪುರಾಣವ ಹೇಳುವದು ॥ ೧ ॥
ಹಿಂದಕೆ ಅಶ್ವತ್ಥಾಮನು ಆಗಿಹನಂದು ಪಾಂಡವಕುಲನಾಶಿಸಲೆಂದು
ಬ್ರಹ್ಮಾಸ್ತ್ರವ ಬಿಡಲು ಅಂದು ಕೃಷ್ಣನು ಕಾದನು ಕುಲವನು ಅಂದು ॥ ೨ ॥
ವೇದವ್ಯಾಸರ ಮಗನಾಗಿ ಇಂದು ಪರೀಕ್ಷಿತನನು ಉದ್ಧರಿಸಲು ಬಂದು
ಭಾಗವತತಿರುಳನು ತಿಳಿಸುವೆನೆಂದು ರಾಜಗೋಪಾಲನ ಪ್ರೀತಿಗೆ ಪಾತ್ರನು ಇಂದು ॥

ಗದ್ಯ

ಆಗ ರಾಜನು ಅವರಿಗೆ ಪಾದಪೂಜೆಯ ಮಾಡಿ ತನಗೆ ಬಂದ ಮರಣವಾರ್ತೆ-ಯನ್ನು ತಿಳಿಸಿ ನನ್ನನ್ನ ಉದ್ಧರಿಸಿರಿ ಅಂದನು. ಇಲ್ಲಿಗೆ ಪ್ರಥಮಸ್ಕಂಧ ಮುಗಿಯಿತು.

ದ್ವಿತೀಯಸ್ಕಂಧ

ವಿರಾಟಮೂರ್ತಿಧ್ಯಾನ, ನಾರಾಯಣನ ಅವತಾರ, ಖಟ್ವಾಂಗರಾಯನ ಕಥೆ

ವಿರಾಟಮೂರ್ತಿಧ್ಯಾನ

ಶುಕಾಚಾರ್ಯರು ಪರೀಕ್ಷಿತನಿಗೆ – ನೋಡು ಮೊದಲು ವಿರಾಟಮೂರ್ತಿಯ ಧ್ಯಾನ ಮಾಡಬೇಕು. ನಮಗೆ ದೊಡ್ಡ ಮೂರ್ತಿಯ ಧ್ಯಾನಮಾಡಲು ಅಧಿಕಾರವಿದೆ. ಪಕ್ವವಾದಮೇಲೆ ಹೃದಯದಲ್ಲಿ ಇರುವ ಬಿಂಬಮೂರುತಿಯ ಧ್ಯಾನ ಮಾಡಿ ವೈಕುಂಠಕ್ಕೆ ಹೋಗಬಹುದು.

ಮಂದಿಷ್ಟು ಘಳಿಗೀ, ಸಾಧನದಿಂದ ಹರಿಯ ತೃಪ್ತಿ,
ಅಷ್ಟು ವೈರಾಗ್ಯದಿಂದ ಮುಕ್ತನಾಗುವ,
ಖಟ್ವಾಂಗರಾಯನು ನಷ್ಟ ಆಯಸ್ಸು ತಿಳಿದು ಯೆರಡು ಘಳಿಗೀ
ವಿಷಯಬಿಟ್ಟು, ಹರಿಯನ್ಯೈದಿದ ॥ ೧೧ ॥

ರಾಯ ನಿನಗೆ ಸಪ್ತದಿನದ, ಕ್ಲಪ್ತ ಆಯುಸ್ಸು ವುಂಟು, ಮುಕ್ತಿ
ಪಥಕೆ ಸಾಧನವಾಗೋದೇನು ಮಾಡಿಕೊ ।
ಅಂತ್ಯಕಾಲ ತಿಳಿದು, ದೇಹಾಂತಕ್ಕೆ ನೀನಂಜಾದೆ, ವೈರಾಗ್ಯಶಾಸ್ತ್ರ
ವಿಷಯದಿಂದ ಹರಿಯ ಸಂಗ ಯೈದಿಸು ॥ ೧೨ ॥

ಸನ್ಯಾಸಧರ್ಮದಿಂದ ಚೆನ್ನಾಗಿ ಧೀರನಾಗಿ ಪುಣ್ಯಜಲದ ತೀರದಲ್ಲಿ
ಪೂತ ದೇಹವು ।
ಏಕಾಂತದಲ್ಲಿ ಏಕಾಸನಾವು ನೇಮಿಸಿ, ಏಕಚಿತ್ತನಾಗಿ
ಏಕಭಕ್ತಿಯಿಂದಲಿ ॥ ೧೩ ॥

ಶ್ರವಣಜನ್ಯ ಜ್ಞಾನದಿಂದ ಶುದ್ಧವಾದ ಮನಸ್ಸನ್ನು ವಿಷಯಗಳಿಗೆ
ಯರಗದೇ ಇಂದ್ರಿಯ ನಿಗ್ರಹಿಸಿ ।

ಬಾಹ್ಯವಿಷಯದಿಂದ ಬಹು ಚಂಚಲಾದ ಮನಸ್ಸನ್ನು ದೇಹ-
ವಾದರೂ ಹರಿಯ ಅಂಗದಲ್ಲಿಡಬೇಕು ॥ ೧೪ ॥

ಹರಿಯ ಅಂಗಗಳ ವಳಗೆ ವಂದಂಗ ಧ್ಯಾನ ಮಾಡಬೇಕು, ಅನ್ಯ-
ಮನಸ್ಕನಾಗದೇ ನಿಶ್ಚಿಂತಿಲಿರಬೇಕು ಮನಸು
ವಿಷ್ಣುಪಾದದಲ್ಲಿ ನಿಲಿಸಿ ಶ್ವಾಸ ನಿಗ್ರಹಿಸಿ, ಶ್ರೀಕಾರ
ಬ್ರಹ್ಮವೇದ್ಯನೊಳಗೆ ನೇಮಿಸಿ ॥ ೧೫ ॥

ಹೀಂಗ ಹೇಳಲು ಶುಕನ ಮಾತು ಕೇಳಿ ರಾಯನು, ಮತ್ತ ಪ್ರಶ್ನ
ಮಾಡಿದ ಉತ್ತರವನು ।
ಯಂಥಾ ವಿಷ್ಣುಪಾದದಲ್ಲಿ, ಮನಸು ತಾನು ನಿಲ್ಲುವೋದು, ಧ್ಯಾನ-
ವಾದರು ಹ್ಯಾಂಗ ಮಾಡಬೇಕಾದದ್ದು ॥ ೧೬ ॥

ಯಂಥಾ ಭಗವತ್ಪಥಾದಲ್ಲಿ, ಮನಸು ಸ್ವಸ್ಥ ನಿಲ್ಲುವೋದು, ಇದಷ್ಟು
ಹೇಳು ಎಂದು ರಾಯ ಪ್ರಶ್ನ ಮಾಡಿದ ।
ಪ್ರಶ್ನವಚನ ಕೇಳಿ ಶುಕನು, ಬಹಳ ಸಂತೋಷದಿಂದ, ಉತ್ತರವ
ನೀಡಲೂದ್ಯುಕ್ತನಾದನು ॥ ೧೭ ॥

ಆಸನ ಶ್ವಾಸಜಯ ವಿಷಯ ಇಂದ್ರಿಯ ಜಯಗಳಿಗೆ, ಸ್ಥೂಲ-
ಭಗವದ್ರೂಪದಲ್ಲಿ ಮನಸು ನಿಲ್ಲೋದು ।
ಸ್ಥೂಲಕಿಂತ ಸ್ಥೂಲ ಬ್ರಹ್ಮಾಂಡ ಶರೀರವು ಶಿಲಾಪ್ರತಿಮೆಯಂತೆ
ಹರಿಯ ಶರೀರವೆಂಬೋದು ॥ ೧೮ ॥

ಪಂಚಮಹಾಭೂತ ಮಹತ್ತತ್ವಾಹಂಕಾರತತ್ವ ವಿಕೃತವಾದ
ದೇಹ ವಿರಾಟದೇಹವು ।
ವಿರಾಟಧ್ಯಾನ ಹೇಳಿದವರಿಗೆ ವೈಧವ್ಯ ದೋಷ ಹೋಗೋದು, ಮಾನ
ದೋಷ ಹೋಗುವದು ಮುಕ್ತಿ ಬಾಹೋದು ॥ ೧೯ ॥

ಪಾದಮೂಲದಲ್ಲಿ ಪಾತಾಳಲೋಕ ಹುಟ್ಟಿತು, ಪಾದ ಅಗ್ರದಲ್ಲಿ
ಮಹಾತಳ ಹುಟ್ಟಿತು ।
ರಸಾತಳ ಹುಟ್ಟಿತು ಪಾದ(ಯರಡು) ದ್ವಯಗಳಿಂದ ತಳಾತಳ
ಹರಿಯ ಜಂಘೆಯಿಂದ ಹುಟ್ಟಿತು ॥ ೨೦ ॥

ಸುತಲವು ಹುಟ್ಟಿತು ಹರಿಯ ಜಾನುದ್ವಯಗಳಿಂದ, ತೊಡೆಗಳಿಂದ
ಹುಟ್ಟಿದಾವು ಅತಲ ವಿತಲವು ।
ಭೂಪ ನಿಮ್ಮ ಜಘ್ನದಿಂದ ಮಹಾತಲ ಹುಟ್ಟಿತು, ನಾಭಿಯಿಂದ
ರಸಾತಲ ಒಂದೇ ಹುಟ್ಟಿತು ॥ ೨೧ ॥

ಹರಿಯ ವಕ್ಷಸ್ಥಳದಿಂದ ಜ್ಯೋತಿರ್ಲೋಕ ಹುಟ್ಟಿತು, ಕಂಠ-
ದಿಂದ ಹುಟ್ಟಿತು ಮಹರ್ಲೋಕವು ।
ಹರಿಯ ವದನದಿಂದಲೀ ಜನೋಲೋಕ ಹುಟ್ಟಿತು, ಲಲಾಟ-
ದಿಂದ ಹುಟ್ಟಿತು ತಪೋಲೋಕವು ॥ ೨೨ ॥

ಸತ್ಯಲೋಕ ಹರಿಯ ಶಿರಸ್ಸಿನಿಂದ ಹುಟ್ಟಿತು, ಲೋಕಪಾಲಕರು
ಹುಟ್ಟಿದಾರು ಬಾಹುಗಳಿಂದಲೀ ।
ಕರ್ಣಗೋಲಿಕಾದಿಂದ ದಿಕ್ಕುಗಳು ಹುಟ್ಟಿದವು, ಶ್ರೋತ್ರದಿಂದ
ಹುಟ್ಟಿದಾವು ಬಹಳ ಶಬ್ದಗಳು ॥ ೨೩ ॥

ಅಶ್ವಿನೀದೇವತೆಗಳು ಹರಿಯ ನಾಸಿಕದಿಂದ ಹುಟ್ಟಿದಾರು, ಗಂಧಗಳು
ಹುಟ್ಟಿದಾವು ಘ್ರಾಣದಿಂದಲೀ ।
ವಿಷ್ಣುಮುಖದಿಂದ ಇಂದ್ರಾಗ್ನಿಯೂ ಜನಿಸಿದಾರು, ಚಕ್ಷುಗೋ-
ಲಕದಿಂದ ದ್ಯೌರ್ಲೋಕ ಹುಟ್ಟಿತು ॥ ೨೪ ॥

ಚಕ್ಷುರಿಂದ್ರಿಯದಿಂದ ಸೂರ್ಯ ತಾ ಜನಿಸಿದಾ, ಕಿವಿಗಳಿಂದ ದೇವ
ಮಾನುಷಾದಿಗಳಾದವು ।
ಭ್ರೂಭ್ರಮಣಗಳಿಂದ ಬ್ರಹ್ಮಸ್ಥಾನ ಹುಟ್ಟಿತು, ತಾಲುನಿಂದ ಹುಟ್ಟಿ-
ದಾವು ಸಕಲ ಉದಕವು ॥ ೨೫ ॥

ಜಿಹ್ವೇಂದ್ರಿಯದಿಂದ ರಸಗಳು ಹುಟ್ಟಿದಾವು, ದಂತದಿಂದ ಹುಟ್ಟಿ-
ದಾವು ನಕ್ಷತ್ರಂಗಳು ।
ದಂಷ್ಟ್ರದಿಂದ ಅರ್ಯಮೇಂದು ದೇವತೆಗಳು ಜನಿಸಿದಾರು, ಹರಿಯ
ವಾಕ್ಯದಿಂದ ಜನಿಸಿದಾವು ವೇದರಾಶಿಯು ॥ ೨೬ ॥

ಹಾಸದಿಂದ ಜನರ ಉನ್ಮಾದಶಕ್ತಿ ಹುಟ್ಟಿತು, ಅಪಾಂಗದಿಂದ
ವಿಶ್ವ ಸೃಷ್ಟಿಯಾಯಿತು ।

ಉತ್ತರೋಷ್ಠದಿಂದ ಲಜ್ಜೆ ಅಪರದಿಂದ ಲೋಭವು, ಧರ್ಮವೆಂಬುದು
ಹರಿಯ ಸ್ತನದಿಂದಾಯಿತು ॥ ೨೭ ॥

ಅಧರ್ಮಮಾರ್ಗಗಳು ಹಿಂಭಾಗದಿಂದ ಹುಟ್ಟಿದಾವು,
ಗುಹ್ಯೇಂದ್ರಿಯದಿಂದ ಪ್ರಜಾಪತಿ ದಕ್ಷ ಹುಟ್ಟಿದರು ।
ಹರಿಯ ವೃಷಣದಿಂದಲೀ ಭಿನ್ನತಾ ಹುಟ್ಟಿತು, ಶಬ್ದದಿಂದ ವೈದಿಕ
ಲೌಕಿಕ ವಾಕ್ಯ ಹುಟ್ಟಿತು ॥ ೨೮ ॥

ಅದ್ರಿಗಳು ಹುಟ್ಟಿದಾವು ಅಸ್ಥಿಸಮುದಾಯದಿಂದ ನದಿಗಳು
ಹುಟ್ಟಿದಾವು ನಾಡಿಯಿಂದಲೀ ।
ಹರಿಯ ರೋಮಗಳಿಂದ ವೃಕ್ಷಗಳು ಹುಟ್ಟಿದಾವು, ಅನ್ನಗಳು
ಹುಟ್ಟಿದಾವು ವೀರ್ಯದಿಂದಲೀ ॥ ೨೯ ॥

ಶ್ವಾಸದಿಂದ ವಾಯುವು ಗಮನದಿಂದ ಆಯುಸ್ಸು, ಕರ್ಮದಿಂದ
ಗುಣತ್ರಯಪ್ರವಾಹ ಹುಟ್ಟಿತು ।
ಕುಕ್ಷಿಯಿಂದ ಹುಟ್ಟಿದಾವು ಸಪ್ತ ಸಮುದ್ರಗಳು ವಿಚಾರದಿಂದ
ಸ್ವಾಯಂಭುವಮನುವು ಹುಟ್ಟಿದಾ ॥ ೩೦ ॥

ಹರಿಯ ಕೇಶಗಳಿಂದ ಮೇಘಗಳು ಹುಟ್ಟಿದಾವು, ಸಂಧ್ಯಾಕಾಲಗಳು
ಹರಿಯ ವಸನದಿಂದಲೀ ।
ಹರಿಯ ಹೃದಯದಿಂದ ಅವ್ಯಕ್ತತತ್ತ್ವ ಹುಟ್ಟಿತು, ದೇವಮನಸಿ-
ನಿಂದ ಚಂದ್ರಮನು ಹುಟ್ಟಿದಾ ॥ ೩೧ ॥

ಹರಿಯ ಬುದ್ಧಿಯಿಂದ ವಿಜ್ಞಾನತತ್ತ್ವ ಹುಟ್ಟಿತು, ಅಂತಃಕರಣ-
ದಿಂದ ರುದ್ರನು ಹುಟ್ಟಿದಾ ।
ಹರಿಯ ನಖರಗಳಿಂದ ಅಶ್ವತ್ಥವೃಕ್ಷಗಳು, ಗಜಗಳೂ ಅಶ್ವಗಳು
ಜನನವಾದವು ॥ ೩೨ ॥

ಸಿಂಹ ಮೊದಲಾದ ಸರ್ವಮೃಗಗಳು ಹುಟ್ಟಿದಾವು, ಪಶುಗಳು
ಹುಟ್ಟಿದಾವು ಶ್ರೋಣಿದೇಶದಿ ।
ಗಂಧರ್ವರು ವಿದ್ಯಾಧರರು ಚಾರಣಾಪ್ಸರ ಸ್ತ್ರೀಯರು ಹರಿಯ
ಸ್ವರ ಸ್ಮರಣೆಯಿಂದ ಜನಿಸಿದರು ॥ ೩೩ ॥

ಹರಿಯ ಮುಖದಿಂದಲೀ ಬ್ರಾಹ್ಮಣಜಾತಿ ಹುಟ್ಟಿತು, ಬಾಹು-
ದ್ವಯಗಳಿಂದ ಕ್ಷತ್ರಿಯಜಾತಿ ಹುಟ್ಟಿತು ।
ಹರಿಯ ತೊಡೆಗಳಿಂದಲೀ ವೈಶ್ಯಜಾತಿ ಹುಟ್ಟಿತು, ಪಾದದ್ವಯ-
ದಿಂದ ಶೂದ್ರಜಾತಿ ಹುಟ್ಟಿತು ॥ ೩೪ ॥

ಹರಿಯ ಮಧ್ಯದೇಹದಿಂದ ಹವ್ಯಕವ್ಯ ಹುಟ್ಟಿತು, ಸಾಧನಾವು
ಹುಟ್ಟಿದಾವು ಸರ್ವದೇಹದಿ ।
ಹರಿಯ ವೀರ್ಯದಿಂದಲೀ ಸ್ವಾಹಾ ಸ್ವಧಾ ಹುಟ್ಟಿದಾವು-
ಪಾಯುದಿಂದ ಸರ್ವಯಜ್ಞಗಳು ಹುಟ್ಟಿದವು ॥ ೩೫ ॥

ಹೀಂಗ ರಾಯಗೆ ಶುಕರು ವಿರಾಟ್‌ಮೂರ್ತಿಧ್ಯಾನ ಹೇಳಿ
ದ್ವಿತೀಯಸ್ಕಂಧದಲಿ ಪ್ರಥಮಾಧ್ಯಾಯ ಮುಗಿಸಿದಾ ।
ವಿರಾಟಮೂರ್ತಿಧ್ಯಾನಕಿಂತಾ ಉತ್ತಮವಾದ್ದು ಇಲ್ಲಾ ಎಂದು
(ಇಲ್ಲವೆಂದು) ನಾನು ನಿನಗೆ ಹೇಳುವೆನು ಯಲೋ ರಾಯನೇ ॥ ೩೬ ॥

ವಿರಾಟಮೂರ್ತಿಧ್ಯಾನವನ್ನು ಹೇಳಿ ಕೇಳಿದವರಿಗೆ ಸಾಯುಜ್ಯ-
ಪದವನೀವ ಹಯವದನನು ॥ ೩೭ ॥

॥ ಇತಿ ಶ್ರೀಮದ್ವಾದಿರಾಜಕೃತ ಪ್ರಾಕೃತವಿರಾಟಮೂರ್ತಿಧ್ಯಾನಂ ಸಂಪೂರ್ಣಂ ॥

ವಿರಾಟಮೂರ್ತಿಯಧ್ಯಾನ ಹೇಳಿದ ಮೇಲೆ ನಾರಾಯಣ ಅವತಾರ ಹೇಳಿದರು. ಮುಂದೆ ಶುಕಾಚಾರ್ಯರು ಪರೀಕ್ಷಿತನಿಗೆ ''ನಿನಗೆ ೭ ದಿನ ಆಯುಷ್ಯವಿದೆ. ಆದರೆ ಖಟ್ವಾಂಗರಾಜನಿಗೆ ನಾಲ್ಕುಘಳಿಗೆ ಆಯುಷ್ಯವಿತ್ತು. ಆವನು ಅಷ್ಟರಲ್ಲಿಯೇ ದೇವರಧ್ಯಾನಮಾಡಿ ವೈಕುಂಠಕ್ಕೆ ಹೋಗಿದ್ದಾನೆ. ನೀನು ಸಾಧನೆ ಮಾಡು'' ಅಂತಾ ಹೇಳಿದರು. ಇಲ್ಲಿಗೆ ದ್ವಿತೀಯಸ್ಕಂಧ ಮುಗಿಯಿತು.

ಮೂರನೇ ಸ್ಕಂಧ — ಬ್ರಹ್ಮನ ಸೃಷ್ಟಿವಿಸ್ತಾರ, ಸ್ವಾಯಂಭುಮನು ಶತರೂಪಾದೇವಿಯರಿಂದ ಮನುಷ್ಯ ಸೃಷ್ಟಿ, ವಿದುರ ಮೈತ್ರೇಯರ ಸಂವಾದ

ನಾರಾಯಣ ಅವತಾರ — ಪರಮಾತ್ಮನು ಅವತಾರಮಾಡಿ ತನ್ನ ಹೊಕ್ಕಳಿಂದ ಕಮಲವನ್ನು ಸೃಷ್ಟಿಸಿ ಅಲ್ಲಿ ಬ್ರಹ್ಮನನ್ನು ಸೃಷ್ಟಿಸಿದನು. ಬ್ರಹ್ಮನು ಎಲ್ಲ ಕಡೆ ನೋಡಿದನು. ಯಾರೂ ಕಾಣಲಿಲ್ಲ, ಕಮಲನಾಳದಲ್ಲಿ ಹೊಕ್ಕು ಅಲ್ಲಿ ತಪ, ತಪ

ಶಬ್ದ ಕೇಳಲು ತಪಸ್ಸು ಮಾಡಿ ಪರಮಾತ್ಮನನ್ನು ಕಂಡು ಆನಂದದಿಂದ ವಂದಿಸಿನು. ಆಗ ಬ್ರಹ್ಮನಿಗೆ ಉಪದೇಶಮಾಡಿ ಜಗತ್ತನ್ನು ಸೃಷ್ಟಿಮಾಡೆಂದು ಹೇಳಿ ಅದೃಶ್ಯನಾದನು. ಬ್ರಹ್ಮನು ಸನಕ, ಸನಂದ, ಸನಾತನ, ಸನತ್ಕುಮಾರರನ್ನು ಸೃಷ್ಟಿಸಿದನು. ಅವರು ಸನ್ಯಾಸಿಯಾಗಿ ಹೋದರು. ಬ್ರಹ್ಮನ ಹುಬ್ಬಿನಿಂದ ರುದ್ರ ಹುಟ್ಟಿದನು. ಅವನಿಗೆ ಸೃಷ್ಟಿಮಾಡು ಎಂದು ಹೇಳಲು ಅವನು ಭೂತ, ರಾಕ್ಷಸರನ್ನು ಸೃಷ್ಟಿಸಿದನು. ಸಾಕು ನೀನು ತಪಸ್ಸು ಮಾಡಲು ಹೋಗು ಎಂದರು. ಬ್ರಹ್ಮದೇವರು ಮತ್ತೆ ಯೋಚಿಸಲು ಅವರು ಎರಡು ರೂಪವನ್ನು ಸೃಷ್ಟಿಸಿದರು. ಸ್ವಾಯಂಭುವ ಮನು, ಶತರೂಪಾ ದೇವಿಯರನ್ನು . ಅವರಿಗೆ ಸೃಷ್ಟಿಮಾಡು ಎನ್ನಲು ಅವರು ಭೂಮಿಯೇ ಇಲ್ಲ ಅನ್ನಲು ಬ್ರಹ್ಮದೇವರ ಮೂಗಿನಿಂದ ಸಣ್ಣ ಹಂದಿಯು ಕೆಳಗೆ ಬಿದ್ದಿತು. ನೋಡುತ್ತಿದ್ದಂತೆಯೇ ಅದು ಆನೆಯಷ್ಟು ದೊಡ್ಡದಾಗಿ ಸಮುದ್ರದಲ್ಲಿ ಮುಳುಗಿ ಹಿರಣ್ಯಾಕ್ಷನನ್ನ ಕೊಂದು ಭೂಮಿಯನ್ನು ನೀರಿನ ಮೇಲೆ ಸ್ಥಾಪನೆ ಮಾಡಿತು. ದೇವತೆಗಳು ಬ್ರಹ್ಮದೇವರು ಇವನು ಪರಮಾತ್ಮನೆಂದು ಅವನ ಸ್ಮರಣೆ ಮಾಡಿದರು.

ಪದ್ಯ

ಶ್ರೀ ವಾ. ವಿ. ವ್ಯ.

ಆದಿವರಾಹನ ಚೆಲುವ ಪಾದವ ಕಾಣದೆ ಕಣ್ಣು।
ವೇದನೆಯಾಗಿ ಬಹಳ ಬಾಧಿಸುತಲಿದೆ ಎನ್ನ॥ ಪ ॥

ಈ ಧರಣಿ ಮುಳುಗಿ ಶುಕ್ಲನದಿಯ ದಕ್ಷಿಣದಲ್ಲಿದ್ದ।
ಮೇದಿನಿ ಕೋರೆ ದಾಡೆಲೆತ್ತಿದಂಥ ॥ ೧ ॥

ಸತ್ಯಲೋಕದ ಬ್ರಹ್ಮನು ಭೃತ್ಯರನ್ನು ಕೂಡಿಕೊಂಡು।
ವಿಸ್ತಾರದಿ ನಿಂತು ಕೈಯನೆತ್ತಿ ಮುಗಿವರೆಂತೆಂದು।
ರತ್ನದಭೂಷಣಗಳು ಮುತ್ತಿನೋಲೆ ಮೂಗುತಿಯು।
ಮುತ್ತೈದೆ ಅಂಬುಜವಲ್ಲಿಗೆ ಕೊಟ್ಟ॥ ೨ ॥

ದಂಡಕಾರಣ್ಯ ಭೂಮಿಲಿ ತೋಂಡ ಮಂಡಲದೊಳಗೆ।
ಹಿಂಡು ಹಿಂಡು ಅಟ್ಟಿಬಂದ ದಂಡಕಾಸುರ ಪಡೆಯ।
ಖಂಡಿಸಿ ದೈತ್ಯರನೆಲ್ಲ ತುಂಡು ಮಾಡಿದನು।
ಉದ್ದಂಡ ಶ್ವೇತವರಾಹನಾದ ಪುರಂದರವಿಟ್ಠಲ ॥ ೩ ॥

ಗದ್ಯ

ಆಮೇಲೆ ಸ್ವಾಯಂಭುವ ಮನು ಶತರೂಪಾದೇವಿಯರಿಂದ ಮೂರು ಹೆಣ್ಣು ಮಕ್ಕಳು ಮತ್ತು ಎರಡು ಗಂಡುಮಕ್ಕಳು ಹುಟ್ಟಿದರು. ಬ್ರಹ್ಮನು ಸೃಷ್ಟಿವಿಸ್ತಾರವನ್ನು ಸ್ವಾಯಂಭುವ ಮನು, ಶತರೂಪಾದೇವಿಯರಿಂದ ಮಾಡಿಸಿದನು. ಸ್ವಾಯಂಭುವ ಮನುವಿನಿಂದ ಐದು ಮಕ್ಕಳು ಹುಟ್ಟಿದರು. ಮೂರು ಹೆಣ್ಣು ಎರಡು ಗಂಡುಮಕ್ಕಳಾದರು. ಅಲ್ಲಿ ದೇವಹೂತಿಯ ಕಥೆಯನ್ನು ಮೊದಲು ಹೇಳಿದರು. ದೇವಹೂತಿಯನ್ನು ಕರ್ದಮಋಷಿಗಳಿಗೆ ಕೊಟ್ಟರು. ಅವಳು ರಾಜಕುಮಾರಿಯಾದರೂ, ಪತಿಯ ಸೇವೆಯನ್ನು ಒಳ್ಳೆ ಭಕ್ತಿಯಿಂದ ಮಾಡಲು ಕರ್ದಮರು ಸಂತೋಷಪಟ್ಟು, ತಮ್ಮ ತಪಸ್ಸಿನ ಪ್ರಭಾವದಿಂದ ವಿಮಾನ ನಿರ್ಮಿಸಿ, ಅದರಲ್ಲಿ ಎಲ್ಲ ಸೃಷ್ಟಿಯನ್ನು ಮಾಡಿ ತಾವು ಸುಂದರ ಪ್ರಾಯದವರಾಗಿ ಎಷ್ಟೋ ದಿನ ವಿಮಾನದಲ್ಲಿ ಸುಖಪಟ್ಟು ಒಂಭತ್ತು ಹೆಣ್ಣು ಮಕ್ಕಳನ್ನು ಪಡೆದರು. 'ಇನ್ನು ನಾನು ತಪಸ್ಸಿಗೆ ಹೋಗುತ್ತೇನೆ' ಎನ್ನಲು, 'ನನ್ನನ್ನು ನೋಡಿಕೊಳ್ಳಲು ಒಂದು ಗಂಡು ಮಗು ಬೇಕು' ಎನ್ನಲು ಪರಮಾತ್ಮನೇ ಕಪಿಲರೂಪದಿಂದ ಅವತರಿಸಿದನು. ಹೆಣ್ಣುಮಕ್ಕಳ ಮದುವೆ ಮಾಡಿ ಕಪಿಲಋಷಿಗೆ ನಮಸ್ಕರಿಸಿ ತಪಸ್ಸಿಗೆ ಹೋದರು. ಮಗನು ತಾಯಿಗೆ ಉಪದೇಶ ಹೇಳಿದನು. ''ಭಗವಂತನಲ್ಲಿ ಆಸಕ್ತಿ ಇಡು. ವಿಷಯದಲ್ಲಿ ಆಸಕ್ತಿ ಇಟ್ಟು ಸಂಸಾರಕ್ಕೆ ಒಳಗಾಗದೇ ರಾಗದ್ವೇಷಾದಿಗಳನ್ನು ಬಿಟ್ಟು ಭಗವಂತನೇ ನಮ್ಮನ್ನು ಉದ್ಧರಿಸು. ನಿನ್ನಲ್ಲಿ ಭಕ್ತಿ, ವೈರಾಗ್ಯ ಕೊಟ್ಟು ನನ್ನನ್ನು ಉದ್ಧರಿಸು'' ಎಂದು ಪ್ರಾರ್ಥಿಸಲು ಉಪದೇಶಿಸಿದನು. ಆ ಉಪದೇಶದಿಂದ ವೈರಾಗ್ಯ,ಭಕ್ತಿ ಬಂದು ತಪಸ್ಸನ್ನು ಮಾಡಿ ಉತ್ತಮಲೋಕವನ್ನು ಹೊಂದಿದಳು.

ಚತುರ್ಥಸ್ಕಂಧ

ಎರಡನೇ ಮಗಳು ಆಕೂತಿ — ಸ್ವಾಯಂಭುವ ಮನು ತನ್ನ ಎರಡನೇ ಮಗಳಾದ ಆಕೂತಿಯನ್ನು ರುಚಿಪ್ರಜೇಶ್ವರರಿಗೆ ಕೊಟ್ಟರು. ನಿಮ್ಮ ಮೊದಲನೆಯ ಮಗುವನ್ನು ನನಗೆ ಕೊಡಬೇಕು ಎಂತಾ ಹೇಳಲು, ಅವರಲ್ಲಿ ಯಜ್ಞನಾಮಕ ಪರಮಾತ್ಮನು ಹುಟ್ಟಲು ಅವನನ್ನೇ ಕೊಟ್ಟರು. ದಕ್ಷಿಣಾ ಎನ್ನುವ ಕನ್ನಿಕೆಯನ್ನು ಮದುವೆ ಮಾಡಿಕೊಂಡು ಹನ್ನೆರಡು ಮಕ್ಕಳನ್ನು ಪಡೆದನು. ಅತ್ರಿ ಋಷಿಗಳು

ದೇವಹೂತಿಯ ಮಗಳಾದ ಅನಸೂಯೆಯನ್ನು ಮದುವೆಯಾಗಿ ಯಕ್ಷಪರ್ವತಕ್ಕೆ ಹೋಗಿ ತಪಸ್ಸು ಮಾಡಲು ಬ್ರಹ್ಮ, ವಿಷ್ಣು, ರುದ್ರರು ದರುಶನ ಕೊಟ್ಟರು. ದತ್ತಾತ್ರೇಯ ರೂಪದಿಂದ ಅವತರಿಸಿದನು ಪರಮಾತ್ಮ. ಮುಂದೆ ಮನುವು ತನ್ನ ಕೊನೆಯಮಗಳಾದ ಪ್ರಸೂತಿಯನ್ನು ದಕ್ಷನಿಗೆ ಕೊಟ್ಟನು. ಅವಳಲ್ಲಿ ಹದಿನಾರು ಹೆಣ್ಣುಮಕ್ಕಳು ಆದರು. ಕೊನೆಯ ಮಗಳಾದ ಸತೀದೇವಿಯಿನ್ನು ರುದ್ರದೇವರಿಗೆ ಕೊಟ್ಟನು. ಅವಳಿಗೆ ಮಕ್ಕಳಾಗಿರಲಿಲ್ಲ. ಮುಂದೆ ದಕ್ಷನು ಸತ್ರಯಾಗ ಮಾಡಲು ಋಷಿಗಳು ದೇವತೆಗಳು ಬಂದರು. ಯಾಗಶಾಲೆಯಲ್ಲಿ ದಕ್ಷನು ಬರಲು, ರುದ್ರನು ಎದ್ದು ಮರ್ಯಾದೆ ಮಾಡಲಿಲ್ಲವೆಂದು ಸಿಟ್ಟಿನಿಂದ ಅವನಿಗೆ ಶಾಪಕೊಟ್ಟು ನಿಂದೆ ಮಾಡಿದನು. ನಂದಿಯು ಕೋಪದಿಂದ ಅಲ್ಲಿದ್ದವರಿಗೆ ಶಾಪಕೊಟ್ಟನು. ರುದ್ರದೇವರು ತಮ್ಮ ಪರಿವಾರ ಸಹಿತ ಹೊರಟುಹೋದರು. ಮುಂದೆ ದಕ್ಷನು ಬೃಹಸ್ಪತಿಯಾಗವನ್ನು ಮಾಡಲು ಎಲ್ಲರಿಗೂ ಆಮಂತ್ರಣ ಕೊಟ್ಟು ರುದ್ರದೇವರಿಗೆ ಆಮಂತ್ರಣವನ್ನು ಕೊಡಲಿಲ್ಲ. ಸತೀದೇವಿಯು ತಂದೆಯ ಮನೆಗೆ, ಗಂಡನ ಮನೆಗೆ, ಗುರುಗಳ ಮನೆಗೆ ಆಮಂತ್ರಣದ ಆವಶ್ಯಕತೆ ಇಲ್ಲ, ಹೋಗೋಣ ಎಂತಾ ಗಂಡನಿಗೆ ಹೇಳಲು, ಅವನು ಒಪ್ಪದಿರಲು, 'ತಾನು ಒಬ್ಬಳೇ ಹೋದಳು. ಅಲ್ಲಿ ಗಂಡನಿಗೆ ಆಹುತಿಯಿಲ್ಲದೇ ಅವಮಾನವನ್ನು ತಾಳಲಾರದೇ ಯೋಗಾಗ್ನಿಯಲ್ಲಿ ದೇಹವನ್ನು ಪರಿತ್ಯಾಗ ಮಾಡಿದಳು. ನಾರದರ ಮುಖಾಂತರ ರುದ್ರದೇವರಿಗೆ ತಿಳಿದು, ತನ್ನ ಜಟೆಯಿಂದ ವೀರಭದ್ರನನ್ನು ಸೃಷ್ಟಿಸಿ, ಅವನ ಮೂಲಕ ಯಜ್ಞನಾಶ ಮಾಡಿಸಿದರು. ಬ್ರಹ್ಮದೇವರು, ಉಳಿದ ಅಮರಗಣಗಳು ಬಂದು ರುದ್ರದೇವರನ್ನು ಸ್ತುತಿಮಾಡಿದರು.

॥ ಪದ್ಯ ॥

ಜಯ ಮಹೇಶ್ವರಾ ಸಕಲ ಭುವನಾ। ಶ್ರಯ ಸದಾಶಿವ ಸಾಧುಜನ।
ಸಂಶ್ರಯ ಸನಾತನಸಚ್ಚಿದಾನಂದೈಕವಿಗ್ರಹನೆ। ಜಯ ಜಗಜ್ಜೀವನನೇ
ಜಯ ಜಯ ಜಯ ಜಗತ್ಪಾವನನೆ ಗೌರೀ। ಪ್ರಿಯನೆ ಪರಮೇಶ್ವರನೆ
ಶರಣಾಗೆಂದಮರಗಣ ॥

ಗದ್ಯ – ಬ್ರಹ್ಮದೇವರು ಮತ್ತು ಉಳಿದ ದೇವತೆಗಳು ರುದ್ರನನ್ನು ಶಾಂತಗೊಳಿಸಿ, ಯಜ್ಞಪೂರ್ತಿಮಾಡುವಾಗ ಪರಮಾತ್ಮನು ಬಂದನು. ದಕ್ಷನಿಗೆ ಮೇಕೆಯ ತಲೆ ಹಚ್ಚಿ, ಯಜ್ಞಪೂರ್ತಿಮಾಡಿದರು. ಸತಿಯು ಮುಂದೆ ಹಿಮವಂತನ ಮಗಳಾಗಿ ಹುಟ್ಟಿ ರುದ್ರದೇವರನ್ನೇ ಮದುವೆಯಾದಳು.

ಗದ್ಯ

ಉತ್ತಾನಪಾದ —

ಉತ್ತಾನಪಾದನಿಗೆ ಸುನೀತಿ, ಸುರುಚಿ ಇಬ್ಬರು ಹೆಂಡರು. ಸುನೀತಿಯನ್ನು ಹೊರಗೆ ಇಟ್ಟು ಸುರುಚಿಯ ಜೊತೆಗೆ ಇರುತ್ತಿದ್ದನು. ಸುನೀತಿಯ ಮಗ ಧ್ರುವನು ಒಮ್ಮೆ ತನ್ನ ತಂದೆಯ ತೊಡೆಯ ಮೇಲೆ ಕುಳಿತು ಕೊಳ್ಳಲು ಬಂದಾಗ, ಸುರುಚಿಯು ನನ್ನಲ್ಲಿ ಹುಟ್ಟಿ ಬಂದರೆ ತಂದೆಯ ತೊಡೆಯಲ್ಲಿ ಕುಳಿತುಕೊಳ್ಳಲು ಸಿಗುತ್ತದೆ ಅಂತಾ ಹೇಳಲು, ಧ್ರುವನಿಗೆ ಬಹಳ ದುಃಖವಾಗಿ ತಾಯಿಯ ಮುಂದೆ ಹೇಳಲು, ಅವಳು ಪ್ರೀತಿಯ ಹೆಂಡತಿ. ನಿನ್ನ ತಂದೆಯ ಪ್ರೀತಿಯನ್ನು ನಾವು ಕಂಡು ಬಂದಿಲ್ಲ ಅಂತಾ ಹೇಳಲು, ದೇವರನ್ನು ಧ್ಯಾನಿಸಿ ಅವನನ್ನು ಕಾಣಲು ಅಡವಿಗೆ ಹೊರಟನು. ಹಾದಿಯಲ್ಲಿ ನಾರದರ ಭೆಟ್ಟಿಯಾಗಿ ಅವರಿಂದ ಉಪದೇಶಗೊಂಡು ತಪಸ್ಸು ಮಾಡಿ ದೇವರ ದರುಶನ ಪಡೆದು ರಾಜ್ಯವನ್ನು ಆಳಿ ಧ್ರುವನಕ್ಷತ್ರವಾಗಿ ಇನ್ನೂ ಆಕಾಶದಲ್ಲಿ ಪ್ರಕಾಶಿಸುತ್ತಿರುವನು.

ಪದ್ಯ ।। ಧ್ರುವನು ತಂದೆಯ ತೊಡೆಯ ಮೇಲೆ ಕುಳ್ಳಿರಲಾಗಿ ।
ಅವನ ತಾಯಿ ವರ್ಜಿಸಿದಳಾಗಿ ।। ಭುವನವನು ಬಿಟ್ಟು ।
ಅಡವಿಯಲಿ ತಪವನು ಗೈಯೆ ಭುವನವನು ಸ್ಥಿರ ಪಡೆದನಾಗ ।।

– ಪುರಂದರದಾಸರು

ಪುರಂಜನೋಪಾಖ್ಯಾನ – ಪುರಂಜನ ಎಂದರೆ ಮನುಷ್ಯದೇಹದಲ್ಲಿರುವ ಜೀವ. ಅವನ ಸ್ನೇಹಿತ ಅಂದರೆ ಅವಿಜ್ಞಾತ ಎಂಬ ಪರಮಾತ್ಮ. ಈ ಪಟ್ಟಣಕ್ಕೆ ಒಂಭತ್ತು ಬಾಗಿಲು. ಇಲ್ಲಿ ಜೀವ ಇದ್ದು ಸುಖ, ದುಃಖವನ್ನು ಅನುಭವಿಸುತ್ತಾನೆ. ಹಗಲು ರಾತ್ರಿಯನ್ನು ಕಳೆಯುತ್ತಾನೆ. ಭಕ್ತಿಯಿಂದ ದೇವರನ್ನು ನೆನೆಸಿ ಮುಕ್ತಿಯನ್ನು ಪಡೆಯಬೇಕೆಂಬುದೆ ಪುರಂಜನ ಆಖ್ಯಾನವೆಂದು ಹೇಳಿದರು.

ಮೈತ್ರೇಯರು ವಿದುರನಿಗೆ ಈ ಎಲ್ಲ ವಿಷಯವನ್ನು ಹೇಳಿದರು. ಇಲ್ಲಿಗೆ ಚತುರ್ಥಸ್ಕಂಧ ಮುಗಿಯಿತು.

***

ಪಂಚಮ ಸ್ಕಂಧ

ಪ್ರಿಯವ್ರತರಾಜನ ವಂಶ, ಜಡಭರತನ ಕಥೆ,ಭೂಗೋಲ, ಖಗೋಲವಿಸ್ತಾರ

ಸ್ವಾಯಂಭುವಿನ ಹಿರಿಯ ಮಗ ಪ್ರಿಯವ್ರತ. ಅವನಿಗೆ ತಂದೆಯು ಮದುವೆ ಮಾಡಿಕೊಂಡು ರಾಜ್ಯವನ್ನು ಆಳು ಎನ್ನಲು ನಾರದರ ಉಪದೇಶದಿಂದ ವೈರಾಗ್ಯ ಬಂದಿದೆ ಸನ್ಯಾಸಿ ಆಗುತ್ತೇನೆ ಅಂತಾ ಹೇಳಲು, ಬ್ರಹ್ಮದೇವರು ಬಂದು ನೀನು ಸನ್ಯಾಸಿ ಆಗಬೇಡ, ದೇವರ ಆಜ್ಞೆಯಂತೆ ಮದುವೆಯಾಗಿ ರಾಜ್ಯವಾಳು ಅಂತಾ ಹೇಳಲು, ಅವನು ಇಬ್ಬರು ಹೆಂಡಿರನ್ನು ಮಾಡಿಕೊಂಡು ರಾಜ್ಯವಾಳಿದನು. ಒಬ್ಬಳಲ್ಲಿ ಹತ್ತು ಗಂಡುಮಕ್ಕಳು. ಇನ್ನೊಬ್ಬಳಲ್ಲಿ ಮೂರು ಮಕ್ಕಳನ್ನು ಪಡೆದನು. ಅವರು ಮನ್ವಂತರಕ್ಕೆ ಅಧಿಪತಿಗಳಾದರು. ೧೦ ಮಕ್ಕಳಲ್ಲಿ ಮೂರುಮಕ್ಕಳು ಸನ್ಯಾಸಿಯಾದರು. ಪ್ರಿಯವ್ರತ ಪರಮಾತ್ಮನ ಬಲದಿಂದ ಜ್ಯೋತಿರ್ಮಯವಾದ ರಥದಲ್ಲಿ ಕುಳಿತು ಎರಡನೇ ಸೂರ್ಯನಂತೆ ಏಳು ಬಾರಿ ಮೇರು ಪರ್ವತಕ್ಕೆ ಪ್ರದಕ್ಷಿಣೆ ಹಾಕಿದನು. ಅವನ ರಥದ ಚಕ್ರದಿಂದ ಏಳು ದ್ವೀಪಗಳಾದವು. ಮತ್ತು ಏಳು ಸಮುದ್ರಗಳಾದವು. ಏಳು ದ್ವೀಪಗಳಿಗೆ ತನ್ನ ಏಳು ಮಕ್ಕಳನ್ನು ರಾಜರನ್ನಾಗಿ ಮಾಡಿದರು. ಮಗಳನ್ನು ಶುಕ್ರಾಚಾರ್ಯರಿಗೆ ಕೊಟ್ಟು ಮದುವೆ ಮಾಡಿದನು. ಅವಳಲ್ಲಿ ದೇವಯಾನಿ ಹುಟ್ಟಿದಳು. ಬಹಳ ದಿವಸ ರಾಜ್ಯವಾಳಿ ಸನ್ಯಾಸಿಯಾಗಿ ಹೊರಟು ಹೋದನು.

ಋಷಭದೇವನ ಮಗನಾದ ಭರತನು ರಾಜ್ಯಪಾಲನೆಯನ್ನು ಮಾಡಿ ಯಜ್ಞಯಾಗಾದಿಗಳನ್ನು ಮಾಡಿ ಸರ್ವಸಂಪತ್ತಿನಿಂದ ಕೂಡಿದ ರಾಜ್ಯವನ್ನು ಮಕ್ಕಳಿಗೆ ಒಪ್ಪಿಸಿ, ಶಾಲಗ್ರಾಮಕ್ಷೇತ್ರಕ್ಕೆ ತಪಸ್ಸಿಗೆ ಹೋದನು. ಗಂಡಕಿನದಿಯ ದಂಡೆಯ ಮೇಲೆ ತಪಸ್ಸು ಮಾಡುತ್ತಿರಲು ಗರ್ಭಿಣಿಯಾದ ಜಿಂಕೆಯು ನೀರು ಕುಡಿಯಲು ಬಂದಿತು. ನೀರು ಕುಡಿಯುವಾಗ ಹುಲಿಯ ಗರ್ಜನೆ ಕೇಳಿ ಜೋರಾಗಿ ಹಾರಲು ಗರ್ಭದಲ್ಲಿದ್ದ ಕೂಸು ನದಿಯಲ್ಲಿ ಬೀಳಲಾಗಿ ಭರತನು ಅದನ್ನು ಎತ್ತಿಕೊಂಡು ಬಂದನು. ಅದರ ಸೇವೆಯಲ್ಲಿ ದೇವರ ಸೇವೆಯನ್ನು ಕಡಿಮೆ ಮಾಡಿದನು. ಒಂದು ದಿನ ಜಿಂಕೆ ಮರಿಯು ಬಾರದಿರಲು ಅದರ ಧ್ಯಾನದಲ್ಲಿಯೇ ಸತ್ತನು. ಮುಂದೆ ಜಿಂಕೆಯಾಗಿ ಹುಟ್ಟಿದನು. ಪೂರ್ವಜನ್ಮದ

ಸ್ಮರಣೆ ಇತ್ತು. ಪಶ್ಚಾತ್ತಾಪದಿಂದ ಜಿಂಕೆ ದೇಹ ಬಿಟ್ಟನು. ಮುಂದೆ ಬ್ರಾಹ್ಮಣನ ಮಗನಾಗಿ ಹುಟ್ಟಿದನು. ಇಲ್ಲಿಯೂ ಪೂರ್ವಜನ್ಮದ ಸ್ಮರಣೆ ಇತ್ತು. ಹೀಗಾಗಿ ಹುಚ್ಚನಂತೆ ಆಚರಿಸುತ್ತಾ ದೇವರ ಧ್ಯಾನದಲ್ಲಿ ಆಸಕ್ತನಾದನು. ಒಮ್ಮೆ ಶೂದ್ರರಾಜನು ಮಕ್ಕಳಿಲ್ಲವೆಂದು ಭದ್ರಕಾಳಿಗೆ ಬಲಿಕೊಡಲು ಇವನನ್ನೇ ಕರೆದುಕೊಂಡು ಹೋಗಲು ಭದ್ರಕಾಳಿಯು ಇವನು ಪರಮಾತ್ಮನ ಭಕ್ತನೆಂದು ಮೂರ್ತಿಯ ಹೊರಗೆ ಬಂದು ಆ ರಾಜನನ್ನು ಅವನ ಪರಿವಾರವನ್ನು ಕೊಂದಳು. ಮುಂದೆ ರಹೂಗಣ ರಾಜನು ಕಪಿಲಾಶ್ರಮಕ್ಕೆ ಹೊರಟಿದ್ದನು. ಮೇನೆ ಹೊರಲು ಒಬ್ಬರು ಕಡಿಮೆಯಾಗಿದ್ದರಿಂದ ಜಡಭರತನನ್ನು ಕರೆದರು. ಜಡಭರತನು ಕೆಳಗೆ ಇರುವ ಸಣ್ಣಪ್ರಾಣಿಗಳನ್ನು ತುಳಿಯದೆ ಕಾಲನ್ನು ಅತ್ತ ಇತ್ತ ಇಡುವಾಗ ರಾಜನಿಗೆ ಮೇನೆಯ ಭಾಗ ಬಡಿಯಲು ಆಗ ರಾಜನಿಗೆ ಸಿಟ್ಟು ಬಂದು 'ನಾನು ರಾಜನು. ನಿನಗೆ ತಿಳಿಯುವುದಿಲ್ಲವೇ' ಎಂದು ಜೋರಾಗಿ ಹೇಳಲು ಜಡಭರತನು ಹುಟ್ಟಿನಿಂದ ಯಾರ ಜೊತೆ ಮಾತನಾಡದೇ ಇದ್ದವನು ಮಂದಹಾಸದಿಂದ ನಾನು ಮೇನೆಯನ್ನು ಹೊರುವವನು ಅಲ್ಲ. ಭಗವಂತನು ನನ್ನಲ್ಲಿ ನಿಂತು ಸಮಸ್ತಕಾರ್ಯವನ್ನು ಮಾಡುತ್ತಾನೆ ಎನ್ನಲು, ರಾಜನು ಕೆಳಗೆ ಇಳಿದು, ನೀನು ಯಾರು ? ಬ್ರಾಹ್ಮಣರಂತೆ ಕಾಣುತ್ತಿ ಎಂದು ಕೇಳಲು ಯಾರಿಗೆ ಸಂಸಾರದಲ್ಲಿ ವೈರಾಗ್ಯ ಬರುವುದಿಲ್ಲವೋ ಅವನಿಗೆ ಜ್ಞಾನ,ಭಕ್ತಿ ಬರುವುದಿಲ್ಲ. ಮನಸ್ಸು ಯಾವಾಗಲೂ ದೇವರಲ್ಲಿ ಇಟ್ಟು ಮುಕ್ತಿಗೆ ಹೋಗುವ ದಾರಿಯನ್ನು ಹುಡುಕಬೇಕು ಅಂತಾ ಉಪದೇಶಮಾಡಲು ಅವನ ಉಪದೇಶದಿಂದ ಸದ್ಗತಿಯನ್ನು ಹೊಂದಿದನು.

ಭೂಗೋಲ-ಖಗೋಲವಿಸ್ತಾರ —

ಪದ್ಯ :

ಹದಿನೈದು ಕೋಟಿ ವಿಸ್ತಾರ। ಅದಕೆ ಹೆಸರುಂಟು
ಗರ್ಭೋದಕವು ಎಂದು। ಅದರೊಳಗೆ ಮೂಲಕೂರ್ಮನು ವಿಷ್ಣು॥
ಮೇಲೆ ಕೂರ್ಮನು ವಾಯು। ಮೇಲೆ ಶೇಷನು ತಾನು ಸಾಲ್ವದಿದು
ಸಾವಿರ ಹೆಡೆಗಳ ವಳಗೆ। ಮೇಲಾದ ಪಂದ್ಲೆಡ್ತೆ ಮೇಲೊಂದು।
ಸಾಸಿವೆ ಕಾಳು ಇಟ್ಟಂತೆ ಭೂಗೋಲ ಪೃತ್ತಿಹನು।

ಮೂಲ ಗರ್ಭೋದಕ ಮ್ಯಾಲೆ ದಶಕೋಟಿ। ವಂದೇ
ಲಕ್ಷ ಕಡಿಮೆ ಭೂಗೋಲ ಲಕ್ಷ ಪರಿಮಿತಿ ಉಂಟು।
ಮುಂದೆ ಭೂಲೋಕದಾರಭ್ಯ ಮ್ಯಾಲೆ ಸೂರ್ಯನ ತನಕ।
ಆಕಾಶ ಒಂದೇ ಲಕ್ಷಪರಿಮಿತಿಯೂ ॥ ೧ ॥

ಸುತ್ತ ಬ್ರಹ್ಮಾಂಡದೊಳಗತ್ಯಂತ ಮಧ್ಯತಾ।
ದಿತ್ಯ ಮಂಡಲವುಂಟು ಆದಿತ್ಯಮಂಡಲ ಹಿಡಿದು
ಮತ್ತೆ ಖರ್ಪರ ತನಕ। ಸುತ್ತೆಲ್ಲ ನಾಲ್ಕು ಕಡೆ ಮತ್ತೆ
ಮ್ಯಾಲಕೆ ಕೆಳಗೆ ಕ್ಲೃಪ್ತಯೋಜನವು ಇಪ್ಪತ್ತೈದು ಕೋಟಿ॥
ಮೂಲ ಶೇಷನ ತಲೆಯ ಮೇಲೆ ಪಾಷಾಣಮಯ
ಮೂಲ ಭೂಮಿಯು ಉಂಟು ಮೇಲುಂಟು ನರಕವೆಂಬೋ।
ಲೋಕ ಮುಂದದರ ಮೇಲೆ ಸಾಲ್ವಿಡಿದು ಹದಿ।
ನಾಲ್ಕು ಲೋಕಗಳುಂಟು ಲೇಸಾಗಿ ಎಲ್ಲಕು ವೈಕುಂಠ ॥ ೨ ॥

ಈ ಲೋಕದಾ ಕೆಳಗೆ ಏಳು ಲೋಕಗಳುಂಟು।
ಈ ಲೋಕದಾರಭ್ಯ ಮೇಲೇಳು ಲೋಕಗಳು।
ಅವುಗಳ ಹೆಸರು ಭೂಲೋಕ, ಭುವರ್ಲೋಕ
ಸ್ವರ್ಲೋಕ, ಮಹಲೋಕ, ಮೇಲಕೆ ಜನೋ ಲೋಕ।
ಮೇಲಕೆ ತಪೋ ಲೋಕ, ಮೇಲುಂಟು ಸತ್ಯವೆಂಬೋ ಲೋಕ।
ಈ ಭೂಲೋಕದಾ ಕೆಳಗೆ ಅತಳ, ವಿತಳ, ಸುತಳ ಮತ್ತೆ।
ತಳಾತಳ, ಮಹಾತಳ, ರಸಾತಳ ಮೂಲದಲಿ ಪಾತಾಳವೆಂದೆನಿಸಿ।
ನಾಥ ಶ್ರೀಹರ್ಯಂಗಜಾತವಾಗಿಹವಲ್ಲೆ ಆತನೇ ವಿರಾಡ್ರೂಪಿ ॥ ೩ ॥

ಈ ಪೃಥಿವಿಯಲಿ ನಾ ಬಂದೆ ಅದರ ವಿಸ್ತಾರ ಐವತ್ತು ಕೋಟಿ।
ಇದಕೆ ಸಪ್ತದ್ವೀಪಗಳುಂಟು। ಮತ್ತಲ್ಲೆ ನಡುನಡುವೆ ಸುತ್ತಲೆ ಸಮುದ್ರಗಳು
ಸಪ್ತ ಪರಿಮಿತಿಯಿಂದ ಕ್ಲೃಪ್ತವಾಗಿಹವು।
ಜಂಬೂದ್ವೀಪ, ಪ್ಲಕ್ಷವೆಂಬೋ ದ್ವೀಪ ಶಾಲ್ಮಲವೆಂಬ ದ್ವೀಪ।
ಕುಶ ದ್ವೀಪ, ಕ್ರೌಂಚವೆಂಬ ದ್ವೀಪ, ಶಾಕವೆಂಬ ದ್ವೀಪ।
ಪುಷ್ಕರವೆಂಬ ದ್ವೀಪವು ॥ ೪ ॥

ಇನ್ನು ಲವಣೋದಧಿ, ಇಕ್ಷುಸಾರೋದಧಿಯು, ವಿಸ್ತೃತ ಸುರೋ
ದಧಿಯು, ಘೃತೋದಧಿಯು, ಮಂಡೋದಧಿಯು, ಕ್ಷೀರಸಾರೋ।
ದಧಿಯು, ದಿವ್ಯಸ್ವಾದೂದಧಿಯು ತಿಳಿಯುವುದು।
ಲಕ್ಷಗಾವುದು ಜಂಬೂದ್ವೀಪ, ಪ್ಲಕ್ಷದ್ವೀಪವು ಎರಡು ಲಕ್ಷ ಗಾವುದು।
ನಾಲ್ಕು ಲಕ್ಷ ಶಾಲ್ಮಲಿ ಎಂಟುಲಕ್ಷ ಕುಶ ಹದಿನಾರು।
ಲಕ್ಷ ಕ್ರೌಂಚವು ಶಾಕ ಲಕ್ಷ ಮೂವತ್ತೆರಡು। ಲಕ್ಷ ಅರವತ್ತನಾಲ್ಕು
ಪುಷ್ಕರ ದ್ವೀಪ ॥ ೫ ॥

ಅದರ ಸುತ್ತಲೆ ಸುವರ್ಣದ ಭೂಮಿ। ಅದರ ಸುತ್ತಲೆ ವಜ್ರದ ಭೂಮಿ।
ಅದರ ಸುತ್ತಲೆ ಗಿರಿಯುಂಟು।
ಇದರ ಸುತ್ತಲೆ ಅಂಧಂತಮ। ಅದರ ಸುತ್ತಲೆ ಘನೋದಕ॥
ಇದರ ಸುತ್ತಲೆ ಅನಂತಾಸನವು ಇದರ ಸುತ್ತಲೆ ಅಂಡ ಖರ್ಪರವು॥

ಜಂಬೂದ್ವೀಪ ವಿವರ ಒಂಭತ್ತು ಖಂಡಗಳು. ವರ ಇಲಾವೃತ ಖಂಡ,
ವರಕೇತುಮಾಲಾ ಖಂಡ, ಪರಮಾಖ್ಯ ಖಂಡ, ಪರ ಹಿರಣ್ಮಯ ಖಂಡ,
ಕುರು ಖಂಡ, ಭದ್ರಾಶ್ವ, ಹರಿವರ್ಷಖಂಡ, ಕಿಂಪುರುಷಖಂಡ,
ಭರತ ಖಂಡ ॥ ೬ ॥

ಗಿರಿ ಮಾಲ್ಯವಾನ್, ನೀಲಗಿರಿ, ಶ್ವೇತಗಿರಿ, ಶೃಂಗವಾನ್‌ಗಿರಿ,
ಗಿರಿಗಂಧಮಾಧನ, ಗಿರಿ ನಿಷದ
ಗಿರಿ ಹೇಮಕೂಟ, ವರಗಿರಿ ಹಿಮಾಲಯವು ॥
ಹರಿಣಾಕ್ಷಿ ದಕ್ಷಿಣಕೆ ಹರಿವರ್ಷಖಂಡ। ಕಿಂಪುರುಷಖಂಡ।
ಉತ್ತರಕೆ ಪರಮರಮ್ಯಖಂಡ। ವರ ಹಿರಣ್ಮಯ ಖಂಡ।
ಮೇಲಂತರಿಕ್ಷದಲಿ ಕಾಲಚಕ್ರವು ಅಲ್ಲೆ ಸೂರ್ಯನ ರಥದ।
ಗಾಲಿ ತಿರುಗುವುದಲ್ಲೆ ಮೇರುಗಿರಿ ಮೇಲೆ ಶಿಂಶುಮಾರ ಹರಿ।
ಮೂಲದಲಿ ಮುಖಮಾಡಿ ಮೇಲೆ ಪುಚ್ಛವ ಮಾಡಿ। ಲೀಲೆಯಿಂದಯಿ
ರುತಿರುವ ಕಾಲಚಕ್ರಕೆ ಅವನೇ ಮೂಲ ಆಧಾರ ॥ ೭ ॥

ಸೂರ್ಯನ ರಥಕೆ ಸಪ್ತಾಶ್ವಗಳು ಕ್ಲುಪ್ತವಾಗಿಹವು ಆ।
ದಿತ್ಯರಥವನು ಜಗ್ಗಿ ಅಂತರಲೆ ಹಾರಿ ಅತ್ಯಂತ ಓಡುತ।

ಮೇರು ಸುತ್ತಲೆ ಪ್ರದಕ್ಷಿಣೆಯ ನಿತ್ಯ ಮಾಡುತಲಿಹನು।
ಮುಂಭಾಗಕರವತ್ತು ಸಾವಿರ ಸಂಖ್ಯ ಕ್ಲುಪ್ತ ಮುನಿಗಳು।
ಸೂರ್ಯನತ್ಯಂತ ಸ್ತುತಿಸುವರು ಗಾತ್ರದಿಂದಗುಷ್ಠ ಮಾತ್ರ ಅವರು॥
ಅವರು ವಾಲಖಿಲ್ಯರೆನಿಸುವರು॥ ೮ ॥

ಭೂಮಿಯ ಮೇಲೆ ರಾಹುವ ತನಕ ತೊಂಭತ್ತು ಸಾವಿರ ಯೋಜನವು।
ಮೇಲ್ಹತ್ತು ಸಾವಿರ ಸೂರ್ಯಮಂಡಲವು, ಮೇಲಕ್ಷದಲಿ ಚಂದ್ರ,
ಮೇಲಕ್ಷ ತಾರೆಗಳು।
ಮೇಲೆರಡು ಲಕ್ಷ ಕವಿ। ಮೇಲೆರಡು ಲಕ್ಷ ಬುಧ ಮೇಲೆರಡು ಲಕ್ಷ ಕುಜ।
ಮೇಲೆರಡು ಲಕ್ಷ ಗುರು ಮೇಲೆರಡು ಲಕ್ಷ ಶನಿ। ಮೇಲಕ್ಷ ಹದಿಮೂರು
ಋಷಿಗಣವು ಮೇಲಕ್ಷ ಹದಿಮೂರು ಧೃವಪದವು॥
ಮೂಲ ಶಿಂಶುಮಾರನು ಮೇಲಾದ ಪುಚ್ಛದಲಿ ಮೇಲೆ ಕುಳಿತಿರುವ॥ ೯ ॥

ಸರ್ವೋತ್ತಮನ ಪಾದೋತ್ತಮಾಂಗುಷ್ಠ ನಖವತ್ತಿ।
ಬ್ರಹ್ಮಾಂಡಹತ್ತಿ ಖರ್ಪರ ವಡೆದು ಬಾಹ್ಯಜಲ ಬಂದ್ಹರಿಪಾದ।
ಕ್ಷತ್ತಿ ತೊಳೆವುದರಿಂದ ಉತ್ಪನ್ನಳಾಗಿ ಭಗವತ್ಪದೀ।
ಎನಿಸುವಳು ಸತ್ಯನಾಮದಲಿ॥ ೯ ॥ ಗಂಗಾದೇವಿ

ಅವಳೇ ಸೀತಾನದಿಯಾಗಿ ಭದ್ರಾನದಿಯಾಗಿ, ಚಕ್ಷುನದಿ,
ಮುಂದೆ ಅಲಕನಂದಾಖ್ಯ ನದಿಯು।
ಕಂಡಾಕ್ಷಣಕೆ ಪಾಪಖಂಡನ ಮಾಡುವಳು, ಮುಂದೆ ಗಿರಿಗಳು
ವಿಂಧ್ಯವೆಂಬ ಗಿರಿ, ಮಹೇಂದ್ರಗಿರಿ, ಮಲಯಗಿರಿ, ಮೈನಾಕಗಿರಿ,
ಗೋವರ್ಧನಗಿರಿ, ರೈವತವೆಂಬ ಗಿರಿ, ಶ್ರೀವೇದಗಿರಿ, ಶ್ರೀಶೈಲಗಿರಿ,
ಶ್ರೀವೇಂಕಟಾಖ್ಯಗಿರಿಯು ॥
ಅಂಗದೇಶ, ವಂಗದೇಶ, ಬಂಗಾಲದೇಶ, ಕಲಿಂಗಾಖ್ಯದೇಶ,
ಕಾಮರೂಪದೇಶ, ಕಾಶ್ಮೀರದೇಶ, ವರಕಾಂಭೋಜದೇಶ, ಕೋಶಲವೆಂಬ
ದೇಶ, ಕೈರಾತದೇಶ, ಕೈಕಯ ದೇಶ, ಕೊಂಕಣದ ದೇಶ, ಪಾರ್ಶ್ವರ್ಕದೇಶ,
ಸುವಿದರ್ಭದೇಶ, ಸೌರಾಖ್ಯ ದೇಶ, ಸೌವೀರದೇಶ, ಶೂರದೇಶ, ನಾಟಕದ
ದೇಶ, ಕರ್ನಾಟಕದೇಶ, ಸೌರಾಷ್ಟ್ರದೇಶ, ಮಹಾರಾಷ್ಟ್ರದೇಶ॥ ೧೦ ॥

ಇಷ್ಟು ದೇಶಗಳಿಂದ ಅಷ್ಟು ತೀರ್ಥಗಳಿಂದ ದಿಟ್ಟಾಗಿರುವದೀ ಶ್ರೇಷ್ಠ
ಭಾರತಖಂಡ ಅನಂತಾದ್ರೀಶನ ಪುಣ್ಯದೇಶಗಳು ॥

॥ ಇಲ್ಲಿಗೆ ಪಂಚಮಸ್ಕಂಧ ಮುಗಿಯಿತು ॥

॥ ಷಷ್ಠಃಸ್ಕಂಧ ॥

ಅಜಾಮಿಳನ ಆಖ್ಯಾನ, ಏಕೋನಪಂಚಾಶತ್ ಮರುತ್ತುಗಳ ಉತ್ಪತ್ತಿ ಶಾಪ, ವೃತ್ರಾಸುರನ ವಧೆ

ಅಜಾಮಿಳೋಪಾಖ್ಯಾನ — ಪರೀಕ್ಷಿತನು ಎಲ್ಲ ನರಕಗಳ ವರ್ಣನೆ ಕೇಳಿ ಪಾಪವನ್ನು ಹೇಗೆ ಕಳೆದುಕೊಳ್ಳಬೇಕು ಅನ್ನಲು ಪ್ರಾಯಶ್ಚಿತ್ತಮಾಡಿಕೊಂಡರೆ ಪಾಪ ಸ್ವಲ್ಪ ಕಡಿಮೆಯಾಗುತ್ತದೆ ಮತ್ತು ಪರಮಾತ್ಮನ ಸೇವೆಯನ್ನು ಮಾಡುವುದರಿಂದಲೇ ಪೂರ್ತಿಯಾಗಿ ಪವಿತ್ರರಾಗುತ್ತಾರೆ. ಪರಮಾತ್ಮನ ನಾಮೋಚ್ಚಾರಣೆಯಿಂದಲೇ ಪೂರ್ತಿಯಾಗಿ ಉದ್ಧಾರವಾಗುತ್ತಾರೆ. ಕೇಳು — ಅಜಾಮಿಳನೆಂಬ ಬ್ರಾಹ್ಮಣನಿದ್ದನು. ಅವನು ಪರಮ ಭಗವದ್ಭಕ್ತ ಮತ್ತು ತಂದೆತಾಯಿಯ ಸೇವೆಯನ್ನು ಅತಿ ಭಕ್ತಿಯಿಂದ ಮಾಡುತ್ತಿದ್ದ. ಪ್ರಾರಬ್ಧದಿಂದ ಶೂದ್ರಸ್ತ್ರೀಯಳ ಸಹವಾಸವನ್ನು ಮಾಡಿದ. ಅವಳಲ್ಲಿಯೇ ಬೇಕಾದಷ್ಟು ಮಕ್ಕಳನ್ನು ಪಡೆದ. ಅಂತ್ಯಕಾಲದಲ್ಲಿ ಯಮದೂತರನ್ನು ನೋಡಿ ಮಗನಾದ ನಾರಾಯಣನನ್ನು ಕೂಗಲು, ಆದರೆ ಅವನು ಮಗನ ನೆವದಿಂದ ಪರಮಾತ್ಮನನ್ನೇ ಅನನ್ಯಭಕ್ತಿಯಿಂದ ಕರೆದ. ಅವನ ಭಕ್ತಿಗೆ ಮೆಚ್ಚಿ ವಿಷ್ಣುದೂತರು ಬಂದರು. ಆಗ ಯಮದೂತರಿಗೂ ವಿಷ್ಣುದೂತರಿಗೂ ವಾದ ನಡೆದು ಅಂತ್ಯಕಾಲದಲ್ಲಿ ದೇವರ ನಾಮಸ್ಮರಣೆ ಮಾಡಿದ್ದರಿಂದ ನಾವು ಬಂದಿದ್ದೇವೆ, ನೀವು ಬೇಕಾದರೆ ಯಮನನ್ನು ಕೇಳಿರಿ ಇದು ಶಾಸ್ತ್ರದಲ್ಲಿಯಿದೆ ಅಂತಾ ಹೇಳಲು, ಯಮದೂತರು ತಿರುಗಿ ಹೋಗಲು ವಿಷ್ಣುದೂತರ ದರುಶನದಿಂದ ಅವನ ಅಪಮೃತ್ಯು ಪರಿಹರಿಸಿ ಮುಂದೆ ಎಲ್ಲವನ್ನೂ ತ್ಯಜಿಸಿ ಗಂಗಾ ತೀರಕ್ಕೆ ಹೋಗಿ ಅಲ್ಲಿ ಧ್ಯಾನ ಮಾಡಿ ವಿಷ್ಣುಲೋಕಕ್ಕೆ ಪ್ರಯಾಣ ಮಾಡಿದನು.

ಪ್ರಚೇತಸರು — ಪ್ರಚೇತಸರು ಸಮುದ್ರದಲ್ಲಿ ಮುಳುಗಿ ತಪಸ್ಸು ಮಾಡಿ ಭಗವಂತನ ದರುಶನ ಮಾಡಿಕೊಂಡು ಮೇಲೆ ಬರಲು, ಎಲ್ಲ ಕಡೆ ಮರಗಳು

ಬೆಳೆದಿದ್ದವು. ಅವನ್ನು ನೋಡಿ ಕೋಪಿಸಿಕೊಂಡು ಅಗ್ನಿಯುಗಾಳಿಯನ್ನು ಸೃಷ್ಟಿಸಿದರು. ಮರಗಳು ಸುಡಲು ಚಂದ್ರನು ಬಂದು ಅವರನ್ನು ಸಮಾಧಾನ ಮಾಡಿ ಮರಗಳ ಮಗಳಾದ ಮಾರಿಷಾಳನ್ನು ಮದುವೆ ಮಾಡಿಕೊಟ್ಟನು. ಅವಳಲ್ಲಿ ದಕ್ಷನು ಹುಟ್ಟಿ ಬಂದನು. ಇವನು ಬ್ರಹ್ಮನ ಮಕ್ಕಳಾದ ಪ್ರಜೇಶ್ವರನ ಮಗಳನ್ನು ಲಗ್ನವಾಗಿ ಅವಳಲ್ಲಿ ೧೦,೦೦೦ ಮಕ್ಕಳನ್ನು ಪಡೆದು ಅವರಿಗೆ ಪ್ರಜಾಸೃಷ್ಟಿ ಮಾಡಿರಿ ಎಂದರೆ ಅವರು ನಾರಾಯಣನ ಕೆರೆಗೆ ಹೋಗಿ ಸ್ನಾನ ಮಾಡಲು ಶುದ್ಧಮನಸ್ಸು ಉಳ್ಳವರಾಗಿ ನಾರದರ ಉಪದೇಶದಿಂದ ಸನ್ಯಾಸಿಗಳಾಗಿ ಹೋದರು. ತನ್ನ ಮಕ್ಕಳು ಸನ್ಯಾಸಿಗಳಾದದ್ದನ್ನು ಕೇಳಿ ಬಹಳೇ ದುಃಖ ಪಡುತ್ತಿರಲು ಬ್ರಹ್ಮದೇವರು ಬಂದು ಸಮಾಧಾನ ಮಾಡಿದರು. ಪುನಃ ಸಾವಿರ ಶಬಲಾಶ್ವರೆಂಬ ಮಕ್ಕಳನ್ನು ಪಡೆಯಲು ಅವರೂ ನಾರದರ ಉಪದೇಶದಿಂದ ಸನ್ಯಾಸಿಗಳಾಗಲು ದಕ್ಷನು ನಾರದರಿಗೆ ಶಾಪವನ್ನು ಕೊಟ್ಟನು. ದೇವರು ಬಂದು ಸಮಾಧಾನ ಮಾಡಿದರು. ಮುಂದೆ ೬೦ ಹೆಣ್ಣುಮಕ್ಕಳನ್ನು ಪಡೆದನು.

ವೃತ್ರಾಸುರನ ವಧೆ — ಬೃಹಸ್ಪತ್ಯಾಚಾರ್ಯರು ದೇವತೆಗಳ ಮೇಲೆ ಕೋಪಿಸಿಕೊಂಡು ಹೋಗಲು, ವಿಶ್ವರೂಪಾಚಾರ್ಯರನ್ನು ಪುರೋಹಿತರನ್ನಾಗಿ ಮಾಡಿಕೊಂಡರು ದೇವತೆಗಳು. ಇವರಿಗೆ ಮೂರು ತಲೆ ಇದ್ದವು. ಆಹುತಿ ಕೊಡುವಾಗ ದೈತ್ಯರಿಗೂ ಆಹುತಿ ಕೊಡುತ್ತಿದ್ದರು. ಏಕೆಂದರೆ ಇವರ ತಾಯಿ ದೈತ್ಯರ ಮನೆಯವಳು. ಇಂದ್ರನು ಸಿಟ್ಟಿನಿಂದ ಅವರನ್ನು ಕೊಂದು ಬಿಟ್ಟನು. ವಿಶ್ವರೂಪಾಚಾರ್ಯರ ತಂದೆ ತ್ವಷ್ಟ್ರುವು ಇಂದ್ರನನ್ನು ಕೊಲ್ಲುವ ಮಗನನ್ನು ಪಡೆಯಲು ಯಜ್ಞ ಮಾಡಿದನು. ಅಭೀಷ್ಟಕ್ಕೆ ಅನುಗುಣವಾಗಿ ಮಂತ್ರದ ಸ್ವರ ಬದಲಿಸದೆ ಹೇಳಿದ್ದರಿಂದ ಇಂದ್ರನಿಂದ ಸಂಹಾರಮಾಡಿಸಿಕೊಳ್ಳುವ ಮಗ ಅಗ್ನಿಯಲ್ಲಿ ಹುಟ್ಟಿದನು. ಅವನೇ ವೃತ್ರಾಸುರ. ವೃತ್ರಾಸುರ ದೇವತೆಗಳಿಗೆ ತ್ರಾಸ ಕೊಡುವುದನ್ನು ತಾಳಲಾರದೆ ದೇವರಲ್ಲಿ ಹೋಗಿ ಬೇಡಿಕೊಳ್ಳಲು, ದಧೀಚಿ-ಋಷಿಗಳಲ್ಲಿ ಅವರ ಅಸ್ಥಿಯನ್ನು ಕೇಳಿರಿ. ಏಕೆಂದರೆ ನಾರಾಯಣ ಕವಚವನ್ನು ಜಪಿಸಿ ಅವರ ಅಸ್ಥಿ ಗಟ್ಟಿಯಾಗಿವೆ. ಅವರು ಕೊಡುತ್ತಾರೆ ಎನ್ನಲು ಎಲ್ಲರೂ ಹೋಗಿ ಕೇಳಲು, ಅವರು ಪ್ರಾಣವನ್ನು ಬಿಡಲು, ಅವರ ಅಸ್ಥಿಯಿಂದ ವಜ್ರಾಯುಧವನ್ನು ಮಾಡಿಸಿ ಅದರಿಂದ ಯುದ್ಧಮಾಡಿದರು. ಅಲ್ಲದೆ ಸಮುದ್ರದ ಬುರುಗನ್ನು ಹಚ್ಚಿ ಯುದ್ಧ ಮಾಡಿದರು. ಅವನು ಪ್ರಾಣ ಬಿಡಲು ಮತ್ತೆ ಇಂದ್ರನಿಗೆ ಬ್ರಹ್ಮಹತ್ಯಾ ದೋಷ ಬಂದಿತು.

ನಾರಾಯಣ ಕವಚ

ಸಕಲ ಋಷಿಗಳಲ್ಲಿ ಹರಿ ನಮ್ಮ ಸ್ವಾಮಿಯಾಗಿ ರಕ್ಷಿಸು - ಜಲದಲಿ
ಮತ್ಸ್ಯಾವತಾರನಾಗಿ। ಸ್ಥಳದಲ್ಲಿ ವಾಮನನಾಗಿ ರಕ್ಷಿಸು ನಿಮ್ಮ ನೆನೆವರಾ ॥
ಆಕಾಶದಲ್ಲಿ ತ್ರಿವಿಕ್ರಮನಾಗಿ ರಕ್ಷಿಸು। ಭಯಗಳಲ್ಲಿ ನಾರಸಿಂಹನಾಗಿ
ಮಾರ್ಗದಲ್ಲಿ ವರಾಹನಾಗಿ ರಕ್ಷಿಸು ನಿಮ್ಮ ನೆನೆವರಾ ॥

ಪರ್ವತಾಗ್ರದಲ್ಲಿ ಪರಶುರಾಮನಾಗಿ ರಕ್ಷಿಸು।
ಪರದೇಶದಲ್ಲಿ ರಾಮಚಂದ್ರನಾಗಿ ರಕ್ಷಿಸು ನಿಮ್ಮ ನೆನೆವರಾ

ಆಶ್ರಯದಲ್ಲಿ ನರನಾರಾಯಣನಾಗಿ ರಕ್ಷಿಸು। ಅಯೋಗ್ಯರಲ್ಲಿ
ದತ್ತಾತ್ರೇಯನಾಗಿ ರಕ್ಷಿಸು। ಕರ್ಮಬಂಧಗಳೆಲ್ಲ ಕಳೆದು ರಕ್ಷಿಸು
ಕಪಿಲಮೂರ್ತಿಯಾಗಿ ಪ್ರಾತಃಕಾಲದಲ್ಲಿ ಕೇಶವ ನಮ್ಮ ರಕ್ಷಿಸು।
ಸಾಯಂಕಾಲದಲ್ಲ ಗೋವಿಂದ ನಮ್ಮ ರಕ್ಷಿಸು।

ಅಪರಾಹ್ನ ಕಾಲಗಳೆಲ್ಲ ಕಳೆದು ರಕ್ಷಿಸು।
ನಮ್ಮ ಸಕಲ ಕಾಲಗಳಲ್ಲಿ ನರಕದಿಂದ ಕೂರ್ಮನಾಗಿ ರಕ್ಷಿಸು।

ವಿಪತ್ತಿನಿಂದ ಧನ್ವಂತರಿ ರಕ್ಷಿಸು। ಅನ್ಯದೇವತೆ ಭಜನೆ ಕಳೆದು ರಕ್ಷಿಸಯ್ಯ
ಶ್ರೀ ಕೃಷ್ಣ ಮೂರುತಿಯಾಗಿ ಅಜ್ಞಾನವಿಷಯಗಳ ಕಳೆದು ರಕ್ಷಿಸು
ವೇದವ್ಯಾಸ ಮೂರ್ತಿಯಾಗಿ।

ಕೃಷ್ಣನ ಶಂಖವೆ ನಿಮ್ಮ ಧನಿದುರಿ ರಾಕ್ಷಸರ ಎದೆ ಒಡೆಸಿ, ಭಯಬಿಡಿಸಿ
ಲಯವನೆ ಮಾಡಿಸಿ ಪೂತಗಂಧರ್ವರು ಕೂಷ್ಮಾಂಡ ತೋರಿಸಲು
ವಿಷ್ಣುಗದೆ ರಾಕ್ಷಸರು ಒಡೆದು ಚೂರ್ಣವ ಮಾಡಿ।

ಕಿಡಿಗಳಂತೆ ಭೂಮಿ ಮೇಲೆ ಆಧರಿಸಿ। ಶತಚಂದ್ರಪ್ರಭೆಯಂತೆ ಹೊಳೆವ
ಹರಿಯು ನಮ್ಮ ಮತಿವಂತರು ವೈರಿಗಳ ಕಣ್ಣಿಗೆ ಕಾಣಬಾರದು ಮಾಡಿ
ತೋರಿಸಿ ತಮ್ಮ ದಿವ್ಯ ತೇಜಗಳ। ಧರ್ಮವಿಷಯದಲಿ ಹಯಗ್ರೀವನಾಗಿ
ರಕ್ಷಿಸು.। ಮಧ್ಯಾಹ್ನ ಕಾಲದಲಿ ಮಧುಸೂದನನಾಗಿ। ಸಾಯಂಕಾಲದಲಿ
ಶ್ರೀವತ್ಸಮೂರ್ತಿಯಾಗಿ। ಸಾಮವೇದಕೆ ಅಭಿಮಾನಿಯಾದ
ಗರುಡವಾಹನನೆ ಸಲಹೆನ್ನ ವಿಷದ ಭಯಗಳ ಬಿಡಿಸಿ। ಕೃಷ್ಣ ಮಕುಟಾಧರನೆ

ರಕ್ಷಿಸೋ ನಮ್ಮನ್ನ ಪ್ರಾಣೇಂದ್ರಿಯದಿಂದ। ಬುದ್ಧಿಯಿಂದ ದಿಕ್ಕು ದಿಕ್ಕುಗಳಲಿ ನಾರಸಿಂಹಮೂರ್ತಿಯಾಗಿ। ನಾರಸಿಂಹ ನಾದಗಳಿಂದ ಎಲ್ಲ ಪರಿಯಿಂದ ಭಕ್ತರನೆಲ್ಲ ನರಹರಿ ಇದ್ದು ರಕ್ಷಿಸೊ।

ಗುರುಮಧ್ವರಾಯರ ಗುರು ವಿಶ್ವ ವ್ಯಾಪಕರ ಸುವಿಷ್ಣು ವೈಷ್ಣವರ ಮಗನಂತೆ ನಿಮ್ಮ ಸುನಾಮ ಎಂದು ಪಾಡಿ ಸುಖಿಯಾಗಿ ಜಮದಗ್ನಿ ವರದ ಪ್ರಹ್ಲಾದವರದ ಅಸುರರ ಗೆಲಿದ ಬಲರಾಮ ಜಾನಕಿವಲ್ಲಭ ಜಯ ಜಯರಾಮ ನಿತ್ಯ ವೈಕುಂಠ ನಿಜಗೋವಿಂದ ಅಂಬರೀಷರಾಯಗೆ ವರಗಳ ಕೊಟ್ಟ ನಂಬಿದ ಭಕ್ತರಿಗೆ ಅಭಯ ಕೊಟ್ಟ ಯಶೋದೆಯ ಮನ ಉದ್ಧರಿಸಿದ ಹಯವದನ ರಕ್ಷಿಸು।

ಶುಕಾಚಾರ್ಯರಿಗೆ ರಾಜನು ವೃತ್ರಾಸುರನು ಯಾರು ಅಂತಾ ಕೇಳಲು,

ಗದ್ಯ — ಅವನು ಚಿತ್ರಕೇತು ಮಹಾರಾಜನು. ಪಾರ್ವತಿಯ ಶಾಪದಿಂದ ರಾಕ್ಷಸನಾಗಿದ್ದನು. ಒಮ್ಮೆ ಪಾರ್ವತಿಪರಮೇಶ್ವರರು ಜತೆಯಾಗಿ ಕುಳಿತಾಗ ನೋಡಿ ಅಪಹಾಸ್ಯ ಮಾಡಿದ್ದರಿಂದ ಪಾರ್ವತಿಯು ಶಾಪ ಕೊಟ್ಟಿದ್ದಳು.

ದಿತಿಯು ಗಂಡನಿಗೆ ಇಂದ್ರನನ್ನು ಕೊಲ್ಲುವ ಮಗ ಹುಟ್ಟಬೇಕಾದರೆ ಯಾವ ವ್ರತ ಮಾಡಬೇಕು ಅಂತಾ ಕೇಳಲು ಒಂದು ವರ್ಷ ಪುಂಸವನ ಮಾಡಬೇಕು ಅಂತಾ ಹೇಳಲು ಅವಳು ವ್ರತವನ್ನು ಮಾಡುತ್ತಿರಲು ಅದರ ನಿಯಮದಂತೆ ಇರಲಾಗದೆ ಒಂದು ದಿನ ಕಾಲು ಸರಿಯಾಗಿ ತೊಳೆಯದೇ ಮಲಗಲು ಇಂದ್ರನು ಅವಳ ಹೊಟ್ಟೆಯಲ್ಲಿ ಹೊಕ್ಕು ಅವಳ ಗರ್ಭವನ್ನು ಏಳು ತುಂಡುಮಾಡಲು, ಅವು ಅಳಲು ಮತ್ತೆ ಏಳು ತುಂಡು ಮಾಡಲು ಅವುಗಳು ಏಕೋನಪಂಚಾಶತ್ ಮರುತ್ತುಗಳೆಂದು ಇಂದ್ರನು ಕರೆದುಕೊಂಡು ಹೋದನು. ಇಲ್ಲಿಗೆ ಷಷ್ಠ ಸ್ಕಂಧ ಮುಗಿಯಿತು.

॥ ಸಪ್ತಮ ಸ್ಕಂಧ ॥

ಪ್ರಹ್ಲಾದನ ಚರಿತ್ರೆ, ನರಸಿಂಹನ ಅವತಾರ, ಹಿರಣ್ಯಕಶಿಪುವಿನ ಸಂಹಾರ, ವರ್ಣಾಶ್ರಮದ ವಿಸ್ತಾರ

ಹಿರಣ್ಯಾಕ್ಷನನ್ನು ಪರಮಾತ್ಮನು ಕೊಲ್ಲಲು ಹಿರಣ್ಯಕಶಿಪುವಿಗೆ ಸಿಟ್ಟು ಬಂದು ಬ್ರಹ್ಮನನ್ನು ಕುರಿತು ತಪಸ್ಸಿಗೆ ಹೋಗಲು ಇತ್ತ ಇಂದ್ರನು ಅವನ ಹೆಂಡತಿಯಾದ

ಕಯಾಧುವನ್ನು ಕರೆದುಕೊಂಡು ಹೊರಟಾಗ ನಾರದರು ಭೇಟ್ಟಿಯಾಗಿ ಅವಳ ಗರ್ಭದಲ್ಲಿ ಭಗವದ್ಭಕ್ತನಿದ್ದಾನೆ ಕರೆದುಕೊಂಡು ಹೋಗಬೇಡವೆನ್ನಲು ನಾರದರ ಆಶ್ರಮದಲ್ಲಿ ಬಿಟ್ಟು ಹೋದನು. ದಿನಾಲು ಕಯಾಧುವಿಗೆ ಉಪದೇಶ ಮಾಡಲು, ಅದನ್ನು ಹೊಟ್ಟೆಯಲ್ಲಿರುವ ಮಗ ಕೇಳಿ ಒಳ್ಳೇ ಭಗವದ್ಭಕ್ತನಾದನು. ಉಳಿದ ವಿಷಯವು ಈ ಹಾಡಿನಲ್ಲಿದೆ.

ಪದ್ಯ

ನಾರಸಿಂಹನೆಂಬ ದೇವನು । ನಂಬಿದಂಥ ನರರಿಗೆಲ್ಲ ವರವ ಕೊಡುವನು ॥ಪ॥

ಆದಿಯಲ್ಲಿ ಲಕ್ಷ್ಮಿ ಸಹಿತದಿ ಮಲಗಿರಾಲು । ಬಂದರಾಗ ಸನತ್ಕುಮಾರರು ।
ಆಗ ದ್ವಾರಪಾಲಕರು ತಡೆಯಲಾಗಿ । ಕೋಪದಿಂದ ಮೂರಜನ್ಮದಲ್ಲಿ
ಅಸುರರಾಗಿ ಪುಟ್ಟಿರೆಂದರು ॥೧॥

ದಿತಿಯ ಗರ್ಭದಲ್ಲಿ ಜನಿಸದ । ಹಿರಣ್ಯಾಕ್ಷ ಹಿರಣ್ಯಕಶಿಪು ಎಂಬ ಭ್ರಾತೃರು ।
ಪೃಥಿವಿಯನ್ನು ಮುಳಿಗಿಸಿದ ಕಾರಣಾದಿ ಶ್ರೀಹರಿಯು ।
ತೃತಿಯ ರೂಪದಿಂದ ಖಳನ ಕೊಂದು ಧರೆಯನುಳಿಸಿದನು ॥ ೨ ॥

ಅನುಜನಾದ ಹಿರಣ್ಯಾಕ್ಷನ ಮರಣವನ್ನು ಕೇಳಿ ನಡೆದ ತಪಸಿಗೇ ।
ಹರಿಯ ಮೇಲೆ ಸಿಟ್ಟಿನಿಂದ ಉಗ್ರತಪಸ್ಸನ್ನು ಮಾಡಿ ಬ್ರಹ್ಮನಿಂದ
ವರಗಳನ್ನು ಪಡೆದುಕೊಂಡು ಬಂದನಾಗ ॥೩॥

ಇಂದ್ರಲೋಕ ಸೂರೆಮಾಡಿದ ಅಸುರ ತಾನು
ಮೂರು ಲೋಕಕೆ ಭಯವ ತೋರಿದ ।
ಗರ್ಭಿಣಿ ಕಯಾಧುವನ್ನು ಬ್ರಹ್ಮಪುತ್ರ ಬಂದು
ಅಸುರನಾದ ಹಿರಣ್ಯಕಶಿಪುವಿಗೆ ಒಪ್ಪಿಸಿದನು ॥೪॥

ನವಮಾಸ ತುಂಬಲು ಕಯಾಧು ದೇವಿ ಪುತ್ರರತ್ನವನ್ನೆ ಪಡೆದಳು ।
ನಾಮಕರ್ಣ ಮಾಡಿ ವಿಪ್ರರನ್ನು ಕರೆಸಿ ಬೇಗ ದೈತ್ಯ
ತನ್ನ ಸುತಗೆ ಪ್ರಹ್ಲಾದ ನೆಂದು ಕರೆದನಾಗ ॥೫॥

ಓಂ ನಮಃ ಶಿವಾಯ ಎನುತಲಿ ಅಸುರ।
ತನ್ನ ಸುತನ ಬರೆದು ತೋರು ಎಂದಾಗ
ನರಹರಿಯ ನಾಮವನ್ನು ನಗುನಗುತಲೆ ಬರೆಯುತ್ತಿರಲು
ಎಡದ ತೊಡೆಯ ಮೇಲಿದ್ದ ಶಿಶುವ ಧರೆಗೆ ನೂಕಿದನು ॥೬॥

ಸುತ್ತ ಜನರ ಕರೆಸಿ ಬೇಗದಿ ಅಸುರ ತನ್ನ । ಸುತನ ಕೊಲಿಸಬೇಕು ಎನ್ನಲು।
ಅಟ್ಟ ಅಡವಿಯೊಳು ವಿಷವನಿಟ್ಟು ಭೋಜನಂಗಳು ಮಾಡಿ
ಹರಿಯ ಸ್ಮರಣೆ ಮಾಡುತಲೇ ಭುಂಜಿಸಿದ ಜಟ್ಟಿ ಹಾಂಗೆ ॥೭॥

ಅಂಬುಧಿಯೊಳು ಮಗನ ಮಲಗಿಸಿ,ಮೇಲೆ। ದೊಡ್ಡ ಬೆಟ್ಟವನ್ನು ಇಟ್ಟು ಬನ್ನಿರೋ
ಹರಿಯ ಕೃಪೆಗೆ ವಶನಾದ ತರಳನೆಂದು ವರುಣದೇವ।
ಮರಣ ಇಲ್ಲದ್ಹಾಂಗೆ ಮಾಡಿ ಮನೆಗೆ ಕಳುಹಿಸಿದನು ॥೮॥

ಬೆಟ್ಟದಿಂದ ಕಟ್ಟಿ ಉರುಳಿಸಿ ಅಸುರ ತನ್ನ ಪಟ್ಟದಾನೆಯಿಂದ ತುಳಿಯಿಸಿ ।
ಹುಲಿಯ ಬೋನಿನಲ್ಲಿ ಇಟ್ಟು ಯತ್ನವಿಲ್ಲದ ಸುತನ
ಕೊಲ್ಲಲು ಶಕ್ತನಲ್ಲದೆ ಪೋದನಂತೆ ॥೯॥

ನಿನ್ನ ದೇವ ಇದ್ದ ಎಡೆಯನು ತೋರು। ಎನುತ ಪಿತನು ತನ್ನ ಸುತನ ಕೋರಲು
ಎನ್ನದೇವ ಇಲ್ಲದಂಥ ಎಡೆಗಳುಂಟೆ ಲೋಕದಲ್ಲಿ
ಕಂಭದಲ್ಲು ಇರುವನೆಂದು ಕೈಯ ಮುಗಿದು ಪೇಳ್ದನಂತೆ ॥೧೦॥

ವರಕಂಭವನ್ನು ವದೆಯಲು ನರಹರಿಯು। ಉಗ್ರಕೋಪವನ್ನು ತಾಳಿದ।
ಕಟಕಟೆಂಬ ಧ್ವನಿಯ ಮಾಡಿ ನಖಗಳಿಂದ ಪಿಡಿದು ಒತ್ತಿ
ಕರುಳ ಬಗಿದು ಮಾಲೆ ಹಾಕಿ ಕಂದ ಭಕ್ತನಪ್ಪಿಕೊಂಡ ॥೧೧॥

ಅಂತರಿಕ್ಷದಲ್ಲಿ ಅಮರರು ನೋಡಿ ಆಗ ಪುಷ್ಪವೃಷ್ಟಿಯನ್ನ ಕರೆಯಲು
ಆಜನ ಪಡೆದ ದೇವಿ ಬಂದು ತೊಡೆಯ ಮೇಲೆ ಕುಳ್ಳಿರಾಲು
ಅಮರರೆಲ್ಲ ನೋಡಿ ಅಂಜಬೇಡೆಂದಭಯ ಕೊಟ್ಟ ॥೧೨॥

ಲಕ್ಷ್ಮಿನಾರಸಿಂಹನ ಚರಿತೆಯ ಉದಯಕಾಲ ಪಠಿಸುವಂಥ ನರರಿಗೆಲ್ಲ
ಪುತ್ರಸಂತಾನಂಗಳಿತ್ತು ಮತ್ತು ಬೇಡಿದ್ಹಾಗೆ ಕೊಟ್ಟು
ಕಟ್ಟಕಡೆಗೆ ಮುಕ್ತಿ ಕೊಡುವ ಪುರಂದರವಿಟ್ಠಲ ॥೧೩॥

ಈ ಹಾಡಿನಲ್ಲಿ ಪ್ರಹ್ಲಾದನ ಚರಿತ್ರೆ ನರಸಿಂಹನ ಅವತಾರ, ಹಿರಣ್ಯಕಶಿಪುವಿನ ಸಂಹಾರ ಬಂದಿದೆ.

ಗದ್ಯ — ಆ ಮೇಲೆ ಧರ್ಮರಾಜನು ರಾಜಸೂಯಯಾಗಮಾಡಿದಾಗ ಶಿಶುಪಾಲನು ಶ್ರೀಕೃಷ್ಣನನ್ನು ೧೦೮ಸಲ ಬೈದಿದ್ದರಿಂದ ಅವನನ್ನು ಕೃಷ್ಣ ಸಂಹಾರ ಮಾಡಿದನು. ಅವನ ಜೀವ ಪರಮಾತ್ಮನಲ್ಲಿ ಬಂದು ಸೇರಿತು. ನೋಡಿ ಆಶ್ಚರ್ಯವಾಯಿತು. ನಾರದರನ್ನು ಕೇಳಿದನು. ಅವರು ವೈಕುಂಠದ ದ್ವಾರಪಾಲಕರು. ಸನಕಾದಿಗಳಿಂದ ಶಾಪವಿತ್ತು. ಆದಕ್ಕೆ ಅವರು ಪರಮಾತ್ಮನಿಂದ ಮರಣವನ್ನು ಕೇಳಿದ್ದರು ಅಂತಾ ಹೇಳಲು ವೈಕುಂಠದಲ್ಲಿ ಮುಕ್ತಸ್ಥಾನ ಅಮುಕ್ತಸ್ಥಾನ ಎಂತಾ ಇದೆ. ಮುಕ್ತಸ್ಥಾನದಲ್ಲಿ ಇದ್ದವರಿಗೆ ಶಾಪ, ವರ ಹತ್ತುವುದಿಲ್ಲ, ಆದರೆ ಜಯ ವಿಜಯರು ಅಮುಕ್ತಸ್ಥಾನದ ದ್ವಾರಪಾಲಕರು ಎಂತಾ ಹೇಳಿದರು. ಆಮೇಲೆ ನಾಲ್ಕು ವರ್ಣಾಶ್ರಮ ಮಾಡಿದನು. ಬ್ರಾಹ್ಮಣರು ಯಜ್ಞ, ಅಧ್ಯಯನ ಮಾಡುವವರು. ಕ್ಷತ್ರಿಯ ರಾಜನು ಪ್ರಜೆಗಳನ್ನು ರಕ್ಷಿಸುತ್ತಾ ಧರ್ಮವನ್ನು ಕಾಯ್ದು ಕೊಳ್ಳುವವರು. ವೈಶ್ಯರು ಸತ್ಯದಿಂದ ವ್ಯಾಪಾರ ಮಾಡುವರು. ಶೂದ್ರರು ಮೂರುವರ್ಣದವರ ಸೇವೆ ಮಾಡುತ್ತಾ ಕೃಷಿ ಮಾಡುವವರು ಅಂತಾ ವರ್ಣಾಶ್ರಮದ ವಿಸ್ತಾರವನ್ನು ಹೇಳಿದರು. ಇಲ್ಲಿಗೆ ಸಪ್ತಮಸ್ಕಂಧ ಮುಗಿಯಿತು.

ಅಷ್ಟಮಸ್ಕಂಧ

ಗಜೇಂದ್ರಮೋಕ್ಷದ ವಾರ್ತೆ, ಕ್ಷೀರಾಬ್ಧಿ ಮಥನ, ಮತ್ಸ್ಯಾವತಾರ, ಕೂರ್ಮಾವತಾರ, ವಾಮನಾವತಾರದ ವಿಸ್ತಾರವಿದೆ.

ಗಜೇಂದ್ರಮೋಕ್ಷ — ಗಂಗಾತೀರದಲ್ಲಿ ದೇವಲಋಷಿಯು ತಪಸ್ಸನ್ನು ಮಾಡುತ್ತಿದ್ದರು. ಆಗ ಹಾಹಾ, ಹೂಹೂ ಗಂಧರ್ವರು ದೇವಲಋಷಿಯನ್ನು ಪೀಡಿಸಬೇಕೆಂದು ಹೂಹೂ ಗಂಧರ್ವ ಮೊಸಳೆಯಾಗಿ ನೀರಿಗೆ ಬಂದರೆ ಹೆದರಿಸುವುದು. ಮೇಲೆ ಬಂದರೆ ಹಾಹಾ ಗಂಧರ್ವ ಆನೆಯಾಗಿ ಅವರನ್ನು ಸೊಂಡಿಲ ಮೇಲೆ ಕೂಡಿಸಿಕೊಂಡು ಆಟ ಆಡಿಸುವುದು. ಮೊದಲು ಅವರು ಜ್ಞಾನದೃಷ್ಟಿಯಿಂದ ತಿಳಿದುಸಿಟ್ಟಿನಿಂದ ಮೊಸಳೆಯಾಗಿಯೇ ಇರು. ನೀನು ಕೊಲ್ಲದೆ ಚೆನ್ನಾಗಿ ಆಡಿಸಿದ್ದರಿಂದ ಮೊದಲು ರಾಜನಾಗಿ ಆಮೇಲೆ ಆನೆಯಾಗು ಎಂದು ಶಾಪಕೊಟ್ಟರು. ಅವನೇ ಇಂದ್ರದ್ಯುಮ್ನರಾಜನಾಗಿ ಧರ್ಮದಿಂದ ರಾಜ್ಯವಾಳು-

ತ್ತಿದ್ದರು. ಒಮ್ಮೆ ಅವನು ಧ್ಯಾನದಲ್ಲಿ ಮಗ್ನನಾಗಿರಲು ಅಗಸ್ತ್ಯಋಷಿಗಳು ಶಿಷ್ಯರ ಸಹಿತ ರಾಜನಲ್ಲಿ ಬಂದಾಗ ಅವನು ಸತ್ಕರಿಸಲಿಲ್ಲವೆಂದು ಸಿಟ್ಟಿನಿಂದ ಆನೆಯಾಗು ಎಂತಾ ಶಾಪಕೊಟ್ಟರು. ಆನೆಯಾಗಿ ತ್ರಿಕೂಟಪರ್ವತದ ಅಡಿಯಲ್ಲಿ ವರುಣನ ಉದ್ಯಾನದಲ್ಲಿ ಒಂದು ಸರೋವರವಿತ್ತು. ಅಲ್ಲಿ ಮೊಸಳೆ ವಾಸವಾಗಿತ್ತು (ಹೂಹೂ ಗಂಧರ್ವ). ಅಲ್ಲಿ ಆನೆಯು ನೀರಡಿಸಿ, ನೀರುಕುಡಿಯಲು ಹೋಯಿತು. ಆಗ ಮೊಸಳೆಯು ಆನೆಯ ಕಾಲು ಹಿಡಿಯಿತು.

ಪದ್ಯ

ವತ್ತಿ ಹಿಡಿದೆಳೆವುತಿರೆ ತೆತ್ತಣವೇನೆನುತ। ಮತ್ತೆ ಗಜರಾಜ।
ನಾಡೆತ್ತಿ ಘೀಳಿಡುತಿರೆ। ದೊತ್ತಿ ದಂಡೆಗೆ ನಡು ಮಡುವಿನೊಳಗೆತ್ತೆಳೆದು
ದದೆಗಳ। ಇತ್ತಂಡ ಎತ್ತು ಕಾಡುತ್ತ ಸಾವಿರವರುಷ। ವಿಸ್ತರಸೀತೇನೆಂಬ
ಮತ್ತಾ ಗಜೇಂದ್ರಗೆ ಸತ್ವ ತಗ್ಗಿತು ತನ್ನ ಬೆತ್ತದಲಿ ಧ್ಯಾನಿಸುತ ಮತ್ತಾರು
ತನಗೆನುತಲಿ। ಹರಿಯೇ ॥ ೧ ॥

ಬಂದುದಾ ಸಮಯದಲಿ ಹಿಂದೆ ಮಾಡಿದ ಪುಣ್ಯದಿಂದ ದಿವ್ಯ ಜ್ಞಾನ ಕಣ್ಣ
ತೆರೆದು ಕೈಮುಗಿದು। ವಂದಿಸುತ ಮನದೊಳು ಅರವಿಂದ, ಅಚ್ಯುತಾ,
ಕೇಶವ, ಭಕ್ತಬಂಧು ಕರುಣಾಸಿಂಧು ತಂದೆ ನೀ ಸಲಹೆನ್ನ। ಇಂದು
ಸಿಲುಕಿದೆನು ಬಲುದಂದು ಗದ ಮಾಯಾ ಪ್ರಬಂಧದಿಂ ನೆಗಳೆಯಿಂದ
ಹರಿಯೇ ॥ ೨ ॥

ಇಂತೆನುತ ಮೂರ್ಛೆಯಲಿ ಕಂಪಿತ ಕಂಠ ಧನಿಯೊ। ಳಂತರಾತ್ಮಕನ
ನೆನೆಯುತ್ತಳುತ್ತಿರಲತ್ತ। ಅನಂತ ಮಹಿಮನ ಕೇಳಿ ಕರುಣದಿಂದಾಕ್ಷಣ।
ನಂತಶಯನದಿಂದೆದನು। ಸಂತಸದಿ ಸಿರಿ ಸಹಿತ ಗರುಡವಾಹನನಾಗಿ।
ಚಿಂತೆ ಬೇಡೆನುತ ಅಭಯ ಹಸ್ತವನಿತ್ತೇ।ಕಾಂತಭಕ್ತನ ಬಳಿಗೆ ವಂದೆರಡು
ಕೈಗಳಿಂದ ದಂತರಾಜನನು ನೆಗಹಿದ ಹರಿಯೇ ॥ ೩ ॥

ನೆಗಳೆ ಬಾಯನು ಚಕ್ರದಲಿ ಸೀಳಿ ಕರಿವರನ। ಉಗವ ಕರುಣದಲಿ
ಮೆದಹಲ್ಕೆ ಗಜ ಜನ್ಮ। ತೆಗೆದಾಕ್ಷಣವೆ ಮಣಿಮಕುಟ ಕುಂಡಲದಿಂದ ಮಿಗೆ
ಶೋಭಿಸುತಲೆಸೆದನು। ವಿಗಡ ದೇವಲಋಷಿಯ ಶಾಪದಲಿ ಬಂದು ಮಿಗೆ

ನಕ್ರನಾಗಿ ಹೂಹೂ ಎಂಬ ಗಂಧರ್ವ । ನಗಧರನ ಕಂಡು ನಿಜಗತಿಗೈದುದು
-ಮರರೊಳ್ಗಿಗೆ ಮೆರೆದು ದೋಲೈಸುತ ॥ ೪ ॥

ಹರಿಯ ಸ್ತುತಿಗೈದಂಘ್ರಿಗೆರಗಲಾಗ ಭೂಪನಾ । ಆದರಿಂದ ಸತ್ಕರಿಸಿದ ।
ಆವನಿದನು ಉದಯ ಕಾಲದಲೆದ್ದು ನಿಜಭಕ್ತಿ । ಭಾವಶುದ್ಧಿಗಳಿಂದ ಪೇಳಿ
ಕೇಳ್ವನೋ ಅವನ । ಸಾವಿರಜನ್ಮಗಳ ಸಂಚಿತಘರಾಶಿಗಳು ತಾವೆ
ಹತವಾದವೆಂದು । ಶ್ರೀವಾಸುದೇವನಾಜ್ಞಾಪಿಸಿ ಗಜೇಂದ್ರ ಸಹಿ । ತಾ
ವಿಹಂಗಾಧಿಪನೇರಿ ವೈಕುಂಠಕ್ಕೆ । ದೇವಬಿಜಯಂಗೈದ ಪುರಂದರವಿಠಲನ
ಸೇವಕರಿಗಿದು ಚಿತ್ರವೇ ॥ ೫ ॥

ಗದ್ಯ

ಹೀಗೆ ಗಜೇಂದ್ರ ಕಥೆ ಮುಗಿದ ಮೇಲೆ ಅಮೃತಮಥನ ನಡೆಯಿತು.

ಅಮೃತಮಥನ — ಒಮ್ಮೆ ಇಂದ್ರನು ಐರಾವತದ ಮೇಲೆ ಕುಳಿತು ಹೊರಟಿರಲು ದುರ್ವಾಸರು ನೋಡಿ ವಿದ್ಯಾಧರಸ್ತ್ರೀಯರು ತನಗೆ ಕೊಟ್ಟ ಐಶ್ವರ್ಯಪ್ರದ ಹೂವಿನ ಹಾರವನ್ನು ಕೊಟ್ಟರು. ಇಂದ್ರನು ಅದನ್ನು ಆನೆಯ ಮೇಲೆ ಹಾಕಲು ಅದು ಕಾಲಲ್ಲಿ ಹಾಕಿ ತುಳಿಯಿತು. ದುರ್ವಾಸರಿಗೆ ಸಿಟ್ಟು ಬಂದು ತ್ರಿಲೋಕಾ-ಧಿಪತ್ಯವು ನಾಶವಾಗಲಿ ಅಂತಾ ಶಾಪಕೊಟ್ಟರು. ಈ ಸುದ್ದಿಯನ್ನು ಕೇಳಿ ದೈತ್ಯರು ಬಂದು ಯುದ್ಧ ಮಾಡಲು ದೇವತೆಗಳು ಸೋತರು. ಆಗ ಬ್ರಹ್ಮನ ಹತ್ತಿರ ಹೋಗಿ ಎಲ್ಲರೂ ಕೂಡಿ ಅಜಿತನಾಮಕಪರಮಾತ್ಮನ ಕಡೆಗೆ ಹೋದರು. ಅವನು ಸಮುದ್ರಮಥನಮಾಡೋಣ ಅಲ್ಲಿ ಅಮೃತ ಬರುತ್ತದೆ. ಅದನ್ನು ಕುಡಿದು ಬಲವುಳ್ಳವರಾಗಿ ಅಂತಾ ಹೇಳಿದನು. ಮತ್ತು ದೈತ್ಯರ ಜೊತೆ ರಾಜಿ ಆಗಿರಿ. ಇಬ್ಬರೂ ಕೂಡಿ ಕಡೆಯ ಬೇಕು ಅಂತಾ ಹೇಳಲು ಹಾಗೆಯೇ ಮಾಡಿ ಸಮುದ್ರಮಥನ ಮಾಡಲು ಶುರು ಮಾಡಿದರು.

ಪದ್ಯ

ಸಮುದ್ರಮಂಥನ ಕೇಳಿರಿ ಅಲೆ ವಿಚಿತ್ರ ಚಿತ್ರ ವಿಚಿತ್ರದ ಪುಣ್ಯದ ಕಥೆ ।
ಗರುಡನ್ನೇರಿಕೊಂಡು । ಗಿರಿಯ ಮುಂದಿಟ್ಟುಕೊಂಡು ಹರಿಯು ಬರುವ ಬಗಿ

ಸುರರು ಕಂಡು । ಅಮರರೆಲ್ಲಾರು ಕೂಡಿ ಹೊಡೆದರು ಭೇರಿಯಾ ಸುರರು ॥
ಹೂವಿನ ಮಳೆಗರೆದ ರಾಗ ॥ ಪ ॥

ಉರಗ ಹಗ್ಗವ ಮಾಡಿ ಗಿರಿಯ ಕಡೆಗೋಲು ಮಾಡಿ । ಸುರರು ದೈತ್ಯರು ಕೂಡಿ ಕಡೆದರಾಗ । ನಮಗೆ ತಮಗೆಂದು ಕಲಹಮಾಡಲು ಮುರವೈರಿ ತಾ ಬಂದು ತಡೆದನಾಗ ॥ ೧ ॥

ಕಡಿವಾಗ ಮೇಲಾದ ತೇಜ ಹುಟ್ಟಿ ಕಾಮಧೇನು ಕಲ್ಪವೃಕ್ಷ ಹುಟ್ಟಿ । ಮತ್ತೆ ಊರ್ವಶಿ ರಂಭೇರು ಹುಟ್ಟಿದರು । ಮೇಲೆ ಗಜೇಂದ್ರ ತಾ ಜನಿಸಿದನು ॥ ೨ ॥

ಕ್ಷೀರಸಮುದ್ರಕಡೆಯೆ ಮಹಾವಿಷವು ಹುಟ್ಟಿ । ವಾಯು, ರುದ್ರರು ಭುಂಜಿಸಿದರು ಮೂರು ಲೋಕವನ್ನೆಲ್ಲ । ಉಳಿವಿದ್ದು ತಾವು ಕಂಡು ನೀಲಕಂಠನೆಂದು ಕರೆದರಾಗ ॥೩॥

ಮಥನಕಾಲದಲ್ಲಿ ಮಹಾಲಕ್ಷ್ಮೀ ಹುಟ್ಟಿದಳು ಕಮಲದ ಮಾಲೆ ಕೈಯಲ್ಲಿ ಪಿಡಿದು । ಯೋಚಿಸುತ್ತ ಭಕ್ತವತ್ಸಲಗೆ ಹಾಕಿ ಬದಿಯಲ್ಲಿ ಕುಳಿತಳು । ನಿತ್ಯ ನೀರಜ ಉತ್ತಮ ಸುಧೆಯನ್ನು ಮತ್ತೆ ಬಲರಾಮ ತಾ ಸೆಳೆದುಕೊಂಡ ಮತ್ತೆ ಬಲಿಯು ಸುಧೆಯ ಸೆಳೆಯೆ ಸುರರು ಎಲ್ಲಾರು ಕೂಡಿ ಹರಿಯೇ ನಮಗೆ ಗತಿ ಏನೆಂದು ಎನುತಲಿ ಈ ಪರಿ ಸ್ತೋತ್ರವ ಕೇಳಿ ಶ್ರೀಹರಿ ತಾ ಬಂದು ನಿಮಗೆ ಸುಧೆಯ ನಾನು ಕೊಡುವೆನೆಂದಾ । ಮಾಯಾ ಅವತಾರದಲಿ ನಾರೀ ರೂಪವ ಧರಿಸೆ ಆಗ ಮೋಹಿಸಿ । ಬಲಿ ಸುಧೆಯ ಕೊಟ್ಟು ॥ ೪ ॥

ದೇವಾದಿ ದೇವ ತಾನು ಸಾಲು ಬಡಿಸುತಿರಲು ರಾಹು ಕೇತುರು ಪಾನ ಮಾಡಿದರು । ಚಂದ್ರ ಸೂರ್ಯರು ಕೂಡಿಕೊಂಡು ತಾ ಹೇಳಿದರು । ಮುಕುಂದ ಚಕ್ರವ ಬಿಟ್ಟು ಶಿರವನು ಅಳಿದಾ । ಮಂದರೋದ್ಧಾರ ಮಾಯಾ ರೂಪದಲ್ಲೆ ಬಡಿಸೆ । ಹಿಂದಕೆಲ್ಲ ಸುರರು ಅರಿಯದಂತೆ ಇದ್ದರು ॥ ೫ ॥

ಯುದ್ಧದೊಳಗೆ ಸಿಲುಕಿ ಬಿದ್ದರು ಅಸುರರು ಯುದ್ಧ ಸಾಕೋ ಎಂದು ನಾರದ ಮುನಿ ಬರಲು । ಅಸುರರು ತಮ್ಮ ಇದ್ದ ಠಾವಿಗೆ ತಾವು ನಡೆದರಾಗ । ಮದನದೊಳ ಸಿಲುಕಿ ಬಿದ್ದರು । ಸುರರು ಮದನಮೂರುತಿಯೇ ಮದನ

ಮೂರುತಿ ಮುರಹರಿ ತಾ ಕುದರಿಯಾಗಿ। ಯಲೆ
ವಾದಿರಾಜರಿಗೆ ವಲಿದ ಹಯವದನ ॥ ೬ ॥

ಗದ್ಯ — ಅಮೃತವನ್ನು ದೇವತೆಗಳು ಕುಡಿದು ಯುದ್ಧಮಾಡಿ ಅಸುರರನ್ನು ಕೊಂದರು. ಬಲಿಯು ಸತ್ತು ಬಿದ್ದಿರಲು ಉಳಿದ ಅಸುರರು ಸತ್ತು ಬಿದ್ದವರನ್ನು ಎತ್ತಿಕೊಂಡು ಹೋದರು. ಆಗ ಬ್ರಹ್ಮದೇವರು ಯುದ್ಧ ಸಾಕೆಂದು ಹೇಳಿದರು. ಶುಕ್ರಾಚಾರ್ಯರಿಂದ ಮೃತಸಂಜೀವಿನಿ ಮಂತ್ರದಿಂದ ಎಲ್ಲರೂ ಬದುಕಿದರು. ಶುಕ್ರಾಚಾರ್ಯರು ಬಲಿಯಿಂದ ವಿಶ್ವಜಿತ್ ಯಾಗ ಮಾಡಿಸಿದರು. ಯಜ್ಞ ಕುಂಡದಿಂದ ಸುವರ್ಣರಥವು, ಸಿಂಹದ ಚಿತ್ರದ ಧ್ವಜವು ಧನುಸ್ಸು ಅಕ್ಷಯಬಾಣ, ಕವಚ ಬ್ರಹ್ಮದೇವರು ಕೊಟ್ಟರು. ಶುಕ್ರಾಚಾರ್ಯರು ಕೊಟ್ಟ ಶಂಖವನ್ನು ಊದುತ್ತಾ ಸ್ವರ್ಗಕ್ಕೆ ಬಂದನು. ದೇವತೆಗಳು ಹೆದರಿ ಬೃಹಸ್ಪತ್ಯಾಚಾರ್ಯರಿಗೆ ಹೇಳಲು ಬಲಿಯ ತೇಜಸ್ಸನ್ನು ನೋಡಿ ನೀವು ಸ್ವರ್ಗವನ್ನು ಬಿಟ್ಟು ಹೋಗಿರಿ ಎಂದು ಹೇಳಿದರು. ಮೂರು ಲೋಕವನ್ನು ಬಲಿಯು ಆಳುತ್ತಿರಲು ದೇವತೆಗಳ ತಾಯಿಯಾದ ಅದಿತಿಯು ತನ್ನ ಗಂಡನಾದ ಕಶ್ಯಪರನ್ನು ನನ್ನ ಮಕ್ಕಳು ಸ್ವರ್ಗವನ್ನು ಬಿಟ್ಟು ಹೋಗಿದ್ದಾರೆ. ಆದಕ್ಕೆ ನನಗೆ ಬಹಳೇ ದುಃಖವಾಗಿದೆ ಅನ್ನಲು ಕಶ್ಯಪರು ಭಾದ್ರಪದಮಾಸದಲ್ಲಿ ಪಯೋವ್ರತವನ್ನು ಮಾಡು ಅಂದರೆ ನಿನ್ನ ಹೊಟ್ಟೆಯಲ್ಲಿ ಸಾಕ್ಷಾತ್ ಪರಮಾತ್ಮನೇ ಅವತಾರ ಮಾಡುತ್ತಾನೆ. ಅವನಿಂದ ನಿನ್ನ ಮಕ್ಕಳಿಗೆ ಮತ್ತೆ ಸ್ವರ್ಗಸಿಗುತ್ತದೆ ಅಂತಾ ಹೇಳಲು ಅವಳು ಒಳ್ಳೆ ಭಕ್ತಿಯಿಂದ ವ್ರತವನ್ನು ಆಚರಿಸಿದಳು.

ಪದ್ಯ

ಅದಿತಾ ದೇವಿಯು ಪಯೋ ವ್ರತವ ಮಾಡಿದಳಾಕೆ। ಪತಿಯ ಆಜ್ಞೆಯ
ಕೇಳಿಕೊಂಡು। ಪೃಥಿವಿಯನೆಲ್ಲಾಕ್ರಮಿಸುವ ಸ್ವಾಮಿ ತಾ ಸುತನಾಗಿ ಅಲ್ಲೆ
ಜನಿಸಿದನು। ಜಾತಕರ್ಮವ ಮಾಡಿ ಮಧುವಿಟ್ಟು ಮುದದಿಂದ ಪುಣ್ಯಾ
ವಾಚನ ಮಾಡಿಕೊಂಡ। ಕೋಟಿ ಗೋದಾನವನು ಕೊಟ್ಟು ಕಶ್ಯಪ ತಾನು
ಶ್ರೀಕೃಷ್ಣಗರ್ಪಿತವೆಂದ। ದಶರಾತ್ರಿ ಕಳೆಯಲು ಅಸುರ ಸಂಹಾರಗ ಶಶಿ
ಮುಖಿಯರೆಲ್ಲ ನೆರೆದು। ಯಶವೊ ಚಿನ್ನದ ತೊಟ್ಟಿಲೊಳ್ ಇಟ್ಟು ತೂಗುತ
ಹೆಸರು ಇಟ್ಟರು ವಾಮನನಂತ। ಅನ್ನಪ್ರಾಶನ ಮಾಡಿ ಚೌಲಕರ್ಮ ಮಾಡಿ

ತನ್ನ ಬಂಧುಗಳೆಲ್ಲಾ ಕರೆಸಿ ಹನ್ನೆರಡು ವರ್ಷ ತಪವಿದ್ದು ಪಡೆದಾ।
ಮೋಹನ್ನಗ ಮುಂಜಿ ಕಟ್ಟಿದರು। ಉಪನಯನವನು ವಾಮನಗೆ ಕಶ್ಯಪ
ಮಾಡೆ। ಸತಿ ಸರಸ್ವತಿ ಭಾರತಿಯರು ಅತಿಭಕ್ತಿಯಿಂದ ಉಂಗುರವ
ಭಿಕ್ಷವನಿಟ್ಟರು। ಮುತ್ತಿನಾರತಿಯನೆತ್ತಿದ್ದರುಷದಲಿ। ದಂಡಕಮಂಡಲ
ಯಜ್ಞೋಪವೀತವು। ಮುಂಜೆ ಕೃಷ್ಣಾಜಿನ ಧರಿಸಿ। ಅಂದಿಗೆ ಕಿರುಗೆಜ್ಜೆ
ಸರಪಳಿಯು ಘಿಲ್ಲು ಘಿಲ್ಲುನುತಲಿ ಬಂದ ವಾಮನ ಬಲಿರಾಯನ
ಸಭೆಯಲ್ಲಿ। ಕೋಟಿಸೂರ್ಯಚಂದ್ರಕಾಂತೆ ಶೋಭಿಸುವಂತಾ ನೋಟದಿ
ಮುದ್ದಿನ ಮುಖವು। ನೋಟದಿ ಕರುಣಾರಸ ಸೂಸಿ ಹೊಳೆವಂಥಾ
ಪ್ರಖ್ಯಾತ ಬಂದಾ ರಾಜಸಭೆಗೆ। ತಾಳಮದಲ್ಲಿ ಭೇರಿ, ಡುಮರೆಂಬೊ
ನಾಟ್ಯವಾಡಿದರು ಊರ್ವಸಿ ರಂಭೆ॥ ಚತುರ್ಮುಖಬ್ರಹ್ಮಸ್ತೋತ್ರವ
ಮಾಡಿ ಬರುತಿರೆ। ಪರಮಪುರುಷನು ಈತನೆಂದು। ಧರೆಯೊಳಗುತ್ತಮ
ಸುಂದರಪುರುಷ ಬೆರಗಾಗಿ ನಿಂತು ನೋಡಿದರು। ಮುತ್ತಿನ ಮಣಿಯ
ತಂದಿಟ್ಟನು ಬಲಿರಾಯ ಇತ್ತ ಬನ್ನಿರಿ ಕುಳ್ಳಿರೆಂದಾ। ಎತ್ತ ಕಡಿಲಿಂದಾ
ಬಂದಿರಿ ಏನು ಕಾರಣ ಎತ್ತಿ ಹಸ್ತವ ಮುಗಿದಾ। ಬಹಳ ದೂರದಿಂದ
ಬಂದೆನು ಬಲಿರಾಯ ನಿನ್ನ ಮೂರುತಿ ಕೀರುತಿ ಕೇಳಿ। ಮೂರುಪಾದದ
ಭೂಮಿ ದಾನವ ಕೊಡು ಎಂದು ಬೇಡಿಕೊಂಡನು ಬ್ರಹ್ಮಚಾರಿ। ಏನು
ಬೇಡಿದೆಯೊ ಬಡ ಬ್ರಾಹ್ಮಣ ಕನಕವ ಬೇಡು ನಾ ದಾನ ಕೊಡುವೆ। ಏನು
ಬೇಡಾ ಯನಗೆ ಮೂರುಪಾದ ಭೂಮಿ ಸಾಕೆನುತ ಇದ್ದ। ಯಾಚಕ
ಇವನಲ್ಲ ಯದುಕುಲತಿಲಕನು ಮಾತಿಲಿ ಮನವ ಕೊಂಬುವಾನು।
ಸೂಚನೆ ಮಾಡಿದರು ಶುಕ್ರಾಚಾರ್ಯರು ಬಲು ಜೋಕೆಂದು
ಹೇಳಿದಾರು। ಎಷ್ಟು ಹೇಳಿದರು ಇವ ಬಿಟ್ಟು ಹೋಗುವನಲ್ಲ ಸಿಟ್ಟಲೆ
ಶಾಪಿಸುವಾ। ಕೊಟ್ಟೆನು ಯದುಕುಲ ತಿಲಕಗೆ ದಾನವ ಕೊಟ್ಟ ಮಾತಿಗೆ
ತಪ್ಪದ್ಹಂಗೆ। ಮುತ್ತಿನ ಗಿಂಡಿಲಿ ಉದಕವ ತಾರೆಂದು ತನ್ನ ವಲ್ಲಭೆಗೆ
ಹೇಳಿದಾನು। ಅಂದ ಮಾತನು ಕೇಳಿ ತಂದಳು ಉದಕವಾ ವಿಂಧ್ಯಾವಳಿ
ಸಭೆಯಲ್ಲಿ। ಪನ್ನಂಗ ಶಯನನ ಪಾದಪದ್ಮವ ತೊಳೆದು ಧನ್ಯರಾದೆವೆನಲು।
ಉತ್ತುಮ ಪುರುಷ ಪಾದ ಪದ್ಮ ತೊಳೆಯಲು ಸುರನದಿ ಸುತ್ತಿ ಹರದೀತು
ನಾಲ್ಕು ಬ್ರಹ್ಮಾಂಡ। ಇನ್ನೊಂದು ಪಾದವ ಇಡಲಿಕ್ಕೆ ಸ್ಥಳವಿಲ್ಲಾ ಇನ್ನೆಲ್ಲಿ

ಹೇಳೆಂದ । ನೆತ್ತಿಯ ಮೇಲಿಟ್ಟನಿಜವುಳ್ಳ ಪಾದವ ವತ್ತಿ ಪಾತಾಳದಲ್ಲಿ ।
ಚೆನ್ನಿಗ ಹರನ ಪಾದವ ಕಂಡು ಅನ್ಯಾಯವೆಂಬರು ಜನರು । ನಾಭಿ
ಕಮಲದಿಂದ ಬ್ರಹ್ಮದೇವರ ಪಡೆದಾ ಪಾದದಿಂದ ಭಾಗಿರಥಿ ಪಡೆದ ।
ಕೋರೆದಾಡಿಲಿಂದಾ ತುಂಗ ಭದ್ರೆಯ ಪಡೆದಾ ನಾರಾಯಣಗೆದುರಿಲ್ಲಾ ।
ತಾ ಕ್ರಮಿಸಿದ ಮೂರು ಸುತಳ ಲೋಕವನು ತ್ರಿವಿಕ್ರಮರೂಪಾಗಿ ನಿಂತಾ ।
ಅಷ್ಟಐಶ್ವರ್ಯ ಸೌಭಾಗ್ಯ ಸಂಪತ್ತು ಎಂಬೊ ಪಟ್ಟಣವ ನಿರ್ಮಿಸಿದಾ ।
ಪಟ್ಟಶಾಸನ ಘಟನ ಮಾಡಿದ ಬಲಿರಾಯಗ ಕೊಟ್ಟಾನು ಸುತಳ
ಲೋಕವನು । ಬಲಿಯ ಬಾಗಿಲ ಕಾಯ್ದ ಭಕ್ತವತ್ಸಲ ದೊರೆಯನುದ್ಧರಿಸಿದ
ರಂಗವಿಠಲನ ಅನುದಿನ ನೆನ ಕಂಡ್ಯಾ ಮನವೆ ॥

ಗದ್ಯ — ವಾಮನನು ಹುಟ್ಟಿ ಬಂದು ಬಲಿಯ ಯಾಗಶಾಲೆಗೆ ಹೋಗಿ ಅವನ ನೂರನೆಯ ಯಜ್ಞವನ್ನು ನಿಲ್ಲಿಸಿದನು. ಅವನು ತಲೆಯನ್ನು ಮೂರನೆಯ ಪಾದವಿಡಲಿಕ್ಕೆ ಕೊಡಲಾಗಿ ಅವನ ಭಕ್ತಿಗೆ ಮೆಚ್ಚಿ ಸುತಳಲೋಕವನ್ನು ಕೊಟ್ಟು ಅವನ ಬಾಗಿಲನ್ನು ಕಾಯುತ್ತ ಮುಂದಿನ ಯುಗದಲ್ಲಿ ಇಂದ್ರಪದವಿ ಕೊಡುವೆ ಎಂದು ಹೇಳಿದನು. ಇನ್ನು ಮತ್ಸ್ಯಾವತಾರದ ಮಹಿಮೆ. ಭಗವಂತನ ಭಕ್ತನಾದ ಸತ್ಯವ್ರತರಾಜನಿದ್ದನು. ಅವನು ನದಿಯಲ್ಲಿ ಸ್ನಾನಮಾಡಿ ತರ್ಪಣವನ್ನು ಕೊಡುವಾಗ ಒಂದು ಚಿಕ್ಕಮೀನು ಕೈಯಲ್ಲಿ ಬಂದಿತು. ಅದನ್ನು ನೀರಲ್ಲಿ ಬಿಡಹೋಗಲು 'ರಾಜಾ ಇಲ್ಲಿ ದೊಡ್ಡಮೀನುಗಳು ನನ್ನನ್ನು ತಿಂದು ಹಾಕುತ್ತವೆ' ಅಂತಾ ಹೇಳಿತು. ಅವನು ತನ್ನ ಪಾತ್ರೆಯಲ್ಲಿ ಹಾಕಲು ಪಾತ್ರೆ ತುಂಬವಾಯಿತು. ಮನೆಯಲ್ಲಿ ದೊಡ್ಡ ಪಾತ್ರೆಗೆ ಹಾಕಲು ಅದೂ ತುಂಬಿತು. ಬಾವಿಯಲ್ಲಿ ಹಾಕಲು ಅದೂ ತುಂಬಿತು. ನದಿಗೆ ಹಾಕಲು ಹೋಗುವಾಗ 'ನೀನು ಯಾರು ? ಸಾಕ್ಷಾತ್ ಭಗವಂತನೇ ಇರಬೇಕು' ಎನ್ನಲು; 'ಹೌದು ಇಂದಿನ ಏಳನೆಯ ದಿನ ಪ್ರಳಯವಾಗುತ್ತದೆ. ಆಗ ನೀನು ಸಪ್ತಋಷಿಗಳನ್ನು ಕೂಡಿಕೊಂಡು ನಾವೆಯಲ್ಲಿರು. ಆಗ ನಾನು ದೊಡ್ಡ ಮೀನಾಗಿ ಬರುವೆನು. ನನ್ನ ಕೋಡಿಗೆ ನಿನ್ನ ನಾವೆಗೆ ಒಂದು ಹಾವನ್ನು ಕಟ್ಟು. ಆಗ ನಿನ್ನಗೆ ಉಪದೇಶಮಾಡುತ್ತೇನೆಂದು ಹೇಳಲು ರಾಜನು ಹಾಗೆ ಮಾಡಿದನು. ಅದೇ ಮತ್ಸ್ಯಪುರಾಣವಾಯಿತು. ಅದರ ಪದ್ಯ —

ಕೃಷ್ಣಾ ಕೃಷ್ಣಾ ಎಂದರೊಮ್ಮೆ ನೆನೆದರೆ ಮನಕೆ ದುಃಖ ಉಂಟೇನೋ ಮನುಜ ।

ನಾನೇ ನಾನೆನ್ನಬೇಡ ಸಾವಿಗೆ ಅಂಜಬೇಡ।
ಸತ್ಸಂಗಬಿಡಲು ಬೇಡ ಹರಿಗುರುಕಥನ।
ಎಂದಿಗೂ ಮರೆಯಬೇಡ। ತಾನೇ ಮೀನಾಗಿ ಬಂದು।
ಹೋಗಿ ದೈತ್ಯರ ಕೊಂದು। ಪ್ರಲಯ ಜಲಧಿಯೊಳ್।
ಕೋಡಿಗೆ ಹಾವು ಕಟ್ಟಿ ವೇದಾ ಉದ್ಧಾರ ಮಾಡಿ ತಾನೇ।
ತನ್ನ ವಿಶ್ವರೂಪ ಮುನಿ ಮುನಿಗಳಿಗೆ ತೋರಿಸಿ।
ಕ್ರೀಡೆಯಿಂದ ಅಲ್ಲಿದ್ದಂಥ ಮತ್ಸ್ಯ ಮೂರುತಿ ಸಕಲ।
ದುರಿತವ ನಾಶ ಮಾಡೋ ಹಯವದನಾ॥

ಗದ್ಯ — ಮತ್ಸ್ಯರೂಪದಿಂದ ವೇದಗಳನ್ನು ಒಯ್ದ ಹಯಗ್ರೀವಾಸುರನನ್ನು ಕೊಂದು ವೇದಗಳನ್ನು ತಂದು ಕೊಟ್ಟನು. ಹೀಗೆ ಪರಮಾತ್ಮನ ಲೀಲೆ ತಿಳಿಯುವುದಿಲ್ಲ. ಅಷ್ಟಮಸ್ಕಂಧ ಮುಗಿಯಿತು.

ನವಮಸ್ಕಂಧ

ಈ ಸ್ಕಂಧದಲ್ಲಿ ಸೂರ್ಯವಂಶ, ಚಂದ್ರವಂಶದ ಕಥೆ

ಚಂದ್ರವಂಶದ ಕಥೆ ಹೇಳುತ್ತೇವೆ. ಕೇಳು. ಪರಮಾತ್ಮನ ಮಗ ಬ್ರಹ್ಮ. ಇವನ ಮಗ ಮರೀಚಿ. ಇವರ ಮಗ ಕಶ್ಯಪ. ಇವರಿಗೆ ವಿವಸ್ವಾನ್ ಎಂಬ ಸೂರ್ಯ ಹುಟ್ಟಿದನು. ಮನುವಿಗೆ ಹೆಂಡತಿ ಶ್ರದ್ಧಾ. ಒಮ್ಮೆ ಹೋತೃ ಎಂಬ ಋತ್ವಿಕ್‌ನ ಬಳಿ ಬಂದು ನೀವು ಆಹುತಿ ಹಾಕುವಾಗ ನನಗೆ ಹೆಣ್ಣುಮಗು ಆಗಲಿ ಎಂತಾ ಹೇಳಿ ಎನ್ನಲು, ಇಲಾ ಎಂಬ ಮಗಳು ಹುಟ್ಟಿದಳು. ಮನುವು ಹೀಗೇಕೆ ಮಾಡಿದಿರಿ ಎನ್ನಲು ನಿಮ್ಮ ಹೆಂಡತಿಯೇ ಹೇಳಿದಳು ಹೆಣ್ಣಾಗಲಿ ಎಂದು. ಈಗ ಏನು ಮಾಡುವುದು ಅನ್ನಲು ವಸಿಷ್ಠರು ಭಗವಂತನನ್ನು ಪ್ರಾರ್ಥಿಸಿ ಗಂಡುಮಗುವನ್ನಾಗಿ ಮಾಡಿದರು. ಅವನು ಒಮ್ಮೆ ಬೇಟೆಯಾಡುತ್ತಾ ಇಲಾವೃತಖಂಡದ ಸುಕುಮಾರವೆಂಬ ವನಕ್ಕೆ ಹೋದನು. ಅಲ್ಲಿಗೆ ಹೋದ ಕೂಡಲೇ ಎಲ್ಲರೂ ಹೆಣ್ಣಾದರು. ಗಾಬರಿಯಾದರು. ಯಾಕೆಂದರೆ ರುದ್ರದೇವರು ಇಲ್ಲಿ ಯಾರು ಬಂದರೂ ಹೆಣ್ಣಾಗಲಿ ಎಂತಾ ಶಾಪ ಕೊಟ್ಟಿದ್ದರು. ಹೀಗೆ ಸುದ್ಯುಮ್ನನು ಸ್ತ್ರೀಯಾಗಿ ಅಲೆದಾಡುತ್ತಿರುವಾಗ ಬುಧನು ಮೋಹಿಸಿ ಅವಳನ್ನು ಕೂಡಿದನು. ಅವನಿಂದ ಪುರೂರವ ಎಂಬ ಮಗನು ಹುಟ್ಟಿದನು. ಮುಂದೆ ವಸಿಷ್ಠರು ರುದ್ರದೇವರನ್ನು

ಕುರಿತು ಮತ್ತೆ ತಪಸ್ಸು ಮಾಡಲು ಒಂದು ತಿಂಗಳು ಹೆಣ್ಣು, ಒಂದು ತಿಂಗಳು ಗಂಡು ಆಗಲಿ ಅಂತಾ ಹೇಳಿದರು. ಮನುವಿನ ವಂಶದಲ್ಲಿ ತೃಣಬಿಂದುವಿನಲ್ಲಿ ಇಲಬಿಲಾ ಹೆಣ್ಣುಮಗಳು. ಆವಳನ್ನು ವಿಶ್ರವ ಋಷಿಗಳಿಗೆ ಕೊಟ್ಟನು. ಅಲ್ಲಿ ಕುಬೇರ. ಮನುವಿಗೆ ಶರ್ಯಾತಿ ಹುಟ್ಟಿದನು. ಇವನಿಗೆ ಸುಕನ್ಯಾ ಎಂಬ ಮಗಳು. ಚ್ಯವನಋಷಿ ಆಶ್ರಮಕ್ಕೆ ಹೋದಾಗ ಹುತ್ತದಲ್ಲಿ ತಪಗೈಯ್ಯುತ್ತಿದ್ದ ಋಷಿಗಳ ಕಣ್ಣಿಗೆ ಕಡ್ಡಿಯನ್ನು ಚುಚ್ಚಲು ಸಿಟ್ಟಿನಿಂದ ನಿನ್ನ ಮಗಳನ್ನು ನನಗೆ ಕೊಡು ಅಂತಾ ಹೇಳಿದರು. ಉಪಾಯವಿಲ್ಲದೇ ಮದುವೆ ಮಾಡಿಕೊಟ್ಟನು. ಅವಳು ಋಷಿಯ ಸೇವೆಯನ್ನು ಅತ್ಯಂತ ಭಕ್ತಿಯಿಂದ ಮಾಡಲು ಸಂತೋಷ ಪಟ್ಟರು. ಅಷ್ಟರಲ್ಲಿ ಅಶ್ವಿನೀದೇವತೆಗಳು ಬಂದು ಅವರು ಋಷಿಗೆ ಯೌವನ ಕೊಟ್ಟು ತಾವು ಹವಿಸ್ಸನ್ನು ಪಡೆದರು. ಶರ್ಯಾತಿ ಮಗ ರೈವತ. ಅವನ ಮಗಳು ರೇವತಿ. ಇವಳನ್ನು ಬಲರಾಮನಿಗೆ ಕೊಟ್ಟು ಮದುವೆ ಮಾಡಿದ. ಮನುವಿನ ಕೊನೆಯ ಮಗ ನಾಭಾಗ. ಇವನ ಮಗ ಅಂಬರೀಷ. ಇವನು ಏಕಾದಶಿಯನ್ನು ತಪ್ಪದೆ ಮಾಡಿ ಬ್ರಾಹ್ಮಣರ ಭೋಜನಮಾಡಿಸುತ್ತಿದ್ದ. ಒಮ್ಮೆ ದುರ್ವಾಸರು ಬಂದು ಪಾರಣೆಗೆ ತಡವಾಗಿ ಬಂದರು. ಇವನು ಜಲಪಾರಣೆ ಮಾಡಿದ್ದರಿಂದ ಶಾಪಕೊಡಲು ಇವನ ಬಳಿಯಿದ್ದ ಚಕ್ರದಿಂದ ಸೋತು ಮೂರುಲೋಕದಲ್ಲಿಯೂ ಸೋತು ಬಳಿಗೆ ಅಂಬರೀಷನ ಬಳಿಗೆ ಬಂದು ಪಶ್ಚಾತ್ತಾಪ ಪಟ್ಟು ಪರಮಾತ್ಮನ ಭಕ್ತರ ಮಹಿಮೆ ಬಹಳವೆಂದು ಸಂತೋಷದಿಂದ ಪಾರಣೆ ಮುಗಿಸಿ ಹೋದರು. ವಿಕ್ಷರನು ಎತ್ತಿನ ರೂಪದ ಇಂದ್ರನ ಮೇಲೆ ಕುಳಿತು ದೈತ್ಯರನ್ನು ಜಯಿಸಿ ಆ ಪಟ್ಟಣವನ್ನು ದೇವತೆಗಳಿಗೆ ಕೊಟ್ಟನು. ಇದೇ ವಂಶದಲ್ಲಿ ಯುವನಾಶ್ವನು. ಇವನಿಗೆ ಮಕ್ಕಳಾಗಲಿಲ್ಲವೆಂದು ಯಜ್ಞಮಾಡಿಸಿದನು. ಅಲ್ಲಿ ಕಲಶದಲ್ಲಿ ನೀರನ್ನು ಅಭಿಮಂತ್ರಿಸಿ ಅವನ ಹೆಂಡತಿಗೆ ಕೊಡಬೇಕೆಂದು ಇಟ್ಟಿದ್ದರು. ಆ ನೀರನ್ನು ಯುವನಾಶ್ವನು ಕುಡಿದದ್ದರಿಂದ ಇವನೇ ಗಂಡುಮಗುವನ್ನು ಹೆತ್ತನು. ಅದಕ್ಕೆ ಇಂದ್ರನು ತನ್ನ ಕೈಬೆರಳನ್ನು ಚೀಪಿಸಿದ. ಅವನೇ ಮಾಂಧಾತ. ಇವನಿಗೆ ಮೂರು ಗಂಡು, ಐವತ್ತು ಹೆಣ್ಣುಮಕ್ಕಳು. ಒಮ್ಮೆ ವೃದ್ಧರಾದ ಸೌಭರಿ ಋಷಿಯು ಮೀನಿನ ಸಂಸಾರ ನೋಡಿ, ತಾನೂ ಮದುವೆಯಾಗಬೇಕೆಂದು, ಮಾಂಧಾತನ ಮನೆಗೆ ಹೋಗಿ ಕನ್ಯಾ ಕೇಳಲು, ನಿಮಗೆ ಯಾರು ಬೇಕೋ ಅವರನ್ನು ಕೇಳು ಎನ್ನಲು, ಸುಂದರ ರೂಪ ಧರಿಸಿ ೫೦ಮಂದಿಯನ್ನೂ ಮದುವೆಯಾದರು. ಪುರುಕುತ್ಸನಿಗೆ

ಸರ್ಪಗಳ ತಂಗಿ ನರ್ಮದೆಯನ್ನು ವಿವಾಹಮಾಡಲು ರಸಾತಲಕ್ಕೆ ಹೋಗಿ ಅಲ್ಲಿ ಇದ್ದ ದುಷ್ಟ ಗಂಧರ್ವರನ್ನು ಸಂಹರಿಸಲು ಅವನಿಗೆ ಸರ್ಪಭಯ ಇಲ್ಲದಂತೆ ಮಾಡಿದವು. ಇದೇ ವಂಶದಲ್ಲಿ ತ್ರಿಶಂಕು. ಇವನು ವಿಶ್ವಾಮಿತ್ರರ ತೇಜಸ್ಸಿನಿಂದ ಶರೀರಸಹಿತ ಸ್ವರ್ಗಕ್ಕೆ ಹೋಗಲು ದೇವತೆಗಳು ತಳಕ್ಕೆ ತಳ್ಳಲು, ವಿಶ್ವಾಮಿತ್ರರು ತೇಜಸ್ಸಿನಿಂದ ಮೇಲೆಯೇ ನಿಲ್ಲುವಂತೆ ಮಾಡಿದರು. ಇವನ ಮಗನೇ ಹರಿಶ್ಚಂದ್ರ. ಇವನು ಬಹಳ ಸತ್ಯವಂತನು. ಇವನ ಮಗ ರೋಹಿತ. ಇವನ ವಂಶದಲ್ಲಿ ಬಾಹುರಾಜ ಮಕ್ಕಳಾಗಲಿಲ್ಲವೆಂದು ಕಾಡಿಗೆ ಹೋಗಿ ಅಲ್ಲಿ ಮೃತವಾಗಲು ಅವನ ಹೆಂಡತಿ ಸಹಗಮನ ಹೋಗಬೇಕೆನ್ನಲು ಔರ್ವಋಷಿಯು ನೀನು ಗರ್ಭಿಣಿ ಇರುವಿ. ಮಗುವನ್ನು ಪಡೆದು ವಂಶ ಉದ್ಧರಿಸು ಅಂತಾ ಹೇಳಿದರು. ಇವಳ ಮಗುವಿಗೆ ಸವತಿಯರು ವಿಷಹಾಕಲು ಅವನೇ ಸಗರ ರಾಜ. ಇವನು ಅಶ್ವಮೇಧಯಾಗಮಾಡಲು ಕುದುರೆ ಕಟ್ಟಿದಾಗ ಇಂದ್ರನು ಅಪಹಾರಮಾಡಿ ಕಪಿಲ ಆಶ್ರಮದಲ್ಲಿ ಬಿಟ್ಟನು. ಕುದುರೆ ಹುಡುಕಲು ೬೦ ಸಾವಿರ ಮಕ್ಕಳು ಹೋಗಿ ಕಪಿಲಋಷಿಯು ಕಳ್ಳನೆನ್ನಲು ಅವರು ಕಣ್ಣು ತೆರೆಯಲು ಅಷ್ಟು ಮಕ್ಕಳು ಸುಟ್ಟು ಭಸ್ಮವಾದರು. ಅಂಶುಮಂತನು (ಮೊಮ್ಮಗ) ಹೋಗಿ ಋಷಿಗಳಿಗೆ ನಮಸ್ಕರಿಸಿದನು. ಅವರು ಸಂತುಷ್ಟರಾಗಿ ಕುದುರೆಯನ್ನು ಕೊಡುವುದಲ್ಲದೆ ನಿಮ್ಮ ಹಿರಿಯರಿಗೆ ಗಂಗಾಜಲದಿಂದ ಸದ್ಗತಿ ಅಂತಾ ಹೇಳಿದರು. ಇವನಿಗೆ ಗಂಗಾ ತರಲು ಆಗಲಿಲ್ಲ, ಇವನ ಮಗ ದಿಲೀಪನಿಗೂ ಆಗಲಿಲ್ಲ. ಮುಂದೆ ಭಗೀರಥನು ತಪಸ್ಸು ಮಾಡಿ ಗಂಗಾದೇವಿಯನ್ನು ಅವಳ ವೇಗ ತಡೆಯಲು ರುದ್ರದೇವರನ್ನು ಕಂಡು ಅವರ ಜಟೆಯಿಂದ ಗಂಗೆಯನ್ನು ಹರಿಸಿ ಎಲ್ಲರನ್ನು ಉದ್ಧಾರ ಮಾಡಿದ. ಇವರ ವಂಶದಲ್ಲಿ ಋತುಪರ್ಣರಾಜ ಮತ್ತು ಮಿತ್ರ ಸರಾಜ ರಾಕ್ಷಸನನ್ನು ಕೊಂದಿದ್ದರಿಂದ ಆ ರಾಕ್ಷಸನ ತಮ್ಮ ಸಿಟ್ಟಿನಿಂದ ವಸಿಷ್ಠರು ಬಂದಾಗ ನರಮಾಂಸದ ಅಡಿಗೆ ಮಾಡಿದನು. ವಸಿಷ್ಠರಿಗೆ ಸಿಟ್ಟು ಬಂದು ರಾಜನಿಗೆ ಶಾಪ ಕೊಟ್ಟರು. ಮಕ್ಕಳಾಗ-ಲಿಲ್ಲವೆಂದು ವಸಿಷ್ಠರಿಂದ ಗರ್ಭಧರಿಸಿ ಅಶ್ಮಕ ಹುಟ್ಟಿದನು. ಇವನ ಮಗನೆ ನಾರಿಕವಚ. ಇವರ ವಂಶದಲ್ಲಿ ಖಟ್ವಾಂಗ. ಇವನ ಮಗ ದೀರ್ಘಬಾಹು. ಇವನ ಮಗ ರಘುರಾಜ. ಇವನ ಮಗ ಅಜರಾಜ. ಇವನ ಮಗ ದಶರಥ. ಇವನಲ್ಲಿ ಭಗವಂತ ರಾಮನಾಗಿ ಅವತಾರಮಾಡಿದನು. ಭೂಭಾರಹರಣ ಮಾಡಿ ರಾವಣಾದಿರಾಕ್ಷಸರನ್ನು ಸಂಹರಿಸಿ ಸಜ್ಜನರನ್ನು ಉದ್ಧರಿಸಿದನು. ಇಕ್ಷ್ವಾಕುರಾಜ

ಅವನ ಮಗ ನಿಮಿ ಇವನು ಪುತ್ರಯಾಗ ಮಾಡಲು ವಸಿಷ್ಠರನ್ನು ಕರೆಯಲು 'ಇಂದ್ರಲೋಕಕ್ಕೆ ಹೋಗಿ ಬರುತ್ತೇನೆ' ಅಂತಾ ಹೇಳಲು, ಬೇರೆಯವರ ಸಂಗಡ ಯಾಗ ಮಾಡಿಸಲು ವಸಿಷ್ಠರು ಬಂದು ಸಿಟ್ಟಿನಿಂದ ಶಾಪಕೊಟ್ಟರು. (ವಸಿಷ್ಠರು ಇವರ ಗುರುಗಳು). ಇವನು ನೀವು ಅರ್ಧ ಮಾಡಿಸಿದ್ದರಿಂದ ನಿಮ್ಮ ದೇಹವು ಬೀಳಲಿ ಅಂತಾ ಶಾಪಕೊಡಲು, ವಸಿಷ್ಠರು ಮುಂದೆ ಮಿತ್ರ ವರುಣರಿಂದ ಊರ್ವಶಿಯಲ್ಲಿ ಹುಟ್ಟಿ ಆ ಯಾಗವನ್ನು ಮುಗಿಸಿದರು. ದೇವತೆಗಳು ನಿಮಿ ರಾಜನನ್ನು ಬದುಕಿಸಲು ನನಗೆ ದೇಹ ಬೇಕಾಗಿಲ್ಲ ಎನ್ನಲು ನೀನು ಭಗವಂತನ ಧ್ಯಾನ ಮಾಡುತ್ತಾ ಎಲ್ಲರ ಕಣ್ಣುಗಳಲ್ಲಿ ಇರು ಅಂತಾ ಹೇಳಿದರು. ನಿಮಿಯ ದೇಹವನ್ನು ಮಥನ ಮಾಡಲು ಜನಕ ಹುಟ್ಟಿದನು. ಇದೇ ವಂಶದಲ್ಲಿ ಕೇಶಿಧ್ವಜ, ಖಾಂಡಿತ್ಯ ಹುಟ್ಟಿದರು. ಹೀಗೆ ಚಂದ್ರವಂಶದಲ್ಲಿ ಅನೇಕ ವಿಷ್ಣುಭಕ್ತರು ರಾಜರಾದರು. ಬ್ರಹ್ಮದೇವರ ಮಕ್ಕಳು ಅತ್ರಿಋಷಿ ಅವರ ಮಗ ಚಂದ್ರ. ಇವನು ಗುರುಪತ್ನಿ ತಾರೆಯನ್ನು ಅಪಹರಿಸಿದ್ದನು. ಬ್ರಹ್ಮದೇವರು ಬಂದು ಚಂದ್ರನಿಂದ ತಾರೆಯನ್ನು ಗುರುಗಳಿಗೆ ಕೊಡಿಸಿದರು. ಅವಳು ಮಗುವನ್ನು ಪಡೆದಳು. ಅದು ಚಂದ್ರನದು. ಅವನೇ ಬುಧನು. ಸ್ತ್ರೀಯಾದ ಸುದ್ಯುಮ್ನನಲ್ಲಿ ಬುಧನಿಂದ ಪುರೂರವ ಹುಟ್ಟಿದನು. ಊರ್ವಶಿಯು ಮಿತ್ರಾವರುಣರ ಶಾಪದಿಂದ ಭೂಮಿಗೆ ಬಂದು ಪುರೂರವನ ಜೊತೆಗೆ ಇದ್ದಳು. ಇವರ ಮಗ ಕುಶಾಂಬು. ಇವನ ಮಗ ಗಾಧಿರಾಜ. ಇವನ ಮಗಳು ಸತ್ಯವತಿ. ಋಚೀಕರಿಗೆ ಕೊಟ್ಟನು. ಅವರು ಎರಡು ಚರು ಅಭಿಮಂತ್ರಿಸಿ ಹೆಂಡತಿಗೆ ಮತ್ತು ಅತ್ತೆಗೆ ಇಟ್ಟಿರಲು ಅವರು ಅದನ್ನು ಬದಲಾಯಿಸಿ ಕುಡಿದಿದ್ದರಿಂದ ಗಾಧಿರಾಜನಿಗೆ ವಿಶ್ವಾಮಿತ್ರ, ಜಮದಗ್ನಿಗೆ ಪರಶುರಾಮದೇವರು (ಸಾಕ್ಷಾತ್ ಪರಮಾತ್ಮ) ಹುಟ್ಟಿದರು. ಕಾರ್ತ್ಯವೀರ್ಯಾ-ರ್ಜುನನು ಇವರ ತಂದೆಯನ್ನು ಕೊಂದದ್ದರಿಂದ ಸಿಟ್ಟಿಗೆದ್ದು ಕ್ಷತ್ರಿಯರನ್ನು ಕೊಂದು ಎಲ್ಲ ಭೂಮಿಯನ್ನು ಬ್ರಾಹ್ಮಣರಿಗೆ ದಾನ ಮಾಡಿದರು. ಪುರೂರವನ ಮಗ ಕ್ಷತ್ರ ವೃದ್ಧನಲ್ಲಿ ಧನ್ವಂತರೀರೂಪಪರಮಾತ್ಮ ಅವತರಿಸಿದನು. ಇನ್ನೊಬ್ಬ ರಜು ರಾಜ. ಇವನು ದೈತ್ಯರನ್ನೆಲ್ಲ ಸಂಹರಿಸಿ ಇಂದ್ರನಿಗೆ ಸ್ವರ್ಗವನ್ನು ಕೊಟ್ಟನು. ಇಂದ್ರನಿಗೆ ವೃತ್ರಾಸುರನ ಸಂಹಾರಮಾಡಿದ್ದರಿಂದ ಬ್ರಹ್ಮಹತ್ಯೆ ಬಂದಿದ್ದರಿಂದ ಮಾನಸ ಸರೋವರದಲ್ಲಿ ಪದ್ಮನಾಳದಲ್ಲಿ ಕುಳಿತು ಧ್ಯಾನಮಾಡುತ್ತಿರಲು ನಹುಷನನ್ನು ಇಂದ್ರನನ್ನಾಗಿ ಮಾಡಿದರು. ಅಹಂಕಾರದಿಂದ ಶಚೀದೇವಿಯನ್ನು ಅಪೇಕ್ಷೆ

ಮಾಡಲು, ಅವಳ ಆಜ್ಞೆಯಂತೆ ಋಷಿಗಳಿಂದ ಹೊರಲ್ಪಟ್ಟ ವಾಹನದಲ್ಲಿ ಬರಲು ಋಷಿಗಳು ಪ್ರಶ್ನೆಗೆ ಉತ್ತರಬಾರದಿರಲು, ಅಗಸ್ತ್ಯರನ್ನು ಒದೆಯಲು ಬ್ರಹ್ಮದೇವರು ಸಹಿತ 'ನೀನು ಹೆಬ್ಬಾವು ಆಗು' ಅಂತಾ ಶಾಪಕೊಟ್ಟರು. ಭೀಮಸೇನನ ಸ್ಪರ್ಶದಿಂದ ಶಾಪ ಹೋಯಿತು. ನಹುಷನ ಮಗ ಯಯಾತಿ. ಅವನು ಬೇಟೆಗೆ ಹೋದಾಗ ನೀರಡಿಸಿ ಭಾವಿಗೆ ಹೋದಾಗ ಅಲ್ಲಿ ದೇವಯಾನಿ ಭಾವಿಯಲ್ಲಿ ಬತ್ತಲೆ ಬಿದ್ದಿದ್ದಳು. ಅವಳಿಗೆ ತನ್ನ ಅಂಗವಸ್ತ್ರಕೊಟ್ಟು ಕೈಹಿಡಿದು ಮೇಲೆ ಕರೆತಂದನು. ನನ್ನ ಕೈಹಿಡಿದ ಕಾರಣ ನನ್ನ ಮದುವೆಯಾಗು ಅಂದಳು. ನನಗೆ ಕಚನ ಶಾಪವಿದೆ. ಬ್ರಾಹ್ಮಣರ ಜೊತೆ ಮದುವೆಯಿಲ್ಲಅಂತಾ ಮುಂದೆ ಅಳುತ್ತಾ ಈ ರಾಜ್ಯವನ್ನು ಬಿಟ್ಟು ಹೋಗುವುದಾಗಿ ತನ್ನ ತಂದೆಗೆ ಹೇಳಿದಳು. ಆಗ ರಾಜನು ಇವರ ವಂಶದಲ್ಲಿ ದುಷ್ಯಂತ. ಇವನ ಮಗ ಭರತ. ಇವರವಂಶದಲ್ಲಿ ರಂತಿದೇವ. ಅದೇ ವಂಶದಲ್ಲಿ ಶಂತನು ಗಂಗಾದೇವಿಯಿಂದ ಭೀಷ್ಮಾಚಾರ್ಯರು. ಸತ್ಯವತಿಯಿಂದ ಚಿತ್ರಾಂಗದ, ವಿಚಿತ್ರವೀರ್ಯ ಹುಟ್ಟಿದರು. ಅಂಬಾ, ಅಂಬಾಲಿಕೆಯರನ್ನು ಮದುವೆಯಾದರು. ಮಕ್ಕಳಾಗಲಿಲ್ಲ. ಸತ್ಯವತಿಯಿಂದ ವೇದವ್ಯಾಸರ ಅವತಾರವಾಯಿತು. ವೇದವ್ಯಾಸರ ದೃಷ್ಟಿಯಿಂದ ಧೃತರಾಷ್ಟ್ರ, ಪಾಂಡುರಾಜ ಹುಟ್ಟಿದರು. ಕುಂತಿಯಿಂದ ಪಾಂಡವರು, ಗಾಂಧಾರಿಯಿಂದ ಕೌರವರು ಹುಟ್ಟಿದರು. ಅರ್ಜುನನಿಗೆ ಸುಭದ್ರೆಯಲ್ಲಿ ಅಭಿಮನ್ಯು. ಅವನ ಮಗನೇ ನೀನು ಅಂತಾ ಹೇಳಿದರು. ಯಯಾತಿ ದೇವಯಾನಿಯಲ್ಲಿ ಹುಟ್ಟಿದ ಯದು. ಇವನ ವಂಶದಲ್ಲಿ ಸತ್ರಾಜಿತ, ಸಾತ್ಯಕಿ, ಶ್ವಫಲ್ಕ, ಅಕ್ರೂರ, ಕೃತವರ್ಮ ಅನೇಕರು ಬಂದರು. ಉಗ್ರಸೇನ, ದೇವಕ ಇಬ್ಬರು. ಉಗ್ರಸೇನನ ಮಗ ಕಂಸ. ದೇವಕನಿಗೆ ದೇವಕಿ ಹುಟ್ಟಿದರು. ಶೂರರಾಜನಿಗೆ ವಸುದೇವ, ಕುಂತಿ ಹುಟ್ಟಿದರು. ಆಮೇಲೆ ದೇವಕಿಯ ಲನೆಯ ಗರ್ಭದಲ್ಲಿ ಶ್ರೀಕೃಷ್ಣಪರಮಾತ್ಮನು, ಸುಭದ್ರೆಯು ಹುಟ್ಟಿದರು. ಇಲ್ಲಿಗೆ ನವಮಸ್ಕಂಧ ಮುಗಿಯಿತು.

ದಶಮಸ್ಕಂಧ

ಈ ಸ್ಕಂಧದಲ್ಲಿ ಶ್ರೀಕೃಷ್ಣನ ಚರಿತ್ರೆ, ರಾಸಕ್ರೀಡೆ

ಪರೀಕ್ಷಿತನು ಕೃಷ್ಣನ ಕಥೆಯನ್ನು ವಿಸ್ತಾರವಾಗಿ ಹೇಳಿರಿ ಅಂದನು. ಪರೀಕ್ಷಿತನ ಮಾತಿಗೆ ಸಂತೋಷಪಟ್ಟು ಹೇಳಲು ಶುರು ಮಾಡಿದರು. ಭೂದೇವಿಯು ದುಷ್ಟರ

ತಾಪ ತಡೆದುಕೊಳ್ಳಲಾರದೆ ದೈತ್ಯರ ಭಾರ ತಡೆದುಕೊಳ್ಳಲಾಗದೆ ಗೋರೂಪದಿಂದ ಬ್ರಹ್ಮದೇವರ ಕಡೆ ಹೋದಳು. ಅವಳನ್ನು ಕರೆದುಕೊಂಡು ಪರಮಾತ್ಮನ ಹತ್ತಿರ ಹೋದರು. ಭೂಮಿ ಭಾರವಾಗಿದ್ದು ಗೊತ್ತು. ದೈತ್ಯರ ಸಂಹಾರಕ್ಕಾಗಿ ಅವತರಿಸುವೆನು. ನೀವೆಲ್ಲರೂ ಅವತರಿಸಿರಿ ಅಂತಾ ಹೇಳಿದನು. ಇತ್ತ ಶೂರಸೇನನ ಮಗ ವಸುದೇವ ದೇವಕಿಯನ್ನು ಮದುವೆಯಾಗಲು ಮೆರವಣಿಗೆ ಕಾಲದಲ್ಲಿ ಆಕಾಶವಾಣಿಯಾಯಿತು. ಕಂಸನೇ ಇವಳ ಎಂಟನೇ ಗರ್ಭದಿಂದ ನಿನಗೆ ಮರಣ ಅಂತಾ ಹೇಳಿತು. ಸಿಟ್ಟಿಗೆದ್ದ ಕಂಸನು ಅವಳನ್ನು ಸಂಹಾರ ಮಾಡಹೋಗಲು ವಸುದೇವನು ಅವಳನ್ನು ಕೊಲ್ಲಬೇಡ ಸ್ತ್ರೀಹತ್ಯ ಮಾಡಬೇಡ. ಅವಳ ಮಕ್ಕಳನ್ನು ನಿನಗೆ ಒಪ್ಪಿಸುತ್ತೇನೆ ಅಂತಾ ಹೇಳಿದನು. ಮುಂದೆ ಆರುಮಕ್ಕಳನ್ನು ಕಂಸನು ಸಂಹಾರ ಮಾಡಿದನು. ಏಳನೇ ಮಗುವನ್ನು ದುರ್ಗಾದೇವಿಯು ರೋಹಿಣಿಯ ಗರ್ಭದಲ್ಲಿ ಇಟ್ಟಳು. ಇವಳಿಗೆ ಗರ್ಭಸ್ರಾವ ಆಯಿತು ಅಂತಾ ಆಗಿಹೋಯಿತು. ಎಂಟನೆಯ ಗರ್ಭಧರಿಸಲು ಭಗವಂತನು ಶ್ರಾವಣಬಹುಳ ಅಷ್ಟಮಿ ಅವತರಿಸಿದನು.

ಪದ್ಯ

ಹರಿ ಅವತರಿಸಿದ ಹರುಷದಲಿ। ನಾರಿ ದೇವಕಿ ಸುತನೆನಿಸು-
ತಲಿ|ಬಂಧನ ಬಿಡಿಸಿ ಭಕ್ತರ ಪೊರೆ(ಎಂದು)
ಮಂದರೋದ್ಧರನು ಅವತರಿಸಿದನೂ ॥ ಪ ॥

ಅಣ್ಣ ಕಂಸ ಸಣ್ಣ ತಂಗಿ ಮಕ್ಕಳನೆಲ್ಲಾ। ಕಣ್ಣೆತ್ತಿ ನೋಡದಂತೆ ಕೊಲ್ಲುತ್ತಿದ್ದನು।
ಬಣ್ಣಿಸಿ ಬಂಟನೆ ಬಾಲನಾಗುತ। ಬಾಗಿಲಿಗೆ ಕಾವಲಿತ್ತು ಕಾಯುತ್ತಿದ್ದನು ॥೧॥

ಅಷ್ಟಮಿ ರೋಹಿಣಿ ನಕ್ಷತ್ರದಲಿ। ಅರ್ಧರಾತ್ರಿ ಕಾಳರಾತ್ರಿ ಕತ್ತಲೇಯಲಿ।
ಅದ್ಭುತಮಹಿಮನು ಅವತರಿಸಲಾಗ। ಆ ಗ್ರಾಮದಲ್ಲೆಲ್ಲಾ ನಿದ್ರೆ ಮಾಡುತಿದ್ದರು ॥

ತಂದೆ ವಸುದೇವ ತಾನು ಆಲಯ ಬಿಟ್ಟು। ಪೋಗಿ ನಂದಗೋಕುಲಾದಿ ಕೃಷ್ಣನಾ
ಬಿಟ್ಟು। ತಂದು ನಾರಿ ಶಿಶು ತನ್ನ ಶೆರೆಯಲ್ಲಿಟ್ಟು। ಪೊಂದಿ ಸುಖದಿಂದ ನಾರಿ
ಹೇಳಲಾಗಲೇ ॥೩॥

ಕೆಟ್ಟ ಕಂಸ ಸಿಟ್ಟಲಿಂದಾ। ತಾನೇ ಶಿಶುವಾ। ಮೆಟ್ಟಿ ಪಾದದಿಂದಾಕಾಶಕ್ಕಾರಲು।

ದುಷ್ಟಕಂಸ ನಿನ್ನ ವೈರಿ ಗೋಕುಲಾದಿ ಹಾ ಎಂದು ಘಟ್ಟಿಯಾಗಿ
ಅಟ್ಟಹಾಸದಿಂದ ಕೂಗಿದಳ್ ||೪||

ತಂದೆ ವಸುದೇವನಿಗೆ ಕಂದನಾಗುತ । ಇಂದುಮುಖಿ ಯಶೋದೆಗೆ ಬಾಲ-
ನಾಗುತ । ಇಂದು ಪುರಂದರವಿಟ್ಠಲರಾಯನು । ಸಿಂಧುಶಯನನು
ಹರಿ ತಾ ಎನ್ನುತಾ ||೫||

ಗದ್ಯ

ಸರ್ವಅಲಂಕಾರಭೂಷಿತನಾಗಿ ಪೀತಾಂಬರಧಾರಿಯಾಗಿ ಅವತರಿಸಿದನು. ಇಬ್ಬರೂ ನೋಡಿ ಆನಂದಭರಿತರಾಗಿ ನಮಸ್ಕರಿಸಿದರು. ಆಗ ಭಗವಂತನು ನೀವು ಸುತಪ, ಪ್ರಶ್ನಿ ಅಂತಾ ಇದ್ದು ನಾನೇ ಮಗನಾಗಬೇಕೆಂದು ತಪಸ್ಸು ಮಾಡಿದ್ದಿರಿ. ಆದರಂತೆ ಅವತರಿಸಿರುವೆ. ಈಗ ನಾನು ಸಣ್ಣಕೂಸು ಆಗುತ್ತೇನೆ. ನನ್ನನ್ನು ಕರೆದುಕೊಂಡು ಹೋಗಿ ಗೋಕುಲದಲ್ಲಿ ಯಶೋದೆಯಲ್ಲಿ ಮಲಗಿಸಿ ಅಲ್ಲಿ ಹುಟ್ಟಿದ ಹೆಣ್ಣುಮಗುವನ್ನು ಕರೆದುಕೊಂಡು ಬಾ ಅಂತಾ ಹೇಳಲು ಹಾಗೆಯೇ ಮಾಡಿದನು. ಅಳುವ ಧ್ವನಿಯನ್ನು ಕೇಳಿ ಕಂಸನು ಆ ಕೂಸನ್ನು ಎತ್ತಿ ಅಪ್ಪಳಿಸಹೋದಾಗ ಅದು ಮೇಲೆ ಹಾರಿ 'ನಿನ್ನನ್ನು ಕೊಲ್ಲುವವನು ಹುಟ್ಟಿದ್ದಾನೆ' ಅಂತಾ ಹೇಳಿ ಹೋದಳು. ಕಂಸನು ಎಲ್ಲರ ಕೂಸನ್ನು ಕೊಲ್ಲಲು ಪೂತನಿಯನ್ನು ಕಳಿಸಿದನು. ಅವಳು ಬಂದು ವಿಷದ ಮೊಲೆ ಕೊಡಲು ಅದನ್ನು ಕುಡಿದು ಅವಳನ್ನು ಕೊಂದ. ಅವಳಲ್ಲಿ ಊರ್ವಶಿಯು ಶಾಪದಿಂದ ಇದ್ದಳು. ಅವಳು ಹಾಲುಕುಡಿಸಿ ತನ್ನ ಸ್ಥಾನಕ್ಕೆ ಹೋದಳು. ಹೀಗೆ ಹುಟ್ಟಿದ ಏಳುದಿನದಲ್ಲಿ ಪೂತನಿಯನ್ನು ಕೊಂದ. ಹೀಗೆಯೇ ಅವನ ಅದ್ಭುತಮಹಿಮೆಯನ್ನು ಈ ಹಾಡಿನಲ್ಲಿ ನೋಡುವಾ.

ಪದ್ಯ

ಕೃಷ್ಣನೇಕ ಬಾರಾ । ಬಹುದುಷ್ಟರ ಸಂಹಾರ । ದೃಷ್ಟಿಯಿಂದ ನೋಡೆ ಕಷ್ಟ
ಪರಿಹಾರ ।।ವಸುದೇವದೇವಕಿಗೆ ಶಿಶುವಾಗಿ ಜನಿಸಿ । ಎಸಳೆ ಪೂತನಿಯ ।
ವಿಷವ ಸೆಳೆದುಂಡಾ ।।ವಿಷವನುಣುತಲಿ ಬಂದು ಪೂತನಿಯನ್ನೆ ಕೊಂದ ।
ಶಕಟಾಸುರನ ವದ್ದಾ ತೃಣಾವರ್ತನು ಬಿದ್ದಾ ।।ಪುಟ್ಟಕೃಷ್ಣನಾಗಿ ಬಹು
ಅಟ್ಟತನವ ಮಾಡಿ । ಕಡಗೋಲು ವೇಣುವ ಪಿಡಿದೋಡುತ್ತ ಬಂದ ।
ಚೆಲುವ ಹಯವದನ ಪ್ರತ್ಯಕ್ಷನಾದ ಸುವ್ವಿ ।।

ಗದ್ಯ

ಹೀಗೆ ಅವನ ಲೀಲೆಯನ್ನು ಎಷ್ಟು ವರ್ಣಿಸಿದರೂ ಕಡಿಮೆ. ಇವನಿಗೆ ಮೂರು ತಿಂಗಳು ಆಗುವಾಗಲೇ ಮೂವರನ್ನು ಕೊಂದನು. ಮುಂದೆ ಅಂಬೆಗಾಲಿಕ್ಕುತ್ತ ಮನೆಯಲ್ಲಿ ಹರಿದಾಡಹತ್ತಿದನು. ಇವನನ್ನು ಹಿಡಿಯುವದೆ ಅಸಾಧ್ಯವಾಯಿತು.

ಪದ್ಯ

ಅಂಬೆಗಾಲಿಕ್ಕುತಲಿ ಬಂದ ಗೋವಿಂದ। ಅಂಬುಜನಾಭನ್ನ ಕಾಂಬೋದೆ
ಚೆಂದ। ಅಂಬೆಗಾಲಿಕ್ಕುತಲಿ ಬಂದ ಗೋವಿಂದ॥

– ಪುರಂದರದಾಸರು

ಗದ್ಯ

ಹೀಗೆ ಸ್ವಲ್ಪದಿನದಲ್ಲಿ ನಡೆಯಲು ಶುರು ಮಾಡಿದನು. ನಡೆಯಲು ತೊಡಗಲು ಹಿಡಿಯುವುದು ಬಹುಕಠಿಣವಾಯಿತು. ಬೆಳಗು ಮುಂಜಾನೆ ಅವನನ್ನು ತೊಟ್ಟಿಲಲ್ಲಿ ಮಲಗಿಸಿ ಯಶೋದೆಯು ಮೊಸರು ಕಡೆಯಲು ಶುರುಮಾಡಿದಳು. (ಮುಂಚಿನ ಕಾಲದಲ್ಲಿ ಮನೆಯಲ್ಲಿ ಆಕಳು ಕಟ್ಟಿ ಹಾಲು, ಮೊಸರು, ಬೆಣ್ಣೆ, ತುಪ್ಪ ಮಾಡುತ್ತಿದ್ದರು) ಅವನು ಅಳಲು ಶುರು ಮಾಡಿದ.

ಪದ್ಯ

ಉದಯಕಾಲದೊಳ್ ಎದ್ದು ಗೋಪಿಯು ದಧಿಯ ಮಥಿಸುವನೆಂಬ
ಸಮಯದೀ। ಯದುವರೇಣ್ಯನು ಎದ್ದು ತೊಟ್ಟಿಲೊಳ್। ತೊದಲು
ನುಡಿಯಲಿ ತಾಯ ಕರೆದನು॥ ನುಡಿಯ ಲಾಲಿಸಿ ನಳಿನನೇತ್ರನ ತೊಡೆಯೊಳ್
ಏರಿಸಿ ತೆರೆಯ। ಮೊಲೆಗಳ। ಕೊಡೆವೆನೆಂದರೆ ಕಣ್ಣು ಮುಚ್ಚುವ ಒಡನೆ
ಮಲಗುವಾ ಮಲಗದೇಳುವಾ॥ ಹೊದ್ದು ಪವಡಿಸಿ ಎದ್ದು ಬೇಗನೆ ಕದ್ದು
ಕೆಲಸವ ತಿದ್ದುತಿದ್ದಳು। ಅಮ್ಮ ಬಾರೇ ಎನ್ನ ಅಗಲಬೇಡವೆ ಗುಮ್ಮ ಬರುತದ
ಗುಡುಗುಡು ಎನ್ನುತ॥ ಅಮ್ಮಿ ಕುಡಿವೆನು ಒಲ್ಲೆನೆಂದರೆ ತಿಂದೆನೆನುತದ
ತಾಳಲಾರೆನು। ವೇದಗೋಚರ ನೀನೇಳ ಬೇಡವೊ ನಿನ್ನ ಪಾದಕ್ಕೆರಗುವೆ
ಪವಡಿಸೆಂದಳು॥ ಶ್ರೀದವಿಠಲನ ಮಧುರ ಸೂಕ್ತಿಗೆ ಮೋದ ಪಡುತಲಿ
ಮಾನಿನೀ ಮಣಿ॥

ಗದ್ಯ

ಹೀಗೆ ಸಣ್ಣ ಹುಡುಗರು ಮಾಡುವಂತೆ ತನ್ನ ಲೀಲೆಯನ್ನು ತೋರಿಸುತ್ತಿದ್ದನು. ಒಮ್ಮೆ ಮಣ್ಣು ತಿಂದನೆಂದು ಎಲ್ಲ ಗೆಳೆಯರು ಬಂದು ಹೇಳಲು, ತಾಯಿಯು ಬಾಯಿ ತೆಗೆ ಎನ್ನಲು ಬಾಯಿ ತೆಗೆದಾಗ ಅವನ ಬಾಯಲ್ಲಿ ಬ್ರಹ್ಮಾಂಡವನ್ನು ನೋಡಿ ನಡುಗಿಹೋದಳು. ಇವನು ಸಾಕ್ಷಾತ್ ಪರಮಾತ್ಮನೇ ಎಂದು ತಿಳಿದುಕೊಳ್ಳಲು ಕೃಷ್ಣನು ಅದನ್ನೆಲ್ಲ ಅವಳಿಂದ ಮರೆಸಿಬಿಟ್ಟನು. ನಂದಗೋಪ, ಯಶೋದೆಯರು ಸಾಮಾನ್ಯರಲ್ಲ. ಅಷ್ಟವಸುಗಳಲ್ಲಿ ದ್ರೋಣನು. ಅವಳು ಧರೆ. ತಪಸ್ಸು ಮಾಡಿ ಪರಮಾತ್ಮನಲ್ಲಿ ಭಕ್ತಿ ಬರಬೇಕು. ಅವನನ್ನು ಮಗನನ್ನಾಗಿ ಮಾಡಿಕೊಂಡು ಆಡಿಸಬೇಕು ಅಂತಾ ಕೇಳಿಕೊಂಡಿದ್ದರು. ಅದರಂತೆ ಅವನು ಕೂಸಾಗಿ ಬಂದು ಭಕ್ತಿ ಕೊಡುತ್ತಿರುವನು. ಬೆಳಗ್ಗೆ ಮತ್ತೆ ಮೊಸರನ್ನು ಕಡೆವಾಗ ಕೃಷ್ಣನು ಬಂದು ಹಸಿವೆಯಾಗಿದೆ ಹಾಲನ್ನು ಕುಡಿಸು ಎನ್ನಲು ಕಡೆಯುವುದು ಬಿಟ್ಟು ಹಾಲು ಕುಡಿಸುತ್ತಿರಲು, ಒಳಗೆ ಹಾಲು ಕಾಯಿಸಲು ಇಟ್ಟಿದ್ದಳು. ಅದು ಉಕ್ಕು ಬರಲು ಹಾಲು ಕುಡಿಸುವುದನ್ನು ಬಿಟ್ಟು ಹಾಲು ಇಳಿಸಲು ಹೋದಳು. ಕೃಷ್ಣನಿಗೆ ಸಿಟ್ಟು ಬಂದು ಮಜ್ಜಿಗೆಯ ಗಡಿಗೆ ಒಡೆದು ಬೆಣ್ಣೆ ತೆಗೆದುಕೊಂಡು ಒರಳ ಮೇಲೆ ತಿನ್ನುತ್ತಾ ನಿಂತನು.

ಪದ್ಯ

ರಂಗ ಗೋಕುಲದೊಳಗಾಡಿದಾ । ಬಹು ಶೃಂಗಾರ ಚೇಷ್ಟೆಯ ಮಾಡಿದ ॥
ಮಂಗಳ ಮಹಿಮೆಯ ತೋರಿದ ಭಕ್ತಜಂಗುಳಿಗೆ ಮುಕ್ತಿ ನೀಡಿದ ॥ ಪ ॥

ಮತ್ತೊಂದು ದಿನ ಮೊಸರು ಕಡೆದಾಗ । ಹಸ್ತು ಬಂದನು ಗೋಪಿ ಬಳಿಗಾಗ
ಸ್ತನ ಪಾಲು ಬೇಡಿದನಾಗ । ದಧಿಮಥನವ ಪಿಡಿದನು ಬ್ಯಾಗ ॥೧॥

ಕಡೆವ ಕೆಲಸವನ್ನು ಬಿಟ್ಟಾಳು ತನ್ನ ತೊಡೆ ಏರಿಸಿ ಸ್ತನ ಕೊಟ್ಟಾಳು ।
ಗಡಿಗಿ ಒಳಗ ಹಾಲು ಉಕ್ಕ್ಯಾಲು । ಸ್ತನ ಬಿಡಿಸಿ ಮಂದಿರವನ್ನ ಪೊಕ್ಕ್ಯಾಳು ॥೨॥

ತೃಪ್ತನಾಗದ ಪ್ರಾಕೃತನಂತೆ । ನಿತ್ಯತೃಪ್ತನು ಕ್ರೋಧಿಸಿ ಮತ್ತೆ ಕುಪಿತನಾಗುತ
ಕಲ್ಲು ಪಿಡಿದಾನು ಬೆಣ್ಣೆಯ ಗಡಿಗೆಯ ವಡೆದಾನು ॥ ೩॥

ಹರುಷದಿ ಬೆಣ್ಣೆಯ ಗುಳಿಗೆ ಮಾಡಿ ಒರಳ ಮೇಲ್ ಮೆಲುತಿದ್ದ ಅಜನಯ್ಯ।
ಅರಸಿಗೋಪಮ್ಮನು ಹಾಲಿಗೆ ನೀರೆರೆದು ಬಂದು ನೋಡಿದಳು ಈ ಬಗೆ ॥೪॥

ಕೋಪದಿ ಕೋಲು ತಕ್ಕೊಂಡಾಳು ನೋಡಿ ಶ್ರೀಪ್ರಸನ್ನವೆಂಕಟ ಓಡಲು
ದಯಾಪರ ಮೆಲ್ಲ ಮೆಲ್ಲನೆ ಐ ತಂದಾನು ಗೋಪೆಮ್ಮ ಸಿಕ್ಕಿದಿ ಅಂದಾಳು ॥೫॥

ಗದ್ಯ

ಹೀಗೆಯೇ ಚೇಷ್ಟೆ ಮಾಡುತ್ತಾ ಇರಲು ಕೋಲು ನೋಡಿ ಭಯ ಪಡುವೆನೆಂದು ಕೋಲು ಒಗೆದು ಅವನನ್ನು ಎತ್ತಿ ಮುದ್ದಾಡಿದಳು. ಹೀಗೆಯೇ ಅವನ ತುಂಟಾಟ ತಡೆಯಲಾರದೆ ಒರಳಿಗೆ ಕಟ್ಟಿ ಹಾಕಿದಳು. ಒರಳನ್ನು ಎಳೆದುಕೊಂಡು ಹೋಗಿ ಅಲ್ಲಿ ಎರಡು ಮರಗಳಿದ್ದವು. ಅವುಗಳ ನಡುವೆ ಹೋಗಿ ಮರವನ್ನು ಕೆಡವಿದನು. ಆದರಲ್ಲಿ ಇಬ್ಬರು ಬಂದರು. ಅವರು ಯಾರೆಂದರೆ, ಕುಬೇರನ ಮಕ್ಕಳಾದ ನಲಕೂಬರ, ಮಣಿಗ್ರೀವ. ಅವರು ನಾರದರ ಶಾಪದಿಂದ ಮರವಾಗಿದ್ದರು. ಪರಮಾತ್ಮನ ಸ್ಪರ್ಶದಿಂದ ನಿಜರೂಪಹೊಂದಿ ಭಗವಂತನನ್ನು ಸ್ತೋತ್ರಮಾಡಿ ಹೋದರು. ಒಂದು ದಿನ ಯಶೋದೆಯು ಬ್ರಾಹ್ಮಣರನ್ನು ಊಟಕ್ಕೆ ಕರೆದಿದ್ದಳು. ಅಡಿಗೆಯವರು ಅಡಿಗೆ ಮಾಡಿದ್ದರು. ಬ್ರಾಹ್ಮಣರು ಬಂದರು. ಶ್ರೀಕೃಷ್ಣನು ಅವರನ್ನು ಮುಟ್ಟಲು, ಗೋಪೆಮ್ಮನು ಸಿಟ್ಟಿನಿಂದ ಮಗನನ್ನು ಹೊಡೆದು, ಬ್ರಾಹ್ಮಣರಿಗೆ ಸ್ನಾನಮಾಡಿಬರಲು ಹೇಳಿದಳು. ಸ್ನಾನಮಾಡಿ ಬಂದು ದೇವರ ನೈವೇದ್ಯ ಮಾಡಿ ಊಟಕ್ಕೆ ಕೂಡುವಾಗ ಕೃಷ್ಣಾರ್ಪಣವೆನ್ನಲು ಅವರ ಹಿಂದೆ ಹೋಗಿ ನಿಂತನು. ಬ್ರಾಹ್ಮಣರು ಸಿಟ್ಟು ಮಾಡಲು, ನಂದಗೋಪನು ಅವನನ್ನು ಎತ್ತಿಕೊಳ್ಳಲು ಅಳುತ್ತಾ ತಂದೆಯ ಮುಂದೆ ಹೇಳಿದನು.

ಪದ್ಯ

ನಂದಗೋಕುಲದಿ ಗೋಪಿಕಂದನೆಂದು ಮೋಹಿಸಿ । ಮುಕುಂದನ ಪಾಡಿದಳು
ಹರುಷದಿಂದಲಿ ॥ ವೃಂದಾವನವ ಸಾರಿಸಿ ಗೋವಿಂದನ್ನ ಕೆಳಗಿಳಿಸಿ । ಬಂಗಾರದ
ಗಿಂಡಿಲಿ ತಂದಳು ಗಂಗೆ ಉದಕವ ॥ ಪೀತಾಂಬರದ ಸೆರಗು ಹಿಡಿದಿದ್ದ ಲಕ್ಷ್ಮೀಪತಿ
ಗಂಗಾಯಮುನಾ ಸ್ನಾನ ಮಾಡಿಬನ್ನಿರಿ ಎಂದಳು । ಅಂದಮಾತನು ಕೇಳಿ
ತೀವ್ರದಿಂದ ಸ್ನಾನ ಮಾಡಿ ಬಂದು ಕುಳಿತರು ಬ್ರಾಹ್ಮರು ನಂದನ ಮನೆಯಲಿ ॥
ದಶಮಸ್ಕಂಧ ಭಾಗವತ ಪರೀಕ್ಷಿತರಾಯ ನೀನೆ ಕೇಳೋ ಶಂಖೋತ್ಸವದಿಂದ
ಹೇಳುತಿದ್ದೆನು ॥ ಮೌನಾದಿ ಪಾತ್ರಿಯೊಳಗೆ ನಾನಾ ಪದಾರ್ಥವ ಬಡಿಸಿ ಬ್ರಾಂಬರ

ಎಡಿಗೆ ತಂದಿಟ್ಟಳು ಯಶೋದಾ । ಇಟ್ಟಂಥಾ ಪಾತ್ರೆಯೊಳು ಮುಟ್ಟಿಕೊಂಡು ಗೋಪಿನಾಥ ಸಿಟ್ಟಿನಿಂದ ನೋಡಿದರು ಬ್ರಾಹ್ಮಣರು ಕೃಷ್ಣನ ಕಡೆಯಲಿ । ಕೋಲು ಕೊಂಡು ಕೋಪದಿಂದ ಬಾಲಕನ ಬಡಿಯಲು ಬಾಗಿಲ ಹಿಂದೆ ಹೋಗಿ ಅಡಗಿದ ಕೃಷ್ಣನು । ಅಡಗಿದ್ದ ಕೃಷ್ಣನ್ನ ಎಳೆದುಕೊಂಡು ಗೋಪಿದೇವಿ ಒಳಗೆ ಕಟ್ಟಿದಳು ವಜ್ರದ ಕಂಬಕ ಕಟ್ಟಿ ಬ್ರಾಂಬರನ್ನು ಬೇಡಿಕೊಂಡು ಮಾಧವಾ ದುರುಳ ನೀವು ಸ್ನಾನಕೆ ಹೋಗಿರಿ ಅಂದಮಾತನು ಕೇಳಿ ತೀವ್ರದಿಂದ ಸ್ನಾನ ಮಾಡಿ ದೇವರ ನೈವೇದ್ಯಮಾಡಿ ಕುಳಿತರಾಗಲೇ ಕೃಷ್ಣಾರ್ಪಣವೆನ್ನಲು ಕಟ್ಟಿದ ಕಂಬದಿಂದ ಬಂದು ವಿಪ್ರರಾ ಎಡಿಗೆ ನಿಂತ ಭಕ್ತವತ್ಸಲ । ಹಿಂದಕ ತಿರುಗಿ ನೋಡಲು ಗೋವಿಂದ ಬೆನ್ನ ಹಿಡಿದ್ದ ಗೊಲ್ಲರ ಮಗ ಮುಟ್ಟಿದನೆಂದು ಚಿಂತೆ ಬಿಟ್ಟರು. ಪುಲ್ಲ ವದನೆ ಗೋಪಿ ದೇವಿ ತಲ್ಲಣಿಸಿ ಎದೆ ಒಳಗೆ ಎತ್ತಕಡೆಗೆ ಇಟ್ಟುಬರಲಿ ಕೃಷ್ಣನೆಂದಳು । ನಂದಗೋಪ ತನ್ನ ಮಗನ ಬಗಲಲೊಳಗೆ ಎತ್ತಿ ಕೊಂಡು ಯಾರು ಬೈದರೆಂದು ಕೇಳುತಿದ್ದನು । ಅನ್ಯಾಯವಿಲ್ಲದೇ ಅಮ್ಮ ನನ್ನ ಬಡಿದಳು ಎಂದು ಬಣ್ಣಿ ಬಣ್ಣಿಸಿ ರಮಾಪತಿ ಅಳುತಾ ನಿಂತನು । ಭೂಮಿಯ ಬೆಳಗುವ ಯಾವ ಕಡೆಯಿದ್ದರೇನು ಕೃಷ್ಣನೆಂದವರ ಮನಕೆ ಥಟ್ಟನೇ ಬರುವನು ॥ ವಾದಿರಾಜರು ಮಾಡಿದಂಥಾ ಬಾಲಲೀಲೆಯನ್ನು ಹೇಳಿ ಕೇಳಿದವರಿಗೆ ಸಾಯುಜ್ಯ ಮುಕ್ತಿಕೊಡುವ ಶ್ರೀಹಯವದನನು ॥

ಗದ್ಯ

ಹೀಗೆಯೇ ಅವನು ಪರಮಾತ್ಮನೆಂದು ಯಾರಿಗೂ ತಿಳಿಯುವುದಿಲ್ಲ. ಅವನು ಊಟ ಮಾಡಲು ಶುರು ಮಾಡಿದನು. ದಿನಾಲು ತಾಯಿ ಉಣಿಸುತ್ತಿದ್ದಳು. ಒಂದು ದಿನ ಊಟ ಮಾಡಿಸಲು ತಟ್ಟೆಯಲ್ಲಿ ಅನ್ನವನ್ನು ಇಟ್ಟುಕೊಂಡು ಉಣಿಸಲು ಅವನನ್ನು ಬಗಲಲ್ಲಿ ಎತ್ತಿಕೊಂಡು ಉಣಿಸಲು ಹೋದಾಗ ಅವನು ಊಟ ಬೇಡ ಎನ್ನುತ್ತಾನೆ.

ಪದ್ಯ

ಯಶೋದೆಯಮ್ಮ ಎನ್ನನು ಎತ್ತಿಕೊಳ್ಳಮ್ಮ । ಬಿಸಿ ನೀರು ಕಾಸಬೇಡ ।
ಅಮ್ಮ ನೀನು ಗುಗ್ಗಚ್ಚಿ ಮಾಡಬೇಡ । ಬಿಸಿ ಮಮ್ಮು ಉಪ್ಪುಕಾಯಿ ಅಮ್ಮ ನಾನು
ಉಣಲಾರೆ ॥ ಉತ್ತತ್ತಿ ಹಣ್ಣು ಬೆಣ್ಣೆ ತಿಂದೇನೆ ॥೧॥

ನಕ್ಷತ್ರ ತಂದು ತೋರಿಸೆ ಚಂದ್ರಮನ ಇತ್ತತ್ತ ಕರೆದು ತಾರೆ । ಇಚ್ಛೆಸಿ ನಲಿವಂಥಾ
ಪುರಂದರವಿಠಲನ ಒಂದು ಬಾರಿ ಮುದ್ದಾಡಿ ಚಂದ ನೋಡೆ ॥೨॥

ಗದ್ಯ

ಹೀಗೆ ಹಟ ಮಾಡುತ್ತಾ ಉಣ್ಣಲಿಲ್ಲ. ಮುಂದೆ ಹೀಗೆ ದೊಡ್ಡವನಾಗಿ ಎಲ್ಲರ ಮನೆಗೆ ಹೋಗಲು ಶುರು ಮಾಡಿದ. ಮಂದಿಯ ಮನೆಯಲ್ಲಿ ಕದ್ದು ಹಾಲು ಕುಡಿಯುವುದು, ಮೊಸರು ಬೆಣ್ಣೆ ತಿನ್ನುವುದು, ಅವರ ಮಕ್ಕಳನ್ನು ಕಾಡುವುದು, ಆಕಳು ಕರುವನ್ನು ಬಿಟ್ಟು ಹಾಲು ಕುಡಿಸುವುದು, ಹೀಗೆ ಒಂದೇ ಎರಡೇ ಕೆಟ್ಟ ಕೆಲಸ ಮಾಡಿ ಅವರಿಂದ ಬೈಸಿಕೊಂಡು ಅವರು ತಾಯಿಯ ಹತ್ತಿರ ಬಂದು ಚಾಡಿ ಹೇಳುವುದು ಶುರುವಾಯಿತು. ಆಗ ಗೋಕುಲದಲ್ಲಿ ಇರುವುದು ಬೇಡ ವೃಂದಾವನಕ್ಕೆ ಹೋಗೋಣ ಅಂದಾ. ಎಲ್ಲರನ್ನೂ ಕರೆದುಕೊಂಡು ವೃಂದಾವನಕ್ಕೆ ಹೋದರು. ಅಲ್ಲಿ ದನ ಕಾಯಲು ಹೋದಾಗ ಬಕಾಸುರನು ಕೃಷ್ಣನನ್ನು ನುಂಗಲು ಬೆಂಕಿ ನುಂಗಿತಾಗಿ ಉಗುಳಿ ಬಿಟ್ಟನು. ಆಮೇಲೆ ಬಕನನ್ನು ಸೀಳಿ ಕೊಂದು ಬಿಟ್ಟನು. ಬಲರಾಮನನ್ನು ಬಿಟ್ಟು ಗೋಪಾಲಕರೊಡನೆ ಹಸುವನ್ನು ಕಾಯಲು ಹೋದಾಗ ನದಿಯಲ್ಲಿ ಕಾಲೀಯಸರ್ಪದ ಮಡುವಿತ್ತು. ಅಲ್ಲಿ ನೀರು ಕುಡಿದು ಮೂರ್ಛಿತ-ರಾದರು. ಅವರನ್ನು ಕೃಪಾದೃಷ್ಟಿಯಿಂದ ನೋಡಿ ಬದುಕಿಸಿದನು. ಆಮೇಲೆ ಆ ಮಡುವಿನಲ್ಲಿ ಕೃಷ್ಣನು ಹಾರಿದನು. ಆಗ ಗೋಪಾಲಕರು ನಂದಗೋಪ-ಯಶೋದಾಗೆ ಹೇಳಲು ಎಲ್ಲರೂ ಅಳುತ್ತಾ ಬಂದರು. ಅವರು ಅಳುವುದನ್ನು ಕೇಳಿ ಕಾಳಿಯ ಸರ್ಪದ ಹೆಡೆಯ ಮೇಲೆ ನಿಂತು ನರ್ತನ ಮಾಡುತ್ತಾ ಬಾಲವನ್ನು ತನ್ನ ಎಡದಕ್ಕೆಯಿಂದ ಹಿಡಿದುಕೊಂಡು ಮೇಲೆ ಬಂದನು. ಎಲ್ಲರೂ ಹರುಷ ಪಟ್ಟರು. ಅಲ್ಲದೆ ಮೇಲಿನಿಂದ ದೇವತೆಗಳು ಪುಷ್ಪವೃಷ್ಟಿ ಮಾಡಿದರು.

ಪದ್ಯ

ಆಡಿದನೋ ರಂಗ ಅದ್ಭುತದಿಂದಲಿ । ಕಾಳಿಂಗನ ಫಣೆಯಲಿ ।
ಅಂಬರುಹೋದ್ಭವ ಅಖಿಳ ಸುರರು ಕೂಡಿ । ಅಂಬರದಲಿ ನಿಂತು ಅವರು
ಸ್ತುತಿಸೆ । ರಂಭೆ ಊರ್ವಶಿ ರಮಣಿಯರೆಲ್ಲರು । ಚಂದದಿಂದ ಭರತನಾಟ್ಯವ
ನಟಿಸೆ । ಝಂ ತಟ ತಕಧಿಮಿ ತೈ ಧಿಗಿಣಿ ತೋ ಎಂದು ಝಂಪೆತಾಳದಿ
ತುಂಬುರನೊಪ್ಪಿಸೊ ॥೧॥

ನಾರದ ತುಂಬುರುಗಾಯನವ ಮಾಡಲು । ನಂದಿಯು ಮದ್ದಲೆ ಚಂದದಿ ಹಾಕಲು । ಫಣಿಯ ಮೆಟ್ಟಿ ಬಾಲವ ಕೈಯಲ್ಲಿ ಪಿಡಿದು । ಥಳ ಥಳಿಸುತ್ತ ನಾಟ್ಯವನಾಡೆ । ಚಂದ್ರಮಂಡಲದಂತೆ ಹೊಳೆಯುವ ಮುಖದೊಳು । ಚಲಿಸುವ ನೀಲಕೇಶಗಳಾಡೆ । ಕಾಲಲಂದಿಗೆ ಗೆಜ್ಜೆ ಘುಲುಘುಲು ಘುಲುರೆನ್ನುತ ಉಡುಗೆಜ್ಜೆ ಘಂಟೆಗಳಾಡೆ । ದುಷ್ಟಕಾಳಿಂಗನ ಮೆಟ್ಟಿ ಭರದಿಂದ ಪುಟ್ಟಪಾದವ ಇಟ್ಟ ಶ್ರೀಕೃಷ್ಣನು । ಮೆಟ್ಟಿದನು ತಕಧಿಮಿ ತಧಿಕೆನುತ । ಸುರರು ಪುಷ್ಪದ ವೃಷ್ಟಿಯ ಕರೆಯಲು ನಾಗಕನ್ನಿಕೆಯರು ನಾಥನ ಬೇಡಲು । ನಾನಾವಿಧದಿ ಸ್ತುತಿ ಮಾಡಲು। ಚಿಕ್ಕವನಿವನಲ್ಲ ಪುರಂದರವಿಟ್ಠಲನ ಬಿಂಕದೊಳೆತ್ತಿ ಮುದ್ದಾಡೆ ಶ್ರೀಕೃಷ್ಣನ ॥

ಹೀಗೆ ಕುಣಿದಾಡಲು ನಾಗಪತ್ನಿಯರು ಬೇಡಿಕೊಳ್ಳಲು ಕಾಳಿಯನ್ನು ರಮಣ ದ್ವೀಪಕ್ಕೆ ಕಳಿಸಿ ಅಲ್ಲಿಯ ನೀರನ್ನು ಸ್ವಚ್ಛಮಾಡಿದನು. ಮುಂದೆ ಕಾಡ್ಗಿಚ್ಚು ಬರಲು ಅದನ್ನು ನುಂಗಿದನು. ಆಮೇಲೆ ಗೋಪಾಲಕರು ಹಸಿವೆ ಎನ್ನಲು, ಅಲ್ಲಿ ಯಜ್ಞ ನಡೆದಿದೆ. ಹೋಗಿ ರಾಮಕೃಷ್ಣರು ಹಸಿದಿದ್ದಾರೆ ಅನ್ನ ಕೊಡಿ ಅಂತಾ ಹೇಳಲು ಗಂಡಸರು ಯಜ್ಞಮುಗಿದಿಲ್ಲ ಕೊಡುವುದಿಲ್ಲವೆಂದರು. ಹೆಂಗಸರ ಹತ್ತಿರ ಹೋಗಿ ಕೇಳಿರಿ ಅನ್ನಲು ಅವರು ಎಲ್ಲ ಅಡಿಗೆಯನ್ನು ತಂದು ಪರಮಾತ್ಮನಿಗೆ ಕೊಟ್ಟು ಧನ್ಯರಾದರು. ಈ ಬುದ್ಧಿ ನಮಗೆ ಬರಲಿಲ್ಲವೆಂದು ಗಂಡಸರು ಚಡಪಡಿಸಿದರು.

ಒಮ್ಮೆ ಗೋಪಿಕಾಸ್ತ್ರೀಯರು ಶ್ರೀಕೃಷ್ಣನೇ ತಮಗೆ ಪತಿಯಾಗಬೇಕೆಂದು ಮೌನಗೌರಿ ವ್ರತಮಾಡಿದರು. ಆಗ ಬೆಳಿಗ್ಗೆ ಯಮುನಾನದಿಯಲ್ಲಿ ಸ್ನಾನಮಾಡುವಾಗ ಬಟ್ಟೆ ಬಿಚ್ಚಿ ಬೆತ್ತಲೆ ಸ್ನಾನಮಾಡುತ್ತಿದ್ದರು. ಹೀಗೆ ಸ್ನಾನಮಾಡುವುದು ನಿಷೇಧವೆಂದು ಅವರ ಬಟ್ಟೆ ತೆಗೆದು ಮುಚ್ಚಿಟ್ಟು ಅವರಿಗೆ ಬುದ್ಧಿ ಹೇಳಿ ಬಟ್ಟೆ ಕೊಟ್ಟನು. ಪ್ರತಿವರುಷವೂ ಮಾಡುತ್ತಿದ್ದ ಇಂದ್ರಯಾಗವನ್ನು ಒಮ್ಮೆ ಶ್ರೀಕೃಷ್ಣನು ಇಂದ್ರಯಾಗ ಬೇಡ, ಗೋವರ್ಧನ ಪೂಜೆ ಮಾಡಿ ಅನ್ನವನ್ನು ಆ ಪರ್ವತಕ್ಕೆ ಬಲಿ ಹಾಕಿರಿ ಅನ್ನಲು ಹಾಗೇ ಮಾಡಿದರು. ಆಗ ಪರಮಾತ್ಮನು ಒಂದು ರೂಪದಲ್ಲಿ ಪರ್ವತದಲ್ಲಿ ನಿಂತು ಅಷ್ಟು ಅನ್ನವನ್ನು ಉಂಡನು. ಇಂದ್ರನಿಗೆ ಸಿಟ್ಟು ಬಂದು ಪ್ರಳಯಕಾಲದಂತೆ ಮಳೆ ಸುರಿಸಿದನು. ಆಗ ಶ್ರೀಕೃಷ್ಣನು ತನ್ನ ಕಿರುಬೆರಳಿನಿಂದ ಬೆಟ್ಟವನ್ನು ಎತ್ತಿ ಎಲ್ಲರನ್ನು ಸಂರಕ್ಷಿಸಿದನು. ಆಮೇಲ ಇಂದ್ರನು ಗರ್ವವನ್ನು ಬಿಟ್ಟು ತಪ್ಪನ್ನು ಕ್ಷಮಿಸು ಎಂದು ದೇವರಿಗೆ ಶರಣು ಹೋದನು. ಒಮ್ಮೆ ಏಕಾದಶಿಯ ದಿನ

ನಂದಗೋಪನು ನದಿಯ ಸ್ನಾನಕ್ಕೆ ಹೋದಾಗ ವರುಣನ ದೂತರು ವರುಣಲೋಕಕ್ಕೆ ಕರೆದುಕೊಂಡು ಹೋದರು. ಆಗ ಕೃಷ್ಣನು ಅಲ್ಲಿಗೆ ಹೋಗಿ ವರುಣನಿಂದ ಪೂಜೆಗೊಂಡು ತಂದೆಯನ್ನು ಕರೆದುಕೊಂಡು ಬಂದನು. ಅಪರಾತ್ರಿಯಲ್ಲಿ ಸ್ನಾನಕ್ಕೆ ಹೋಗಬಾರದು. ಒಮ್ಮೆ ಗೋಪಾಲಕರು ಕೃಷ್ಣನಿಗೆ ವೈಕುಂಠಲೋಕವನ್ನು ತೋರಿಸು ಅನ್ನಲು, ಕಣ್ಣು ಮುಚ್ಚಿ ಕೊಳ್ಳಿರಿ ಅನ್ನಲು, ಎಲ್ಲರೂ ಕಣ್ಣುಮುಚ್ಚಿಕೊಳ್ಳಲು, ವೈಕುಂಠ ಅಲ್ಲಿ ತನಗೆ ಪೂಜೆಮಾಡುವ ದೃಶ್ಯವನ್ನು ತೋರಿಸಿದನು. ಒಂದು ದಿನ ಶರದೃತುವಿನಲ್ಲಿ ಕೊಳಲು ಊದಲು ಗೋಪಿಕಾಸ್ತ್ರೀಯರು ಮತ್ತು ಹಕ್ಕಿ ಪಕ್ಷಿ, ಆಕಳು ನದಿ ಎಲ್ಲವೂ ಇವನ ಕೊಳಲಿನ ನಾದಕ್ಕೆ ಪುಳಕಿತರಾಗಿ ಮನೆಯಲ್ಲಿ ಎಲ್ಲ ಕೆಲಸವನ್ನು ಬಿಟ್ಟು ಮಕ್ಕಳನ್ನು ಗಂಡಂದಿರನ್ನು ಬಿಟ್ಟು, ವಡವೆ ವಸ್ತುಗಳನ್ನು ಮತ್ತು ಬಟ್ಟೆಯನ್ನು ಅಸ್ತವ್ಯಸ್ತವಾಗಿ ಹಾಕಿಕೊಂಡು ಹೊರಟರು.

ಪದ್ಯ

ರಂಗ ಕೊಳಲನೂದಲಾಗಿ। ರಂಗಯ್ಯ ಕೊಳಲ ನೂದಲು ॥ಪ॥

ಮಂಗಳಮಯವಾಯಿತು ಧರೆ - ಜನಂಗಳು ಜೀವನ
ಚೇತನ ಮರೆದು। ರಂಗಧ್ಯಾನ ಪರರಾದರು ॥ ಅಪ ॥

ಬಾಡಿದಬಳ್ಳಿ ಮರಾಗೊನೆಯೊಡದವು। ತೀಡುವ ಮಂದಮಾರುತ ಕೂಡ
ತೂ। ಗಾಡುವ ಮನಫಲಗೊಂಚಲದಿ। ಪಾಡಲೊಲ್ಲವಳಿಕುಲಗಳು ॥
ಹೇಡಿಗೊಂಡವು ಜಾಣಕ್ಕಿ ಗಿಳಿಯು ಮಾ। ತಾಡದೆ ಕಳೆಗುಂದಿವು ಕೋಕಿಲ॥
ಓಡಾಟ ವೈರಾಟ ಜರೆದು ಖಗ ಮೃಗ। ಗಾಢನಿದ್ರೆಗೆ ವಶವಾದವು ॥೧॥

ಕೆಚ್ಚಲ ಬಿಗಿದ ತೂರೆದ ಮೊಲೆಯ। ವತ್ಸವಡಲಾಸೆ ಜರೆದೆಳೆ ಹುಲ್ಲುಕಚ್ಚಿ
ಅಲ್ಲಲ್ಲಿಗೆ ನಿಂತವು ತಲೆಯ ಪುಚ್ಛವನೆ ನೆಗೆಹಿ ನಿಲಿಟಿಸಿ। ಅಚ್ಯುತನ ಕೃತಿ
ನೋಡಲು ಸುರರಿ -। ಗಚ್ಚರವಾಯಿತು ಆವು ಕಂಡಾನಂದ।
ಮೆಚ್ಚಿಮುಕುಂದನ ಲೀಲಾವಿನೋದಕೆ। ಅಚ್ಚಕುಸುಮ ಸುರಿದರು ॥೨॥

ಕೆಳಗಿನೋದಕ ಉಕ್ಕೇರಿ ಬಂದವು। ತುಳಕಿ ಚೆಲ್ಲಾಡಿ ನಿಂತಳು ಯಮುನೆ।
ಮೇಲೆ ಮೋಡೊಡ್ಡಿ ಮೇಘಾಳಿ ಭೋರಿಟ್ಟವು।

ಕಲ್ಲು ಕರಗಿ ನೀರಾದವು । ನಳಿನ ಚಂಪಕನಾಗ ಪುನ್ನಾಗ ಪಾ-
ಟಲ ಶಾವಂತಿಗೆ ಕುಂದಬಕುಲವು । ಮಾಲತಿ ಜಾಜಿಯು ಪರಿಮಳಂಗೂಡಿ
ನೀಲಾಂಗನಂಘ್ರಿಗೆ ಎರಗಿದವು ||೩||

ಮುದ್ದುಮೋಹನ್ನನ ಮಂಜುಳ ಸಂಗೀತಸದ್ದನಾಲಿಸೆ ಗೋಪಾಂಗನೆ-
ಯರೆಲ್ಲರು । ಬುದ್ಧಿಸೂರಾಡಿದ ರಂಗಜ ಶರಕೆ । ಬಿದ್ದು ಪರವಶರಾದರು ।
ಸಿದ್ಧಮುನಿ ಜನರಿದ್ದ ಸಮಾಧಿಯೊ-। ಲೆದ್ದೆದ್ದು ಕುಣಿದು ಎದೆ ತಾವರೆ ಗದ್ದಗಿ
ಅರಸನೊಲಿಸಿಕೊಂಡರು । ಗೆದ್ದರು ಭವಸಮುದ್ರವ ||೪||

ಶ್ರೀಮನೋಹರ ಮೂರುತಿ ಗೋಪಾಲನು । ಆ ಮುದ್ದು ಕುಂಜವನಾದಿ
ತ್ರಿಭಂಗಿಸಿ । ಹೇಮಾಂಬರುಟ್ಟುಗೀರ್ಗಂಧ ಕಸ್ತೂರಿಯ । ನಾಮ ಕುಂಡಲದ
ಬೆಳಕಿನಲಿ । ದಾಮವನಮಾಲೆ ರತನಾಭರಣ । ಸ್ವಾಮಿ
ಶ್ರೀಪ್ರಸನ್ನವೆಂಕಟಕೃಷ್ಣನ ।ನಾಮಕ್ರಿಯ ಗುಂಡಕ್ರಿಯೆಯ ರಾಗವ ಮಾಡಿ
ಸಾಮಗಾ ।ನದಿ ನಮೋ ಎಂದರು ||೫||

ಗದ್ಯ

ಗೋಪಿಕಾಸ್ತ್ರೀಯರಂತೂ ಕೊಳಲ ನಾದಕ್ಕೆ ಮರುಳಾಗಿ ಏನೇನು ಮಾಡಿದ-ರೆಂಬುದು ಈ ಹಾಡಿನಲ್ಲಿದೆ.

ಪದ್ಯ

ಏನು ಸವಿಯೋ ನಿನ್ನ ಕೊಳಲು ।
ಗೊಲ್ಲ ಮಾನಿನಿಯರ ಮಾಡಿತು ಮರುಳು ||ಪ||

ಬರಿ ಗಡಿಗೆಯ ಕಡೆಯುವರೊ । ಗೋ ಕರುವನು ಬಿಟ್ಟು ಎತ್ತನ್ಹಿಂಡುವರೋ ।
ತಿರುಗಿ ಕನ್ನಡಿಯ ನೋಡುವರೊ । ಹಿರಿಹಿರಿ ಹಿಗ್ಗಿ ಕುಂಕುಮವ ಕಣ್ಣಿಗೆ
ತೀಡುವರೊ ||೧||

ಚಿಕ್ಕಮಕ್ಕಳ ಹೊಡೆದೋಡಿಸುವರೊ । ಬೆಕ್ಕಿನ ಮರಿ ಎತ್ತಿ ಮುತ್ತನಿಕ್ಕುವರೋ ।
ಉಕ್ಕುವ ಪಾತ್ರೆ ಲೆಕ್ಕಿಸರೋ । ಬೋರಲಿಕ್ಕಿದ ಗಡಿಗೆಗೆ ನೀರ ಹಣಿಸುವರೋ ||೨||

ಆ ನಾದ ಇನ್ನೊಮ್ಮೆ ಮಾಡೋ । ಬಹು ದೀನವಾಗಿದೆ ಈ ಜಗ ನೋಡೋ ।

(ನೀ ಎನ್ನ ಕೈ ಬಿಡಬೇಡೋ) ಭಕ್ತವತ್ಸಲ ದಯಮಾಡೋ । ಸ್ವಾಮಿ
ಪುರಂದರವಿಟ್ಠಲನೆ ನೀ ಎನ್ನ ಕೈ ಬಿಡಬೇಡೋ ॥೩॥

ಗದ್ಯ

ಹೀಗೆ ಪರಮಾತ್ಮನ ಕೊಳಲು ನಾದದಿಂದ ಏನು ಕೆಲಸಮಾಡುವವೆಂದು ಅವರಿಗೆ ತಿಳಿಯಲಿಲ್ಲ. ಗಂಡಂದಿರನ್ನು ಮಕ್ಕಳನ್ನು ಬಿಟ್ಟು ಕೊಳಲು ಊದುವ ತಾವಿಗೆ ಬಂದರು. ಅವರು ಬಂದನಂತರ ಅವರೊಡನೆ ಶ್ರೀಕೃಷ್ಣನು ಇಂಥಾ ರಾತ್ರಿ ಮನೆ ಗಂಡ ಮಕ್ಕಳನ್ನು ಬಿಟ್ಟು ಯಾಕೆ ಬಂದಿರಿ ಅಂತಾ ಕೇಳಲು ನಾವು ನಿನ್ನ ಸೇವೆಯನ್ನು ಮಾಡಿ ಉದ್ಧಾರವಾಗಲು ಬಂದಿರುವೆವು. ನಮ್ಮನ್ನು ನಿರಾಸೆಗೊಳಿಸಬೇಡ ಎನ್ನಲು ಪರಮಾತ್ಮನು ಸಂತೋಷಪಟ್ಟು ಅವರನ್ನು ಚಂದ್ರನಿಂದ ಪ್ರಕಾಶಮಾನವಾದ ರಾತ್ರಿಯಲ್ಲಿ ಸಂತೋಷಪಡಿಸಿದನು. ಆದರಿಂದ ಅವರಿಗೆ ಗರ್ವಬರಲು ಪರಮಾತ್ಮನು ಅದೃಶ್ಯನಾದನು. ಆಗ ಎಲ್ಲರೂ ದುಃಖದಿಂದ ಹುಚ್ಚು ಹಿಡಿದಂತಾಗಿ ಗಿಡಮರಗಳನ್ನು ಕೇಳುತ್ತಾ ಅಳುತ್ತಾ ಹೋಗುತ್ತಿರಲು ಅಲ್ಲಿ ಕೃಷ್ಣನ ಹೆಜ್ಜೆ ಕಂಡವು. ಅವನ ಬಳಿಯ ಹೆಂಗಸಿನ ಹೆಜ್ಜೆ ಕಂಡವು. ಒಬ್ಬಳನ್ನು ಕರೆದುಕೊಂಡು ಹೋಗಿದ್ದಾನೆ. ಮುಂದೆ ಅವಳ ಹೆಜ್ಜೆ ಕಾಣದಾಗಲು ಅವಳನ್ನು ಎತ್ತಿಕ್ಕೊಂಡು ಹೋಗಿರಬಹುದು ಅನ್ನುತ್ತಿರಲು ಅಷ್ಟರಲ್ಲಿ ಅವಳಿಗೂ ಅಹಂಕಾರಬರಲು ಅವಳನ್ನು ಬಿಟ್ಟು ಅದೃಶ್ಯನಾಗಿದ್ದನು. ಅವಳು ಅಳುತ್ತಾ ಕುಳಿತಿರಲು ಉಳಿದ ಸ್ತ್ರೀಯರು ಅಲ್ಲಿಗೆ ಬಂದರು. ಅವಳಿಂದ ಎಲ್ಲ ವಿಚಾರಕೇಳಿ ಎಲ್ಲರೂ ಸೇರಿ ಪರಮಾತ್ಮನ ಸ್ತುತಿಯನ್ನು ಸ್ತುತಿಸಲು ಆರಂಭಿಸಿದರು.

ಪದ್ಯ

ಶ್ರೀಲತಾಂಗಿರ ರಮಾಕೃಷ್ಣನು । ಬಾಲಲೀಲೆಯ ಜಗಕೆ ತೋರಿದ ॥
ಆಡಿ ಪಾಡುತ ಕೂಡಿ ರಮಿಸುತ । ಗಾಡಿಕಾರನು ಅವಳ ಹೆಗಲೇರಿಸಿ ॥
ಅಗರು ಕಸ್ತೂರಿ ಪೂಸಿ ಹೃದಯಕೆ । ಮೊಗರು ಕುಚಗಳ ಮುಖದ ಕಮಲವು ॥
ತಾನೇ ಸುಂದರಿ ಎಂದು ಗರ್ವಿಸೇ । ದೀನನಾಥನು ಅದೃಶ್ಯನಾದನು ॥
ಎತ್ತ ಪೋದನೋ ರಂಗ ಎನುತಲಿ । ಚಿತ್ತಭ್ರಮೆಯಲಿ ಹುಡುಕುತಿದ್ದರು ॥
ಎಲ್ಲಿ ಪೋದನೋ ಕೃಷ್ಣ ಎನುತಲಿ । ಮತ್ತೆ ಸಖಿಯರು ಹುಡುಕುತಿದ್ದರು ॥

ಇತ್ತ ಗೋಕುಲಾದೊಳಗೆ ಸ್ತ್ರೀಯರು । ಮತ್ತೆ ಕೃಷ್ಣನ ಪಾದ ಕಾಣದೆ ॥
ಗಿಳಿಯು ಕೋಗಿಲೆ ಹಂಸ ಭೃಂಗನೇ । ನಳಿನನಾಭನ ಸುಳಿವು ಕಂಡೀರಾ ॥
ಕಂದಮೂಲವೇ ಜಾಜಿ ವೃಕ್ಷವೇ । ಇಂದಿರೇಶನ ಸುಳಿವು ಕಂಡೀರಾ ॥
ಮಂದಭಾಗ್ಯರ ಮಾಡಿ ಪೋದನು । ಶ್ರುತಿಗೆ ಸಿಲುಕಿದ ದೋಷದೂರನೇ ॥
ವ್ರತವ ಕೆಡಿಸಿದಿ ಎಲ್ಲಿಗ್ಹೋಗೋಣ । ಇಷ್ಟು ಪರಿಯಲಿ ಸ್ತೋತ್ರಮಾಡಲು ॥
ರಂಗರಾಯನು ಬಂದು ಸೇರಿದಾ । ಮದನನಯ್ಯ ಮುದದಿ ನೆನೆದರೆ ॥
ನದಿಯ ತೀರದಿ ವಿಜಯವಿಠಲನ । ನದಿಯ ತೀರದ ತೀರ್ಥಪಾದನು ॥
ಸಲಹಿ ಭಕುತರ ಪಾಲಿಸುವನು ॥

ಗದ್ಯ

ಹೀಗೆ ಗೀತೆಯನ್ನು ಹಾಡುತ್ತಾ ಕುಳಿತಿರಲು ಪರಮಾತ್ಮನು ದರುಶನ ಕೊಟ್ಟು ಅವರ ಅಭೀಷ್ಟವನ್ನು ಪೂರೈಸಿದನು. ಮುಂದೆ ಇಬ್ಬಿಬ್ಬರಲ್ಲಿ ಒಂದೊಂದು ರೂಪದಿಂದ ಇದ್ದು ರಾಸಕ್ರೀಡೆ, ಜಲಕ್ರೀಡೆ, ವನಕ್ರೀಡೆಯನ್ನು ಮಾಡಿದನು. ಅವರನ್ನು ಸಂತೋಷಪಡಿಸಿದನು. ಮುಂದೆ ಕಂಸನಿಗೆ ನಾರದರು ಶ್ರೀಕೃಷ್ಣನು ದೇವಕಿಯ ಮಗನೆಂದು ಹೇಳಲು ಕಂಸನು ಅಕ್ರೂರನನ್ನು ಕರೆದು ಬಿಲ್ಲು ಹಬ್ಬಕ್ಕೆ ಕೃಷ್ಣ ಬಲರಾಮರನ್ನು ಕರೆದುಕೊಂಡು ಬರಲು ಹೇಳಿದನು. ಆಗ ಅಕ್ರೂರನು ಸಂತೋಷದಿಂದ ತನಗೆ ದೇವರ ದರುಶನವಾಗುತ್ತದೆ ಅಂತಾ ಹೋದನು. ಅಲ್ಲಿ ಪರಮಾತ್ಮನ ಹೆಜ್ಜೆ ಕಾಣಲು ಅದರ ಮೇಲೆ ಹೊರಳಾಡುತ್ತಾ ಹೋದನು. ಅವರನ್ನು ಬೆಳಿಗ್ಗೆ ಕರೆದುಕೊಂಡು ಹೋಗಲು ರಥವನ್ನು ನಿಲ್ಲಿಸಿದನು. ಆಗ ಗೋಪಿಯರು ನೋಡಿ ಎಲ್ಲರೂ ಗುಂಪಾಗಿ ಬಂದು ನಿಂತರು.

ಪದ್ಯ

ಅಕ್ಕ ನಂದಗೋಪನ ಅರಮನೆಯೊಳಗೊಬ್ಬ । ಅಕ್ರೂರ ಬಂದನಂತೆ ॥ಪ॥

ಹೊಕ್ಕು ಬಳಿಸುವುವಳಲ್ಲ । ಹುಸಿಯನಾಡುವಳಲ್ಲ । ಇಕ್ಕೋ ಬಾಗಿಲ ಮುಂದೆ ರಥವ ತಂದ್ರೆ । ಮಥುರಾ ಪಟ್ಟಣವಂತೆ । ಮಾವ ಕರೆಸಿದನಂತೆ । ನದಿಯ ದಾಟಲಿ ಬೇಕಂತೆ । ಉದಯದಿ ಪಯಣವಂತೆ । ಬಿಲ್ಲು ಹಬ್ಬವಂತೆ ಬೀದಿ ಸಿಂಗಾರವಂತೆ । ತಾಳಲಾರೆವು ನಾವು ಪುರಂದರವಿಟ್ಠಲನ ಬಿಟ್ಟು । ಬಾಲತತ್ವದಲಿ

ಪೋದರೆ ಕಾಲವೊದಗಿ ತಮ್ಮ ಕಾಮಿನಿ ಜನರೆಲ್ಲ। ಆಲೋಚನೆ ಮಾಡಿ
ಆಣೆಯಿಡುವ ಬನ್ನಿ॥

ಗದ್ಯ

ಅಂತಾ ಎಲ್ಲರೂ ಆಲೋಚನೆ ಮಾಢಿ ಗುಂಪಾಗಿ ಬಂದು ನೀನು ಹೋದರೆ ನಾವು ಇರುವುದು ಹೇಗೆ ಅಳುತ್ತಾ ಅಕ್ರೂರನಿಗೆ ನೀನು ಅಕ್ರೂರನಲ್ಲ, ಕ್ರೂರನು ಎಂದು ಹೇಳುತ್ತಾ ನಿಂತರು. ಆಗ ಶ್ರೀಕೃಷ್ಣನು ನಾನು ಬೇಗ ಬರುತ್ತೇನೆ. ಅಳಬೇಡಿರಿ ಅಂತಾ ಸಮಾಧಾನ ಮಾಡಿ ಹೊರಡುವಾಗ ಹೇಳಿದ ಹಾಡು.

ಪದ್ಯ

ಪೋಗಿ ಬರುವೆ ಗೋಪಿ ನಾಗವೇಣಿಯರೆ।
ಚೆನ್ನಾಗಿ ಮಮತೆ ಪೂರ್ಣವಾಗಿರಲಿ ॥ಪ॥

ಜಾಗುಮಾಡದೆ ನೀವು ಬೇಗದಿಂದಲಿ ಎನ್ನ। ಸಾಗಿಸಿ ಪತಿಗಳ ಕೂಡೆ ಭೋಗಿಸಿ।
ತತ್ಸೇವೆ ಮಾಡಲು ಪೋಗುವುದು ದುರಿತೌಘವೆಲ್ಲವು।
ನೀಗುವುದು ಹೃದ್ರೋಗ ಮಂಗಳವಾಗುವುದು।
ಲೇಸಾಗಿ ಹರುಷಿತರಾಗಿ ಕಳುಹಿರಿ ಈಗ ಮಧುರೆಗೆ ॥ಅಪ॥

ಬಾಲಕತನದಿ ನಿಮ್ಮಾಲಯವನೆ ಪೊಕ್ಕು ಪಾಲು ಮೊಸರು।
ಬೆಣ್ಣೆ ಕದ್ದು ಮೆದ್ದು ಲೀಲೆಯಿಂದಲೆ ನಿಮ್ಮ ಬಾಲರು।
ತಿಂದರೆಂದ್ಹೇಳಿದೆ। ವ್ರಪ ಹೇಳಿ ಹೀಗೆ ಬಾಳೀದೆ।
ಮೇಲಿಟ್ಟ ಭಾಂಡವ ಸೀಳದೆ ಮಥಿಸುವ ಸುಪಾತ್ರಿಯ।
ಕಾಲಿಲೊದ್ದು ಬೀಳಿಸಿ ಕೆಡಹಿದೆನೆ। ನವನೀತವನು ಮಾರ್ಜಾಲ।
ಮರ್ಕಟ ಪಾಲು ಮಾಡಿದನೆ। ಹೀಗುಚಿತವಲ್ಲೆಂದ್ಹೇಳಿದರೆ ಕೇಳದಲೆ।
ನಾನತಿ ಹೇಯನೆಯ ದಾಳಿ ಮಾಡಿದೆನೆ। ತಾಳಿಗಿರಿ ಕೃಪಾಳು ಗುಣಗಳ
ಪೇಳಲಳವೆ ॥೧॥

ಫುಲ್ಲಲೋಚನೆಯರೆ ನಿಮ್ಮೆಲ್ಲರ ಮನಸು ಎನ್ನಲ್ಲಿ।
ಪೊಂದಿರುವರು ಬಲ್ಲೆ ಕೇಳಿ। ಇಲ್ಲಿ ನಿಮ್ಮನು ಬಿಟ್ಟು।

ನಿಲ್ಲದೆ ಪೋಗುವುದು ಸಲ್ಲಾದೆ। ಕಾರ್ಯವೆ ಮುಖ್ಯವಲ್ಲಾದೆ।
ಬರುವೆನು ಅಲ್ಲಿ ನಿಲ್ಲಾದೆ। ಬ್ರಹ್ಮಾಂಡದೊಳಗಾವಲ್ಲಿ।
ನೋಡಿದರಲ್ಲಿ ನಾನಿರುವೆ। ಆದರದಿ ಕರೆದವರಲ್ಲಿ ಅತಿ।
ತ್ವರದಲ್ಲಿ ಬರುತಿರುವೆ। ನಾನಿಲ್ಲದಿಹ ಸ್ಥಳವಿಲ್ಲದು ಜಗದೊಳಗೆ।
ತುಂಬಿರುವೆ ಈ ಪರಿಯ ಪೇಳ್ವಿದು। ಸುಳ್ಳು ಮಾತುಗಳಿಲ್ಲ।
ಆಗಮದಲ್ಲಿ ಪೇಳಿದ ಸೊಲ್ಲು ಸತ್ಯಾದರಲ್ಲಿ। ಸಂಶಯವಿಲ್ಲ ಎಂದಿಗೂ
ಎಲ್ಲಿ ಸ್ಮರಿಸಿದರಲ್ಲಿ ವದಗುವೆ ॥೨॥

ಹಿಂದಕ್ಕೆ ವಂದಿನ ನಿಂದೂ ಕೊಳಲೂದೀಸ್ತ್ರೀವೃಂದ।
ಕೇಳುತಲಿ। ಅಂದು ಬರಲು ನಿಮ್ಮ ಬಂಧುಗಳಲ್ಲಿ। ನಿಬಂಧಿಸಿ।
ಬೇಡೆನ್ನಲವರ ಸಂಧಿಸಿ। ಕೀರ್ತಿಯನು। ಪದಗತಿಯಿಂದ।
ಧಿಂ ಧಿಮಿಕೆಂದು ಪಾಡಿದರೆ। ಬಲುಪರಿಯಿಂದ। ಎನ್ನಿಂದ ಬಂದ ಕುಂದ।
ನೊಂದು ಗಳೊಂದು ಎಣಿಸದೆ ಪೊಂದಿದೆವು ಎಂತೆಂದು ಶ್ರೀರಾಮ-
ಸುಂದರವಿಠಲೆಂದುಮುಖಿಯರೆ ಇಂದು ಮೋದದಿ ಕಳುಹಿರೀಗ ॥೩॥

ಗದ್ಯ

ಅಂತಾ ಗೋಪಿಯರಿಗೆ ಸಮಾಧಾನ ಹೇಳಿಹೊರಟನು. ಗೋಪಿಯರು ಅವನ ರಥ ಕಾಣುವವರೆಗೆ ನೋಡುತ್ತ ನಿಂತು ಮನೆಗೆ ಹೋದರು. ಮುಂದೆ ರಥವು ಯಮುನಾನದಿಗೆ ಬರಲು ಅಕ್ರೂರನು ರಥ ನಿಲ್ಲಿಸಿ ಸ್ನಾನಕ್ಕೆ ಹೊರಟನು. ಸ್ನಾನಮಾಡಲು ನೀರಲ್ಲಿ ಮುಳುಗಲು ಅಲ್ಲಿ ಶೇಷನನ್ನೂ ಮತ್ತು ಶೇಷಶಾಯಿಯಾದ ಪರಮಾತ್ಮನನ್ನು ನೋಡಿದ್ದು, ಮೇಲೆ ಪರಮಾತ್ಮನು ರಥದಲ್ಲಿಯೇ ಇದ್ದನು, ಸಂತೋಷದಿಂದ ಮಥುರಾಪಟ್ಟಣಕ್ಕೆ ಬಂದನು. ಅವರನ್ನು ಇಳಿಸಿ ಕಂಸನಿಗೆ ತಿಳಿಸಿದನು. ಇತ್ತ ಮಾಲಾಕಾರನು ಹೂವಿನ ಹಾರ ಹಿಡಿದುಕೊಂಡು ಹೊರಟಿದ್ದನು. ಕೃಷ್ಣ ಕೇಳಲು ಕೊಟ್ಟುಬಿಟ್ಟನು. ಮುಂದೆ ರಾಜನ ವಸ್ತ್ರವನ್ನು ಒಯ್ಯುತ್ತಿರುವಾಗ, ವಸ್ತ್ರ ಕೇಳಲು ಕೊಡಲಿಲ್ಲ, ಅದಕ್ಕೆ ಅವನನ್ನು ಸಂಹಾರಮಾಡಿ ಎಲ್ಲ ವಸ್ತ್ರವನ್ನು ತಾನು ತನ್ನ ಗೋಪಾಲಕರು ಹಾಕಿಕೊಂಡರು, ಕಂಸನಿಗೆ ಗಂಧ ಹಚ್ಚಲು ಕುಬ್ಜೆಯು ಗಂಧವನ್ನು ಹಿಡಿದುಕೊಂಡು ಹೊರಟಿದ್ದಳು. ಅವಳನ್ನು ಗಂಧ ಕೇಳಲು, ಗಂಧವನ್ನು ಕೊಟ್ಟು ಕೃತಾರ್ಥಳಾದಳು. ಅದಕ್ಕೆ ಪರಮಾತ್ಮನು

ಅವಳ ಡೊಂಕು ತಿದ್ದಿ ಸುಂದರಿಯನ್ನಾಗಿ ಮಾಡಿದನು. ಮುಂದೆ ರಂಗಸ್ಥಳಕ್ಕೆ ಬಂದು ಕುವಲಯಾಪೀಡ ಆನೆಯನ್ನು ಕೊಂದು ಅದರ ದಂತವನ್ನು ಇಬ್ಬರು ಹಿಡಿದುಕೊಂಡು ಚಾಣೂರ,ಮುಷ್ಟಿಕರನ್ನು ಕೊಂದು ಮುಂದೆ ಕಂಸನ ಮಂಚದ ಮೇಲೆ ಹಾರಿ ಅವನ ರುಂಡವನ್ನು ಹಾರಿಸಿದನು. ಮುಂದೆ ಕಂಸನ ತಂದೆಯಾದ ಉಗ್ರಸೇನನನ್ನು ಜೈಲಿನಲ್ಲಿ ಇಟ್ಟಿದ್ದನು, ಅವನನ್ನು ಜೈಲಿನಿಂದ ಬಿಡಿಸಿ, ರಾಜನನ್ನಾಗಿ ಮಾಡಿ; ತಂದೆತಾಯಿಯರ ಹತ್ತಿರ ಹೋಗಿ ನಮಸ್ಕರಿಸಿ ಅವರ ಜೊತೆಯಿದ್ದು ಉಪನಯನ ಮಾಡಿಸಿಕೊಂಡು ಸಾಂದೀಪಿನಿ ಆಚಾರ್ಯರ ಹತ್ತಿರ ವಿದ್ಯೆ ಕಲಿತು, ಗುರುದಕ್ಷಿಣೆಯಾಗಿ ಸತ್ತ ಅವರ ಮಗನನ್ನು ತಂದುಕೊಟ್ಟು, ಪಾಂಚಜನ್ಯ-ರಾಕ್ಷಸನನ್ನು ಕೊಂದು ಪಾಂಚಜನ್ಯಶಂಖವನ್ನು ತಂದನು. ಮುಂದೆ ಪಟ್ಟಣಕ್ಕೆ ಬಂದನು. ಶ್ರೀಕೃಷ್ಣನ ವಿರಹವನ್ನು ತಾಳಲಾರದೆ ದುಃಖಿಸುತ್ತಿರುವ ನಂದಗೋಪ-ಯಶೋದೆ ಮತ್ತು ಗೋಪಿಯರಿಗೆ ಸಮಾಧಾನ ಮಾಡಲು ಉದ್ಧವನನ್ನು ಕಳುಹಿಸಿದನು. ಉದ್ಧವನು ವೃಂದಾವನಕ್ಕೆ ಬರಲು ಎಲ್ಲರೂ ಕೃಷ್ಣನೇ ಬಂದನೆಂದು ತಿಳಿದಿದ್ದರು. ಉದ್ಧವನಿಗೆ ಸಾಧಾರಣ ಕೃಷ್ಣನ ಹೋಲಿಕೆಯಿತ್ತು. ಅವನು ಉದ್ಧವ ಎಂತಾ ತಿಳಿದ ಮೇಲೆ,

ಪದ್ಯ

ನಾಳೆ ಬರುವೆನೆಂದು ಹೇಳಿ ಮಧುರೆಗೆ ಪೋದ ಬ-
ಹಳ ದಿನವಾಯಿತಲ್ಲೋ ಉದ್ಧವ ||ಪ||

ಕೇಳಿದ್ಯಾ ನೀ ಬಾಹ ವೇಳೆಯಲಿ ಕೃಷ್ಣನ |
ಆಲೋಚನೆಯೊಳಿದ್ದವೋ ||ಅ.ಪ.||

ಹಳ್ಳಿವಾಸಿಗಳು ನಾವು ಪರಿಪರಿ ಅಲಂಕರಿಸಿ ಒಲಿಸಿಕೊಂಬುದನರಿಯೆವೊ |
ಗೊಲ್ಲ ಸತಿಯರು ಸದಾ ಗೋರಕ್ಷರು ಮೈಯ ತೊಳೆಯಲರಿಯವೋ |
ಬಲ್ಲಿದನ ಸಹವಾಸ ಮಾಡ್ಯವನ ಮಹಿಮೆಯನೆಲ್ಲ ತಿಳಿಹಿಸಿಕೊಂಡೆವೊ |
ಚೆಲ್ವಕಂಗಳ ಚಪಲೆಯರು ಮಧುರೆನಾರಿಯರ ಹೊಳಪಿಗೆ ನಾವೆದುರೇನೋ ೧

ಚೊಕ್ಕನಾದ ನಿತ್ಯ ತೃಪ್ತನಿಗೆ ಬೆಣ್ಣೆ ಕಳವಿಕ್ಕಿದವಲ್ಲವೊ |
ಸಿಕ್ಕಿಸಿಕೊಂಡು ರಾಸಕ್ರೀಡೆಯೊಳವಗೆ ಸೊಕ್ಕನುಕ್ತಿಯ ನುಡಿದೆವೊ |

ಕಕ್ಕುಲಾತಿಲಿ ಕಾಮಾಸಕ್ತರಿಗಿವ ನಮಗೆ ದಕ್ಕಿದನು ಎಂತಿದ್ದೆವೊ ।
ವಕ್ರಗತಿಯಾಗಿ ಅಕ್ರೂರ ಬಂದ್ಯೆಮ್ಮ ಚಕ್ರಧರನಗಲಿಸಿದನೊ ॥೨॥

ಧೀರ ಸ್ವರಮಣ ದೋಷದೂರನ್ನ ಅಲ್ಪ ಬಹುಜಾರನೆಂದರಿತೆವಲ್ಲೊ ।
ಆರಾರ ಮನಕಿನ್ನು ತೋರದವನ ನಮ್ಮ ಓರಗೆಯವನೆಂದರಿದೆವೊ ।
ಮುರಾರಿ ಅಜ ಪರಿವಾರದೊಡೆಯನ ನಾವು ಪೋರನೆಂದಾಡಿಸಿದೆವೊ ।
ನಾರಿಯರು ನಾವಲ್ಪ ದಾರಿದ್ರ್ಯರಿಗೆ ಶ್ರೀರಮಣನೆಂತೊದಗುವನೊ ॥೩॥

ನಿಧಿಯ ಬದಿಲಿದ್ದರು ವಿಧಿಸುವುದನರಿಯದೆ ಮದಡೆಯರಾದೆವೊ ।
ಮದನನಾಟಕೆ ಮನವಿಕ್ಕಿ ಅವನಿಂದೊಂದು ತತ್ವ ತಿಳಿಯಲಿಲ್ಲೊ ।
ಚದುರೆಯರು ನಮ್ಮ ಬಿಟ್ಟು ಕದಲನಿವನೆಂತೆಂಬ ಮುದದಿ ಮೋಸಹೋದೆವೊ ।
ಮಧುರೆಯಿಂದೆಮ್ಮ ತಮ್ಮ ಹೃದಯದೊಳಿಪ್ಪನೆಂದು ಚದುರ ಪೇಳಿಹನಂತೆಲೊ॥

ಮತಿ ತಪ್ಪಿದೆವೊ ನಾವು ಸತಿಯರೆಲ್ಲೊಂದಾಗಿ ರಥವ ನಿಲಿಸದೆ ಹೋದೆವೊ ।
ಹಿತರಾರು ನಮಗೆ ಸಾರಥಿ ನಿನ್ನ ಸಹಾಯ ದೂರೆತರೆತನವ ಮಾಳ್ಪೆವೊ ।
ಪಥವ ತೋರಿಸೊ ನಮಗೆ ಮುಂದೆಮ್ಮ ಚೆಲ್ವ ಶ್ರೀಪತಿಯು ಬಂದೊದಗುವಂತೆ।
ಗತಿಯಾರೊ ಅವನ್ಹೊರತು ಗೋಪಾಲವಿಠಲ ಅಚ್ಯುತನ ಮಹಿಮ ಕಾಣೆವೊ ।೫॥

ಗದ್ಯ

ಹೀಗೆ ಉದ್ಧವನ ಮುಂದೆ ಹೇಳಿ ಗೋಪಿಯರು ಪ್ರಲಾಪಿಸುತ್ತಿರಲು, ಅವರಿಗೆ ಸಮಾಧಾನ ಹೇಳಿ ಉದ್ಧವನು ಹೋದನು, ಮುಂದೆ ಪಾಂಡವರ ವಿಚಾರ ಮಾಡಲು ಅಕ್ರೂರನನ್ನು ಕಳುಹಿಸಿದನು. ಮುಂದೆ ರುಗ್ಮಿಣೀಸ್ವಯಂವರದ ವಾರ್ತೆ ಬಂದಿತು. ಬ್ರಾಹ್ಮಣನನ್ನು ಪತ್ರ ಕೊಟ್ಟು ದ್ವಾರಕೆಗೆ ಕಳುಹಿಸಿದಳು.

ಶ್ರುತ್ವಾ ಗುಣಾನ್ ಭುವನಸುಂದರಸಂಗಮಾಂಸ್ತೇ
ನಿರ್ವಿಶ್ಯ ಕರ್ಣವಿವರಂ ಹರತೋಽಂಗತಾಪಮ್ ।
ರೂಪಂ ಪರಂ ಭುವನಮಂಗಲ ಮಂಗಲಂ ತೇ
ತ್ವಯ್ಯಚ್ಯುತಾ ವಿಶತಿ ಚಿತ್ತಮಪತ್ರಪಂ ಮೇ ॥೧॥

ಕಾ ತ್ವಾ ಮುಕುಂದ ಮಹತೀ ಗುಣಶೀಲರೂಪ-
ವಿದ್ಯಾವಯೋದ್ರವಿಣಧಾಮಭಿರಾತ್ಮತುಲ್ಯಮ್ ।

ಧೀರಾ ಪತಿಂ ಕುಲವತೀ ನ ವೃಣೀತ ಕನ್ಯಾ
ಕಾಲೇ ನೃಸಿಂಹ ನರಲೋಕ ಮನೋಭಿರಾಮಮ್ ॥೨॥

ತನ್ಮೇ ಭವಾನ್ ಖಲು ವೃತಃ ಪತಿರಂಗ ಜಾಯಾ
ಮಾತ್ಮಾರ್ಪಿತಶ್ಚ ಭವತೋಽತ್ರ ವಿಭೋ ವಿದೇಹಿ ।
ಮಾ ವೀರಭಾಗಮಭಿಮರ್ಶತು ಚೈದ್ಯ ಆರಾತ್
ಗೋಮಾಯುವತ್ ಮೃಗಪತೇರ್ಬಲಿಮಂಬುಜಾಕ್ಷ ॥೩॥

ಪೂರ್ತೇಷ್ಟದತ್ತನಿಯಮವ್ರತದೇವವಿಪ್ರ
ಗುರ್ವರ್ಚನಾದಿಭಿರಲಂ ಭಗವಾನ್ ಪರೇಶಃ ।
ಆರಾಧಿತೋ ಯದಿ ಗದಾಗ್ರಜ ಏತ್ಯ ಪಾಣಿಂ
ಗೃಹ್ಣಾತು ಮೇ ನ ಧಮಘೋಷಸುತಾದಯೋಽನ್ಯೇ ॥೪॥

ಶ್ವೋಭಾವಿನಿ ತ್ವಮಜಿತೋದ್ವಹನೇ ವಿದರ್ಭಾನ್
ಗುಪ್ತಃ ಸಮೇತ್ಯ ಪೃತನಾಪತಿಭಿಃ ಪರೀತಃ ।
ನಿರ್ಮಥ್ಯ ಚೈದ್ಯಮಗಧೇಂದ್ರಬಲಂ ಪ್ರಸಹ್ಯ
ಮಾಂ ರಾಕ್ಷಸೇನ ವಿಧಿನೋದ್ವಹ ವೀರಶುಲ್ಕಾಮ್ ॥೫॥

ಅಂತಃಪುರಾಂತರಚರೀನನಿಹತ್ಯಬಂಧೂನ್
ತ್ವಾಮುದ್ವಹೇ ಕಥಮಿತಿ ಪ್ರವದಾಮ್ಯುಪಾಯಮ್ ।
ಪೂರ್ವೇದ್ಯುರಸ್ತಿ ಮಹತೀ ಕುಲದೇವಯಾತ್ರಾ
ಯಸ್ಮಾಂಬಹಿರ್ನವವಧೂರ್ಗಿರಿಜಾಮುಪೇಯಾತ್ ॥೬॥

ಯಸ್ಯಾಂಘ್ರಿಪಂಕಜರಜಃಸ್ನಪನಂ ಮಹಾಂತಃ
ವಾಂಛಂತ್ಯುಮಾಪತಿರಿವಾತ್ಮತಮೋಽಪಹತ್ಯೈ ।
ಯರ್ಹ್ಯಂಬುಜಾಕ್ಷ ನ ಲಭೇಯ ಭವತ್ಪ್ರಸಾದಂ
ಜಹ್ಯಾಮಸೂನ್ ವ್ರತಕೃಶಾನ್ ಶತಜನ್ಮಭಿಃ ಸ್ಯಾಮ್ ॥೭॥

ಬ್ರಾಹ್ಮಣ ಕೊಟ್ಟ ಪತ್ರವನ್ನು ಓದಿ ಅಲ್ಲಿಗೆ ಬಂದು ರುಕ್ಮಿಣಿಯನ್ನು ಕರೆದುಕೊಂಡು ಬಂದನು. ಅವಳ ಅಣ್ಣ ರುಕ್ಮ ಬೆನ್ನಹತ್ತಿ ಬರಲು ಅವನಿಗೆ ಅಪಮಾನಮಾಡಿ ಕಳಿಸಿದನು. ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಡಬೇಕೆಂದು ಅವಳ ಅಣ್ಣ

ಮಾಡಿದ್ದನು. ರುಕ್ಮಿಣಿಯ ಸ್ವಯಂವರವಾಯಿತು. ಮುಂದೆ ಕಾಲಯವನನನ್ನು ಮುಚುಕುಂದನಿಂದ ಸಂಹಾರಮಾಡಿಸಿದನು. ಆಮೇಲೆ ಸತ್ರಾಜಿತ ತಪಸ್ಸು ಮಾಡಿ ಸೂರ್ಯನಿಂದ ಸ್ಯಮಂತಕಮಣಿಯನ್ನು ಪಡೆದಿದ್ದ. ಅದು ದಿನಕ್ಕೆ ಎಂಟು ಭಾರ ಭಂಗಾರವನ್ನು ಕೊಡುತ್ತಿತ್ತು. ಒಮ್ಮೆ ಶ್ರೀಕೃಷ್ಣನು ಆ ಮಣಿಯನ್ನು ಕೇಳಿದ್ದನು. ಹೀಗಿರುವಾಗ ಸತ್ರಾಜಿತನ ತಮ್ಮ ಪ್ರಸೇನನು ಆ ಮಣಿಯನ್ನು ಕೊರಳಲ್ಲಿ ಹಾಕಿಕೊಂಡು ಬೇಟೆಗೆ ಹೋಗಿದ್ದನು. ಅಲ್ಲಿ ಸಿಂಹವು ಅವನನ್ನು ಕೊಂದು ಮಣಿಯನ್ನು ಒಯ್ಯುವಾಗ ಜಾಂಬವಂತ ಸಿಂಹವನ್ನು ಕೊಂದು ಆ ಮಣಿಯನ್ನು ತಂದು ತನ್ನ ಮಗುವಿನ ತೊಟ್ಟಿಲಿಗೆ ಕಟ್ಟಿದನು. ಆಗ ಸತ್ರಾಜಿತನು ತನ್ನ ತಮ್ಮನನ್ನು ಕೊಂದು ಶ್ರೀಕೃಷ್ಣನು ಆ ಮಣಿಯನ್ನು ಒಯ್ದಿದ್ದಾನೆ ಅನ್ನಲು ಪರಮಾತ್ಮನು ತನ್ನ ಜೊತೆ ಸ್ವಲ್ಪ ಜನರನ್ನು ಕರೆದುಕೊಂಡು ಹೋಗಿ ಪ್ರಸೇನನು ಸತ್ತ ಸ್ಥಳ, ಮುಂದೆ ಸಿಂಹದ ಹೆಜ್ಜೆ ಸಿಂಹಸತ್ತು ಬಿದ್ದಿದ್ದು ಅಲ್ಲಿ ಕರಡಿಯ ಹೆಜ್ಜೆಯನ್ನು ನೋಡುತ್ತಾ ಗುಹಾದಲ್ಲಿ ಹೊಕ್ಕನು. ಅಲ್ಲಿ ಜಾಂಬುವಂತನ ಜೊತೆ ೧೮ ದಿನ ಯುದ್ಧವನ್ನು ಮಾಡಿ ಅವನನ್ನು ಸೋಲಿಸಿದನು. ಇವನು ಪರಮಾತ್ಮ ಅಂತಾ ತಿಳಿದು ತನ್ನ ಮಗಳಾದ ಜಾಂಬವತಿಯನ್ನು ಮಣಿಯನ್ನು ಕೊಟ್ಟನು. ಮಣಿಯನ್ನು ಸತ್ರಾಜಿತನಿಗೆ ಕೊಡಲು ಸತ್ರಾಜಿತನು ತನ್ನ ಮಗಳಾದ ಸತ್ಯಭಾಮಾದೇವಿಯನ್ನು ಆ ಮಣಿಯನ್ನು ಕೊಡಲು ಆ ಮಣಿಯು ಬೇಡವೆಂದು ತಿರುಗಿ ಕೊಟ್ಟನು. ತರುವಾಯ ಪಾಂಡವರು ಅರಗಿನ ಮನೆಯಲ್ಲಿ ಸುಟ್ಟರು ಎಂಬ ವಾರ್ತೆಯನ್ನು ಕೇಳಿ ಶ್ರೀಕೃಷ್ಣನು ಅದು ಸುಳ್ಳು ಇದ್ದರೂ ಹಸ್ತಿನಾವತಿಗೆ ಹೋಗಿ ಧೃತರಾಷ್ಟ್ರನನ್ನು ಮಾತನಾಡಿಸಿ-ಕೊಂಡು, ದ್ರೌಪದಿ ಸ್ವಯಂವರಕ್ಕೆ ಹೋದನು. ಇತ್ತ ಶತಧನ್ವನು ಸತ್ರಾಜಿತನು ತನಗೆ ತನ್ನ ಮಗಳನ್ನು ಕೊಡುತ್ತೇನೆ ಎಂದು ಹೇಳಿ ಕೊಡಲಿಲ್ಲವೆಂದು ಸತ್ರಾಜಿತನನ್ನು ಕೊಂದು ಮಣಿಯನ್ನು ತೆಗೆದುಕೊಂಡು ಓಡಿಹೋಗಲು ಕೃಷ್ಣನಿಗೆ ಸುದ್ದಿ ತಿಳಿಯಿತು. ದ್ರೌಪದಿಯ ಸ್ವಯಂವರ ಮುಗಿಸಿಕೊಂಡು ಕುಂತಿಯನ್ನು ಭೇಟಿಯಾಗಿ ಸತ್ರಾಜಿತನ ಮನೆಗೆ ಬಂದು ಶತಧನ್ವನನ್ನು ಕೊಂದು ಮಣಿಯನ್ನು ನೋಡಲು ಅವನಲ್ಲಿ ಇರಲಿಲ್ಲ. ಬಲರಾಮನು ಒಮ್ಮೆ ಆ ಮಣಿಯನ್ನು ಬೇಡಿದ್ದ. ಕೃಷ್ಣನೇ ತೆಗೆದುಕೊಂಡಿರಬಹುದು ಎಂದು ಸಿಟ್ಟು ಬಂದು ಬಲರಾಮ ಬೇರೆ ಕಡೆಗೆ ವಾಸ ಮಾಡಲು ಹೋದನು. ಕೃಷ್ಣನು ಅಕ್ರೂರನನ್ನು ಕರೆಯಿಸಿ ಆ ಮಣಿಯನ್ನು ಬಲರಾಮನಿಗೆ ತೋರಿಸಿ ತನ್ನ ಮೇಲೆ ಬಂದ ಸಂಶಯವನ್ನು ನಿವಾರಿಸಿಕೊಂಡು,

ಆ ಮಣಿಯನ್ನು ಅಕ್ರೂರನಿಗೆ ಕೊಟ್ಟು ಕಳುಹಿಸಿದನು. ಮುಂದೆ ಇಂದ್ರಪ್ರಸ್ಥಕ್ಕೆ ಹೋಗಿ ಪಾಂಡವರು ಸೌಖ್ಯವಾಗಿ ಇರುವುದನ್ನು ನೋಡಿ ಅಲ್ಲಿಯೇ ಸ್ವಲ್ಪ ದಿನವಿದ್ದು ಒಂದು ದಿನ ಅರ್ಜುನನೊಡನೆ ಬೇಟೆಗೆ ಯಮುನಾತೀರದಲ್ಲಿ ಇರುವ ವನಕ್ಕೆ ಹೋಗಿ ಅಲ್ಲಿ ಕಾಳಿಂದಿ ಕೃಷ್ಣನೇ ಗಂಡನಾಗಬೇಕೆಂದು ತಪಸ್ಸು ಮಾಡುತ್ತಿದ್ದಳು. ಅವಳನ್ನು ಮದುವೆಯಾಗಿ, ಮಿತ್ರವೃಂದಾಸ್ವಯಂವರಕ್ಕೆ ಹೋಗಿ ಅವಳನ್ನು ಜಯಿಸಿ ಮುಂದೆ ನಗ್ನಜಿತ್ ರಾಜನ ಬಳಿಯಿದ್ದ ಏಳು ಗೂಳಿಗಳನ್ನು ಜಯಿಸಿ ನೀಲಾದೇವಿಯನ್ನು ಮದುವೆಯಾದನು. ಆಮೇಲೆ ಮತ್ಸ್ಯಯಂತ್ರವನ್ನು ಭೇದಿಸಿ ಲಕ್ಷಣಾದೇವಿಯನ್ನು ಮದುವೆಯಾದನು. ಈ ರೀತಿಯಾಗಿ ರುಕ್ಮಿಣಿ, ಸತ್ಯಭಾಮಾ, ಜಾಂಬುವಂತಿ, ಕಾಲಿಂದಿ, ಮಿತ್ರವಿಂದಾ, ನೀಲಾ, ಭದ್ರಾ ಮತ್ತು ಲಕ್ಷಣಾ ಇವರನ್ನು ಮದುವೆಯಾದನು. ಇವರಿಗೆ ಅಷ್ಟಮಹಿಷಿಯರೆಂದು ಹೆಸರು. ನಾರದರು ಒಂದು ಪಾರಿಜಾತದ ಹೂವನ್ನು ತಂದು ಕೊಡಲು ರುಕ್ಮಿಣಿಗೆ ಮುಡಿಸಿದನು. ಆ ಸುದ್ದಿಯು ಸತ್ಯಭಾಮೆಗೆ ತಿಳಿಯಲು ಅವಳು ಸಿಟ್ಟಿಗೆದ್ದವಳಂತೆ ನಟನೆ ಮಾಡಿದಳು. ಇಬ್ಬರೂ ಲಕ್ಷ್ಮಿಯ ರೂಪಗಳೇ. ಮರ್ತ್ಯಸ್ತ್ರೀಯರ ಸ್ವಭಾವವನ್ನು ತೋರಿಸಲು ನಟನೆ ಮಾಡುತ್ತಿದ್ದಾರಷ್ಟೆ. ಸತ್ಯಭಾಮಾಳನ್ನು ಕರೆದುಕೊಂಡು ಹೋಗಿ ನರಕಾಸುರನನ್ನು ಕೊಂದು ಅವನ ಮಗ ಭಗದತ್ತನಿಗೆ ರಾಜ್ಯವನ್ನು ಕೊಟ್ಟ, ನರಕಾಸುರ ತಂದಿಟ್ಟುಕೊಂಡಿದ್ದ ೧೬,೧೦೦ ಸ್ತ್ರೀಯರನ್ನು ಬಂಧನದಿಂದ ಬಿಡಿಸಿ ಅವರನ್ನು ಮದುವೆಯಾದನು. (ಇವರೆಲ್ಲರೂ ಅಗ್ನಿಪುತ್ರರು. ಪರಮಾತ್ಮನ ಅಂಗಸಂಗವನ್ನು ಬಯಸಿ ಸ್ತ್ರೀಯರಾಗಿದ್ದರು) ಮುಂದೆ ಸತ್ಯಭಾಮೆಯನ್ನು ಕರೆದುಕೊಂಡು ಇಂದ್ರಲೋಕಕ್ಕೆ ಹೋಗಿ ಅಲ್ಲಿದ್ದ ಪಾರಿಜಾತ ವೃಕ್ಷವನ್ನು ಕೀಳಲು, ಎಲ್ಲರೂ ಯುದ್ಧಕ್ಕೆ ಬರಲು ಸೋಲಿಸಿ ಇಂದ್ರನ ಗರ್ವವನ್ನು ಮುರಿದನು. ಅವನಿಂದ ಪೂಜೆಗೊಂಡು ವೃಕ್ಷವನ್ನು ತಂದನು. ಮುಂದೆ ರುಕ್ಮಿಣಿಗೆ ಪ್ರದ್ಯುಮ್ನ ಹುಟ್ಟಿದನು. ನಾರದರು ಶಂಬರಾಸುರನಿಗೆ ಪ್ರದ್ಯುಮ್ನನಿಂದ ನಿನಗೆ ಮರಣ ಎಂದು ಹೇಳಲು, ಆ ಮಗುವನ್ನು ಎತ್ತಿಕೊಂಡು ಹೋಗಿ ಸಮುದ್ರದಲ್ಲಿ ಹಾಕಲು ಮೀನು ನುಂಗಿ, ಆ ಮೀನು ಶಂಬರಾಸುರನಿಗೆ ಸಿಕ್ಕ ಅಲ್ಲಿ ಮಾಯಾವತಿಯೇ ಜೋಪಾನ ಮಾಡಿದಳು. ಮಾಯಾವತಿಯೇ ರತಿ. ಪ್ರದ್ಯುಮ್ನನೇ ಕಾಮ. ರತಿಯು ದ್ರೌಪದಿಗೆ ಐದು ಗಂಡಂದಿರೆಂದು ಅಪಹಾಸ್ಯ ಮಾಡಲು ಬ್ರಹ್ಮದೇವರು ರತಿಗೆ ನೀನು ಅಸುರನಿಂದ ದೂಷಿತಳಾಗು ಅಂತಾ

ಶಾಪಕೊಟ್ಟಿದ್ದರು. ಮುಂದೆ ಪ್ರದ್ಯುಮ್ನನು ದೊಡ್ಡವನಾಗಿ ಮಾಯಾವತಿಯಿಂದ ಮಾಯಾಯುದ್ಧವನ್ನು ಕಲಿತು ಶಂಬರಾಸುರನನ್ನು ಸಂಹಾರಮಾಡಿ ದ್ವಾರಕಾ-ಪಟ್ಟಣಕ್ಕೆ ಬಂದು ತಂದೆತಾಯಿಯನ್ನು ಕೂಡಿದನು. ಪಾಂಡವರು ಸತ್ತಿಲ್ಲ ಅವರಿಗೆ ರಾಜ್ಯವನ್ನು ಕೊಡಿರಿ ಎಂದು ಹೇಳಿ ಅವರನ್ನು ರಾಜ್ಯಕ್ಕೆ ತಂದನು ಶ್ರೀಕೃಷ್ಣ. ಹೀಗೆ ಪಾಂಡವರು ರಾಜ್ಯವಾಳುತ್ತಿರುವಾಗ ನಾರದರು ಬಂದರು. 'ಧರ್ಮರಾಜ ನಿನ್ನ ತಂದೆಗೆ ಸದ್ಗತಿಯಾಗಿಲ್ಲ. ನೀನು ರಾಜಸೂಯಯಾಗ ಮಾಡು ಎಂತಾ ನಿಮ್ಮ ತಂದೆ ಹೇಳಿ ಕಳುಹಿಸಿದ್ದಾನೆ' ಅಂತಾ ಹೇಳಿದರು. ಧರ್ಮರಾಜನು ಶ್ರೀಕೃಷ್ಣನನ್ನು ಕರೆಸಿದನು. ಆಗ ಶ್ರೀಕೃಷ್ಣನು ಭೀಮಸೇನದೇವರಿಂದ ಜರಾಸಂಧನನ್ನು ಕೊಲ್ಲಿಸಿದನು. ಪಾಂಡವರು ಎಲ್ಲಾ ರಾಜ್ಯಗಳಿಗೆ ಹೋಗಿ ಸಮಗ್ರಧನಧಾನ್ಯಗಳಿಸಿ ರಾಜಸೂಯಯಾಗ ಮಾಡಿದರು. ಅವರ ಧನವನ್ನು ನೋಡಿ ದುರ್ಯೋಧನನು ಹೊಟ್ಟೆ ಕಿಚ್ಚಿನಿಂದ ಮತ್ತೆ ಪಗಡೆಯಾಡಿ ಪಾಂಡವರನ್ನು ಮೋಸದಿಂದ ಸೋಲಿಸಿ ವನಕ್ಕೆ ಕಳುಹಿಸಿದನು. ವನವಾಸವನ್ನು ಮುಗಿಸಿಕೊಂಡು ಬಂದು ಕೌರವರೊಡನೆ ಯುದ್ಧಮಾಡಿ ಎಲ್ಲ ದುಷ್ಟರನ್ನೂ ಸಂಹರಿಸಿ, ಪಾಂಡವರು ರಾಜ್ಯವಾಳಹತ್ತಿದರು. ಶ್ರೀಕೃಷ್ಣನು ಅವರಿಂದ ಬೀಳ್ಕೊಂಡು ದ್ವಾರಕೆಗೆ ಹೋದಾಗ, ಅಲ್ಲಿ ಯಾದವರು ಬ್ರಾಹ್ಮಣರ(ಋಷಿಗಳ) ಶಾಪದಿಂದ ಪರಸ್ಪರ ಬಡಿದಾಡಿ ಮೃತರಾದರು. ಬಲರಾಮನು ತನ್ನ ಮೂಲರೂಪವನ್ನು ಸೇರಿದನು. ಆಮೇಲೆ ಶ್ರೀಕೃಷ್ಣನು ಎಲ್ಲ ದೈತ್ಯರ ಸಂಹಾರಮಾಡಿದನು. 'ಭೂಭಾರಹರಣ ಮುಗಿಯಿತು, ನಾನು ಇನ್ನು ವೈಕುಂಠಕ್ಕೆ ಹೋಗುತ್ತೇನೆ' ಎಂದು ಹೇಳಿದನು. ಇಲ್ಲಿಗೆ ದಶಮಸ್ಕಂಧ ಮುಗಿಯಿತು.

ಏಕಾದಶಸ್ಕಂಧ

ಶ್ರೀಕೃಷ್ಣ ಉದ್ಧವರ ಸಂವಾದ, ಪಾಂಡವರು ಪರೀಕ್ಷಿತರಾಜನಿಗೆ ಪಟ್ಟಕಟ್ಟಿ ಪರಂಧಾಮಕ್ಕೆ ತೆರಳಿದರು

ಶ್ರೀಕೃಷ್ಣನು ಉದ್ಧವನಿಗೆ ಉಪದೇಶಮಾಡಿದನು. ಮೋಕ್ಷಕ್ಕೆ ಸಾಧನ ಭಕ್ತಿಯೊಂದೇ. ಸರ್ವಾಂಗಸುಂದರನಾದ ಭಗವಂತನನ್ನು ಏಕಾಂತದಲ್ಲಿ ಧ್ಯಾನಮಾಡಬೇಕು ಅಂತಾ ಹೇಳಿ ಒಂದು ಕಥೆಯನ್ನು ಹೇಳಿದನು. ಒಬ್ಬ ಮನುಷ್ಯನು(ಭಿಕ್ಷುವು) ಆನಂದದಿಂದ ರಸ್ತೆಯಲ್ಲಿ ಇರಲು 'ಅವನಿಗೆ ದುಃಖಾದಿಗಳು ಇಲ್ಲವೇ' ಅಂತಾ ಕೇಳಲು '[illegible]

೨೪ ಮಂದಿ ಗುರುಗಳು ಇದ್ದಾರೆ. ಅವರಲ್ಲಿ ಒಬ್ಬೊಬ್ಬರಲ್ಲಿರುವ ಸದ್ಗುಣಗಳನ್ನು ತಿಳಿದು ನಾನು ದುಃಖಾದಿಗಳಿಲ್ಲದೇ ಆನಂದದಿಂದ ಇರುವೆ' ಅಂತಾ ಹೇಳಿದನು. 'ಇದರಿಂದ ನೀವು ಮೋಕ್ಷಕ್ಕೆ ಹೋಗಬೇಕಾದರೆ ಅವರ ಎಲ್ಲ ಗುಣಗಳು ನಮ್ಮಲ್ಲಿ ಬಂದು ಸಾಧನವಾಗಿ ದೇಹ ಪರಿಪಕ್ವವಾಗಿ ಮೋಕ್ಷಸಾಧನವಾಗುತ್ತದೆ' ಅಂತಾ ಹೇಳಿದನು. ವರ್ಣಾಶ್ರಮಧರ್ಮವನ್ನು ಹೇಳಿದನು. ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ ಇವುಗಳನ್ನು ತಿಳಿಸಿ ಒಂದು ಒಳ್ಳೆಯ ಕಾರ್ಯ ಮಾಡಬೇಕಾದರೆ ಭಗವಂತನಲ್ಲಿ ಭಕ್ತಿ ಇರಬೇಕು. ಇತ್ಯಾದಿ ಪ್ರಮೇಯಗಳನ್ನು ತಿಳಿಸಿದನು. ಉದ್ಧವನಿಗೆ ಬದರಿಕಾಶ್ರಮಕ್ಕೆ ಹೋಗಲು ಹೇಳಿದನು. ಉದ್ಧವನು ಭಗವಂತನಿಗೆ ಪ್ರದಕ್ಷಿಣೆ ಮಾಡಿ ಅವನ ಪಾದದಲ್ಲಿ ಶಿರಸ್ಸನ್ನು ಇಟ್ಟು ಕಣ್ಣೀರನ್ನು ಸುರಿಸಿ ಅವನ ಪಾದುಕೆಗಳನ್ನು ತಲೆಯ ಮೇಲೆ ಇಟ್ಟುಕೊಂಡು ಪುನಃ ಪುನಃ ನಮಸ್ಕಾರ ಮಾಡಿ ಬದರಿಕಾಶ್ರಮಕ್ಕೆ ಹೋದನು. ಮುಂದೆ ಭಗವಂತನು ವೈಕುಂಠಕ್ಕೆ ಪ್ರಯಾಣ ಮಾಡಿದನು. ರುಗ್ಮಿಣೀ, ಸತ್ಯಭಾಮೆಯರು ನಿಜರೂಪ-ಗಳಾಗಿದ್ದರಿಂದ ತಮ್ಮ ಮೂಲರೂಪವನ್ನು ಸೇರಿದರು. ಷಣ್ಮಹಿಷಿಯರು ಅಗ್ನಿಪ್ರವೇಶಮಾಡಿದರು. ೧೬,೦೦೦ ಮಂದಿ ಸ್ತ್ರೀಯರು ಅಹಂಕಾರ ಪಟ್ಟಿದ್ದರಿಂದ ಮ್ಲೇಚ್ಛರ ವಶರಾಗಿರಿ ಎಂದು ಭಗವಂತನು ಶಾಪಕೊಟ್ಟಿದ್ದನು. ಅವರೆಲ್ಲರನ್ನೂ ಅರ್ಜುನನು ಕರೆದುಕೊಂಡು ಹೋಗುವಾಗ ಮ್ಲೇಚ್ಛರು ಬಂದು ಯುದ್ಧಮಾಡಿ ಅರ್ಜುನನನ್ನು ಸೋಲಿಸಿ ಅವರನ್ನು ಕರೆದುಕೊಂಡು ಹೋದರು. ಶ್ರೀಕೃಷ್ಣನು ದಾರುಕರನ್ನು ಕಳುಹಿಸಿ ಅವರಿಗೆ ಉಪದೇಶಮಾಡಿಸಿದನು. ಮುಂದೆ ವಾಯುದೇವರ ಅಶರೀರವಾಣಿಯನ್ನು ಕೇಳಿ ಸರಸ್ವತೀ ನದಿಯಲ್ಲಿ ಮುಳುಗಿ ತಮ್ಮ ಮೂಲರೂಪ ಎಂದರೆ ಅಗ್ನಿಪುತ್ರರೂಪವನ್ನು ಸೇರಿದರು. ಅರ್ಜುನನು ಧರ್ಮರಾಜನಿಗೆ ಸುದ್ದಿ ಹೇಳಲು, ಅವರು ಪರೀಕ್ಷಿತರಾಜನಿಗೆ ರಾಜ್ಯವನ್ನು ಕೊಟ್ಟು, ತಮ್ಮ ಮೂಲರೂಪವನ್ನು ಸೇರಿದರು'.ಇಲ್ಲಿಗೆ ಏಕಾದಶಸ್ಕಂಧ ಮುಗಿಯಿತು.

ದ್ವಾದಶಸ್ಕಂಧ

ಸರ್ಪಯಾಗ ಮತ್ತು ಮಾರ್ಕಂಡರಾಯನ ಚರಿತ್ರೆ; ಪರೀಕ್ಷಿತನ ದೇಹತ್ಯಾಗ

ಶುಕಾಚಾರ್ಯರು ಹೇಳಿದ್ದು ಕೇಳಿ ಪರೀಕ್ಷಿತರಾಜನು ಅವರಿಗೆ ನಮಸ್ಕರಿಸಿದನು. 'ರಾಜಾ ನೀನು ಹೆದರಬೇಡ. ಧ್ಯಾನವನ್ನು ಮಾಡುತ್ತಾ ನಿನ್ನ ದೇಹವನ್ನು

ಬಿಡುವುದಕ್ಕೂ, ತಕ್ಷಕನು ಬಂದು ಕಚ್ಚುವುದಕ್ಕೂ ಸರಿಯಾಗುತ್ತದೆ. ನಿನಗೆ ಯಾವ ದೋಷವೂ ಬರುವುದಿಲ್ಲ. ಮತ್ತು ಬ್ರಾಹ್ಮಣರ ಶಾಪ ಸುಳ್ಳಾಗುವುದಿಲ್ಲ'ವೆಂದು ಹೇಳಿ ಹೋದರು. ಇತ್ತಲಾಗಿ ಧ್ಯಾನದಲ್ಲಿ ಮಗ್ನನಾಗಿ ತನ್ನ ದೇಹವನ್ನು ಬಿಡುವುದಕ್ಕೂ ತಕ್ಷಕನು ಕಚ್ಚುವುದಕ್ಕೂ ಸರಿಯಾಗಿ ದೇಹ ಭಸ್ಮವಾಗಿ ಹೋಯಿತು. ಇದನ್ನು ಅವನ ಮಗ ಜನಮೇಜಯನು ಕೇಳಿ, ತಂದೆಗೆ ತಕ್ಷಕನು ಕಚ್ಚಿದ್ದಕ್ಕೆ ಕೋಪದಿಂದ ಸರ್ಪಯಾಗವನ್ನು ಮಾಡಲು ಹತ್ತಿದನು.

ಜನಮೇಜಯರಾಯನು ಸರ್ಪಯಾಗ ಮಾಡಿಸಲು ಎಲ್ಲ ಸರ್ಪಗಳು ಬಂದು ಬೀಳಲು ತಕ್ಷಕನು ಇಂದ್ರದೇವರಲ್ಲಿ ಮೊರೆ ಹೋಗಿದ್ದನು. ಎಲ್ಲ ಸರ್ಪಗಳು ಬಂದರು ತಕ್ಷಕನು ಬರಲಿಲ್ಲವೆಂದು ಋಷಿಗಳನ್ನು ಕೇಳಲು ಅವನು ಇಂದ್ರನಲ್ಲಿ ಮೊರೆಹೋಗಿದ್ದಾನೆ ಎನ್ನಲು, ಇಂದ್ರನ ಸಹಿತ ತಕ್ಷಕನು ಯಾಗದಲ್ಲಿ ಬಂದು ಬೀಳಲಿ ಎಂದು ಜನಮೇಜಯರಾಜನು ಹೇಳಿದನು. ಆಗ ಆಸ್ತೀಕರು ಬಂದು ಸರ್ಪಯಾಗವನ್ನು ನಿಲ್ಲಿಸು. ಇದು ದೊಡ್ಡ ಪಾಪ. ನಿನ್ನ ತಂದೆ ಮರಣ-ಹೊಂದಿದರೂ ಸಹ ಅವರಿಗೆ ದುರ್ಮರಣವಾಗಿಲ್ಲ ಎಂತಾ ಹೇಳಿದರು. ಆಮೇಲೆ ಸರ್ಪಯಾಗವನ್ನು ಮುಗಿಸಿದರು. (ಸರ್ಪಯಾಗದ ವಿಷಯವು ಮಹಾಭಾರತದಲ್ಲಿ ಬಂದಿದೆ).

ಮುಂದೆ ಸೂತಪುರಾಣಿಕರು ಕಲಿಯುಗದ ಲಕ್ಷಣಗಳನ್ನು ಹೇಳಿದರು. ಕಲಿಯುಗದಲ್ಲಿ ಧರ್ಮವು ಹ್ರಾಸವಾಗುತ್ತಾ ಹೋಗುವುದು. ಆದ್ದರಿಂದ ಎಚ್ಚರಿಕೆಯಿಂದ ಇರಬೇಕು. ಕಲಿಯುಗದಲ್ಲಿ ನಾಮಸ್ಮರಣೆಯು ಬಹಳ ಪ್ರಬಲ ಎಂದು ಉಪದೇಶಿಸಿದರು. ಮುಂದೆ ಮಾರ್ಕಂಡೇಯ ಚರಿತ್ರೆಯನ್ನು ಹೇಳಿದರು. ಮಾರ್ಕಂಡೇಯರು ಪುಷ್ಪಭದ್ರಾನದಿಯ ದಂಡೆಯ ಮೇಲೆ ತಪಸ್ಸು ಮಾಡುತ್ತಿರಲು ನರನಾರಾಯಣ ಪರಮಾತ್ಮನು ದರ್ಶನ ಕೊಟ್ಟನು. ಅವರು ನಿನಗೆ ಬೇಕಾದ ವರವನ್ನು ಕೇಳು ಎನ್ನಲು ಮಾರ್ಕಂಡೇಯರು ಪ್ರಳಯವನ್ನು ನೋಡಬೇಕಾಗಿದೆ ಎನ್ನಲು ಹಾಗೆಯೇ ಆಗಲಿ ಅಂತಾ ಅದೃಶ್ಯರಾದರು. ಮಾರ್ಕಂಡೇಯರು ಧ್ಯಾನಮಾಡುತ್ತಾ ಕುಳಿತಿರುವಾಗ, ಗುಡುಗು, ಸಿಡಿಲುಗಳೊಂದಿಗೆ ಮಳೆಯ ಶುರುವಾಯಿತು. ಸರ್ವತ್ರ ಮಳೆ ಸುರಿದು ಸಮುದ್ರ ಉಕ್ಕಿಬಂದು ಭೂಮಿಯು ಮುಳುಗಿ ಹೋಯಿತು. ಮಾರ್ಕಂಡೇಯರು ಹೆದರಿದರು. ಕತ್ತಲಾಗಿ ಮಾರ್ಕಂಡೇಯರು ನೀರಿನಲ್ಲಿ ಮುಳುಗುತ್ತಾ ತೇಲುತ್ತಾ

ಮುಳುಗುತ್ತಾ ಶ್ರಮಪಡುತ್ತಿರಲು ಒಂದು ಆಲದ ಎಲೆಯು ಕಾಣಿಸಿತು. ಅದನ್ನು ಹಿಡಿಯಲು ಹೋದಾಗ ಎಲೆಯ ಮೇಲೆ ಸಣ್ಣ ಕೂಸು ಕಾಣಿಸಿತು. ಆ ಕೂಡು ಒಂದು ಕೈಯಿಂದ ಕಾಲಿನ ಬೆಟ್ಟನ್ನು ಹಿಡಿದು ಚೀಪುತ್ತಿತ್ತು. ಸರ್ವಾಭರಣ-ಭೂಷಿತವಾದ ಮಗುವನ್ನು ನೋಡಿದರು.

ಪದ್ಯ

ನೀಲಮೇಘಶ್ಯಾಮಲಾಂಗದ। ಬಾಲಕನು ತನ್ನಂಗುಟಾಗ್ರವ। ಲೀಲೆಯಲಿ
ಮೀರುತ್ತ ಬಂತಾ ಬಹಳ ಜಲದೊಳಗೆ॥ ಆಲದೆಲೆಯೆಂದೆನಿಪ ಮಂಚದ ಮೇಲೆ
ಪವಡಿಸಿ ಇರುತಲಿಹವನ। ಆಲಿಯನು ಮುಲುಗಾಡುವಜನನು ಕಂಡನಾ ಮುನಿಪ

ಮಾರ್ಕಂಡೇಯರಿಗೆ ಆಶ್ಚರ್ಯವಾಗಿ ಆ ಮಗುವಿನ ಹಿಡಿಯಲು ಹೋದಾಗ ಆ ಮಗುವಿನ ಶ್ವಾಸದಿಂದ ಅದರ ಹೊಟ್ಟೆಯಲ್ಲಿ ಹೊಕ್ಕರು. ಮಗುವಿನ ದೇಹದಲ್ಲಿ ಭೂಮಿ ಸ್ವರ್ಗ, ಆಕಾಶ, ಸೂರ್ಯ,ಚಂದ್ರ, ಹಿಮಪರ್ವತ ಮತ್ತು ಪುಷ್ಪಭದ್ರಾ ನದಿ ಅಲ್ಲಿ ತಮ್ಮ ಗುಡಿಸಲು ನೋಡಿದರು. ಅಷ್ಟರಲ್ಲಿ ಮಗುವಿನ ದೇಹದಿಂದ ಹೊರಗೆ ಬಂದರು. ಎಲ್ಲವೂ ಮಾಯವಾಗಿ ತಮ್ಮ ಗುಡಿಸಲಲ್ಲಿ ತಪಸ್ಸು ಮಾಡುತ್ತಾ ಕುಳಿತಿದ್ದರು. ಮಾರ್ಕಂಡೇಯರು ಪರಮಾತ್ಮನ ಅಚಿಂತ್ಯಶಕ್ತಿಯನ್ನು ನೋಡಿ, ಅವನನ್ನೇ ಮೊರೆಹೋದರು. ಮತ್ತೆ ತಪಸ್ಸು ಮಾಡುತ್ತಾ ಕುಳಿತಾಗ ರುದ್ರದೇವರು ಪಾರ್ವತಿಸಹಿತ ಬಂದರು. ರುದ್ರದೇವರು ಹೃದಯದಲ್ಲಿ ಕಾಣಿಸಲು ಕಣ್ಣುತೆರೆದು ನೋಡಿದರು. ನಮಸ್ಕರಿಸಿದರು. ರುದ್ರದೇವರು ನಿಮಗೆ ಒಂದು ಕಲ್ಪದವರೆಗೆ ಆಯುಷ್ಯ, ತ್ರಿಕಾಲಜ್ಞಾನ ಮತ್ತು ವೈರಾಗ್ಯ ಲಭಿಸಲಿ ಎಂದು ವರವನ್ನು ಕೊಟ್ಟು ಹೋದರು. ಹೀಗೆ ಸೂತರು ಅನೇಕ ಭಗವನ್ಮಹಿಮೆಗಳನ್ನು ಹೇಳಿ ಭಾಗವತವು ಪರಮಪವಿತ್ರವೆಂದು ಹೇಳಿದರು. ಶುಕಾಚಾರ್ಯರು ಪರೀಕ್ಷಿತನಿಗೆ ಭಗವ-ನ್ಮಹಿಮೆಯನ್ನು ಹೇಳಿದ್ದನ್ನು ಸೂತರು ಶೌನಕಾದಿಗಳಿಗೆ ಹೇಳಿದರು.

ಇಲ್ಲಿಗೆ ಸೂತರು ಶೌನಕರಿಗೆ ಹೇಳಿದ ಸಂವಾದರೂಪದಲ್ಲಿರುವ
ಶ್ರೀಮದ್ಭಾಗವತವು ಮುಕ್ತಾಯವಾಯಿತು.

ಪತಿಯಂತರ್ಗತ ಗುರ್ವಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ-
ಶ್ರೀಲಕ್ಷ್ಮೀನಾರಾಯಣನಿಗೆ ಸಮರ್ಪಣೆ.

॥ ಶ್ರೀಮಧ್ವೇಶಾರ್ಪಣಮಸ್ತು ॥

|| ಶ್ರೀಹನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ||

ರಾಮಮಂಗಳಂ

ಶ್ರೀಮತ್ಸ್ಯಾಕೃತಿಕೂರ್ಮನಾಗಿ ವರಹಾ। ನರಸಿಂಹನೆಂದೆನಿಸಿದಾ।
ವಾಮನ ಭೃಗುವರ್ಯರಾಮ ರಘುಪಾ। ಯದುವಂಶದಲಿ ಜನಿಸಿದಾ।
ತಾ ಮತ್ತೆ ನಿಜ ಬೌದ್ಧ ಕಲ್ಕಿ ಎನಿಸಿ ತಾಳ್ದಾವತಾರಂಗಳಂ
ಶ್ರೀಮನೋಹರ ದೇವಕಿವಧುವರಾ। ಕುರ್ಯಾತ್ ಸದಾ ಮಂಗಲಂ ೧

ದಶರಥಾತ್ಮಜನಾದ ರಾಮ ಜನಿಸೀ। ಜನಕಾತ್ಮಜಾ ಸೀತೆಯಾ।
ಕುಶಲದೀ ನರಲೀಲೆಯಿಂದ ಮೆರೆವಾ। ವೈಭವಸಂಗತಿಯಾ ॥
ಉಸುರೀದ ಗುರು ಮಹೀಪತಿ ಸುತ ಕನ್ನಡಭಾಷೆ ಶ್ಲೋಕಂಗಳಂ
ವಸುಧೀಯಲಿ ಸ್ಮರಿಸುವರಿಗೆ ಕೊಡುವಾ ರಘುನಾಥ ಜಯಮಂಗಲಂ ೨

ಶ್ರೀಚಕ್ರಾಬ್ಜಮಂಡಲದ ಯಥಾಶಕ್ತಿವಿವರವು

ಶ್ರೀಚಕ್ರಾಬ್ಜಮಂಡಲವು ಅತ್ಯದ್ಭುತಚರಿತ್ರೆಯುಳ್ಳ ಕ್ಷರಾಕ್ಷರಜಗತ್ತಿಗೆ ಒಡೆಯನಾದ ವಿರಾಟ್‌ರೂಪಿ ಪರಮಾತ್ಮನ ಪೀಠವು.

|| ಶ್ರೀ ಘೃಣಿ ಶ್ರೀ ||

"ಘೃಣಿ" ದಯಾವಾನ್ ಸ್ವಾಮಿಯ ಮಂಗಳಕರವಾದ ನಾಮವು. ಮಧ್ಯವರ್ತುಲದಲ್ಲಿ ಪರಮಾತ್ಮನಿದ್ದಾನೆ. ಇದು ಸ್ವರೂಪದೇಹವು. ಚಕ್ರಾಬ್ಜ-ಮಂಡಲಕ್ಕೆ ಅಧಿದೈವ, ಅಧಿಭೂತ, ಅಧ್ಯಾತ್ಮ ಎಂದು ಮೂರುವಿಧ ಅರ್ಥವಿದೆ. ಏಳುಕೋಟಿ ಮಂತ್ರಾರ್ಥವಿದೆ. ತ್ರಿಕೋಣಮಂಡಲದಲ್ಲಿ ಮೂಲಸತ್ವ, ರಜ, ತಮೋಗುಣನಿಯಾಮಕರಾದ ಶ್ರೀದೇವಿಪತಿ ವಿಶ್ವ, ಭೂದೇವಿ ಪತಿ ತೈಜಸ, ದುರ್ಗಾಪತಿ ಪ್ರಾಜ್ಞರೂಪದಿಂದ ಸ್ವಾಮಿ ಇದ್ದಾನೆ. ಜ್ಞಾನ, ಇಚ್ಛಾ, ಕ್ರಿಯಾ ನಿಯಾಮಕರಾಗಿ ಶ್ರೀಂ, ಹ್ರೀಂ, ಕ್ಲೀಂ ಬೀಜಾಕ್ಷರರೂಪರಾಗಿದ್ದಾರೆ. ಇದೇ ಲಿಂಗದೇಹ. ಸೂರ್ಯಮಂಡಲ, ಚಂದ್ರಮಂಡಲ, ಅಗ್ನಿಮಂಡಲ. ಹೃದಯಸ್ಥಾನದ ಸ್ವಾಮಿಯ ಆವಾಸದಲ್ಲಿ ಲಕ್ಷ್ಮೀಹೊರತು ಅನ್ಯರಿಗೆ ಪ್ರವೇಶವಿಲ್ಲಾ.